## ಅಧ್ಯಾಯ–೧೩

# ಶಿಕ್ಷಣ ಮತ್ತು ಕ್ರೀಡೆ

ಧರ್ಮ, ಸಾಹಿತ್ಯ ಮತ್ತು ಸಂಸ್ಕೃತಿಗಳ ಪರಂಪರೆಯನ್ನು ಹೊಂದಿದ ಮಂಡ್ಯ ಜಿಲ್ಲೆಯಲ್ಲಿ ಪ್ರಾಚೀನ ಕಾಲದಿಂದಲೂ ಶಿಕ್ಷಣಕ್ಕೆ ಪ್ರಾಶಸ್ತ್ಯವಿದ್ದಿತು. ಖ್ಯಾತಿವೆತ್ತ ಹಲವಾರು ಶಿಕ್ಷಣ ಕೇಂದ್ರಗಳು ಇಲ್ಲಿ ಕಾರ್ಯ ನಿರ್ವಹಿಸುತ್ತಿದ್ದವು. ವೈದಿಕ ಶಿಕ್ಷಣ ಮೊದಲಿನಿಂದಲೂ ಪ್ರಚಾರದಲ್ಲಿದ್ದಿತು. ಮಕ್ಕಳ ಪ್ರಾಥಮಿಕ ಶಿಕ್ಷಣ ಸಾಮಾನ್ಯವಾಗಿ ಗುರುಕುಲಗಳಲ್ಲಿ ನಡೆಯುತ್ತಿತ್ತು. ಬ್ರಾಹ್ಮಣ ವಿದ್ಯಾರ್ಥಿಗಳು ಗ್ರಾಂಥಿಕ ಶಿಕ್ಷಣವನ್ನು, ಕ್ಷತ್ರಿಯರು ಆಡಳಿತ ಶಾಸ್ತ್ರ ಹಾಗೂ ಶಸ್ತ್ರಾಸ್ತ್ರಗಳ ಪರಿಚಯವನ್ನೂ ಮತ್ತು ಸಮರ ಕಾರ್ಯಾಚರಣೆ ಸಂಬಂಧಿತ ಸೈದ್ಧಾಂತಿಕ ಹಾಗೂ ಪ್ರಾಯೋಗಿಕ ಪಾಠಗಳನ್ನೂ ಕಲಿಯುತ್ತಿದ್ದರು. ವೈಶ್ಯರು ಮನೆಗಳಲ್ಲಿ ವಾಣಿಜ್ಯ ವಿದ್ಯೆಯನ್ನೂ ಗುರುಕುಲಗಳಲ್ಲಿ ಸಾಂಸ್ಕೃತಿಕ ಶಿಕ್ಷಣವನ್ನೂ ಪಡೆಯುತ್ತಿದ್ದರು. ಅನುವಂಶೀಯವಾಗಿದ್ದ ಕಸುಬುಗಳಲ್ಲಿ ಹಿರಿಯರು ತಂತಮ್ಮ ಕುಟುಂಬಗಳಲ್ಲಿಯೇ ಕಿರಿಯರಿಗೆ ಮಾರ್ಗದರ್ಶನ ನೀಡುತ್ತಿದ್ದರು. ಇವುಗಳ ಜತೆಗೆ ಹಲವಾರು ಜೈನ ಶಿಕ್ಷಣ ಕೇಂದ್ರಗಳೂ ಅಸ್ತಿತ್ವದಲ್ಲಿದ್ದು, ಇವುಗಳಲ್ಲಿ ಸಂತೆ ಬಾಚಹಳ್ಳಿಯ ಜೈನಮಠ ಪ್ರಮುಖವಾಗಿದ್ದಿತು. ಪಂಚಬಸದಿ ಹೊಂದಿದ ಕಂಬದ ಹಳ್ಳಿಯೂ ಪ್ರಮುಖ ಜೈನ ಕಲಿಕಾ ಕೇಂದ್ರವಾಗಿತ್ತು. ನಾಗಮಂಗಲ, ಮಂಡ್ಯ, ಕೃಷ್ಣರಾಜಪೇಟೆ, ಮಾದಾಪುರ, ಕಿಕ್ಕೇರಿ, ಅರ್ಜುನಪುರಿ ಮುಂತಾದ ಪ್ರಮುಖ ಅಗ್ರಹಾರಗಳು ಉಚಿತ ಶಿಕ್ಷಣ ಕೇಂದ್ರಗಳೂ ಆಗಿದ್ದವು.

ಇವಲ್ಲದೇ ಹಲವಾರು ದೇವಾಲಯಗಳೂ ವ್ಯವಸ್ಥಿತ ಶಿಕ್ಷಣ ಕೇಂದ್ರಗಳಾಗಿದ್ದವು. ಶ್ರೀರಾಮಾನುಜಾಚಾರ್ಯರು ಕೆಲಕಾಲ ನೆಲಸಿದ್ದ ತೊಣ್ಣೂರಿನ ಶ್ರೀ ನಾರಾಯಣಸ್ವಾಮಿ ದೇವಾಲಯ, ಶ್ರೀರಂಗಪಟ್ಟಣದ ಶ್ರೀರಂಗನಾಥ ದೇವಾಲಯ, ಶ್ರೀ ನರಸಿಂಹಸ್ವಾಮಿ ದೇವಾಲಯ, ನಾಗಮಂಗಲದ ಕೇಶವ ದೇವಾಲಯ, ಮಳವಳ್ಳಿಯ ಶ್ರೀ ನರಸಿಂಹಸ್ವಾಮಿ ದೇವಾಲಯ, ಬಿಂಡಿಗನವಿಲೆಯ ಶ್ರೀ ಕೇಶವ ದೇವಾಲಯ, ಮದ್ದೂರಿನ ಶ್ರೀ ನರಸಿಂಹಸ್ವಾಮಿ ದೇವಾಲಯ, ಬೆಳ್ಳೂರಿನ ಆದಿಮಾಧವ ದೇವಾಲಯ, ಮೇಲುಕೋಟೆಯ ಶ್ರೀ ಚೆಲುವನಾರಾಯಣ ದೇವಾಲಯ ಹಾಗೂ ಸಾಸಲು ಶ್ರೀ ಸೋಮೇಶ್ವರ ದೇವಾಲಯಗಳು ವಿವಿಧ ಕಾಲಗಳಲ್ಲಿ ಶಿಕ್ಷಣ ನೀಡುತ್ತಿದ್ದ ಉಲ್ಲೇಖನೀಯ ಕಲಿಕಾ ಕೇಂದ್ರಗಳಾಗಿದ್ದವೆಂದೂ ತಿಳಿದುಬರುತ್ತದೆ. ಇವುಗಳಲ್ಲಿ ಶಿಕ್ಷಣ ಉಚಿತವಾಗಿದ್ದು, ಅಧ್ಯಾಪಕರಿಗೆ ಸಂಭಾವನಾ ರೂಪದಲ್ಲಿ ಭೂದಾನ ನೀಡಲಾಗುತ್ತಿತ್ತೆಂದೂ ತಿಳಿದುಬರುತ್ತದೆ. ಈ ಎಲ್ಲಾ ಅಗ್ರಹಾರ ಹಾಗೂ ದೇವಾಲಯಗಳಲ್ಲಿ ನಡೆಯುತ್ತಿದ್ದ ಕಲಿಕಾ

ಕೇಂದ್ರಗಳಿಗೆ ರಾಜಮಹಾರಾಜರ ಬೆಂಬಲ ಪ್ರೋತ್ಸಾಹಗಳು ದೊರೆಯುತ್ತಿದ್ದವು. ಮೈಸೂರು ಒಡೆಯರ ಕಾಲಕ್ಕೆ ಹಲವಾರು ಕೇಂದ್ರಗಳು ಪುನಶ್ಚೇತನಗೊಂಡವು. ಇದರ ಪ್ರಭಾವ ಮಂಡ್ಯ ಜಿಲ್ಲೆಯ ಮೇಲೂ ಕಂಡು ಬಂದಿತು.

ಜಿಲ್ಲೆಯ ಗ್ರಾಮಾಂತರ ಪ್ರದೇಶದಲ್ಲಿ ಮಕ್ಕಳಿಗೆ ಓದು ಬರಹ ಕಲಿಸುವ ಶಾಲೆಗಳು ಅಸ್ತಿತ್ವದಲ್ಲಿದ್ದವು. ಮಕ್ಕಳ ಪೋಷಕರು ಧನಧಾನ್ಯಗಳ ರೂಪದಲ್ಲಿ ಬೋಧಕರಿಗೆ ಸಂಭಾವನೆ ನೀಡುತ್ತಿದ್ದರು. ಧನವಂತರು ತಮ್ಮ ಮಕ್ಕಳ ವಿದ್ಯಾಭ್ಯಾಸಕ್ಕೆ ತಂತಮ್ಮ ಮನೆಗಳಲ್ಲಿಯೇ ಶಿಕ್ಷಣ ನೀಡುವ ಏರ್ಪಾಡು ಮಾಡಿಕೊಂಡಿದ್ದರು. ಕೂಲಿ ಮಠಗಳೆಂದು ಕರೆಯಲ್ಪಡುತ್ತಿದ್ದ ಊರಿನ ಶಾಲೆಗಳು ಸಾಮಾನ್ಯವಾಗಿ ಛತ್ರ, ಚಾವಡಿ ಅಥವಾ ದೇವಸ್ಥಾನಗಳ ಜಗಲಿಗಳ ಮೇಲೆ ನಡೆಯುತ್ತಿದ್ದವು. ಓದು, ಬರಹ ಗಣಿತಗಳೇ ಅಲ್ಲದೇ ಇವುಗಳಲ್ಲಿ ರಾಮಾಯಣ, ಮಹಾಭಾರತ, ಗೀತೆ ಹಾಗೂ ಭಾಗವತ ಪಠಣವನ್ನೂ ಹೇಳಿಕೊಡಲಾಗುತ್ತಿತ್ತು.

ದೇವಾಲಯ, ಜಿನಾಯಗಳಿಗೆ ದತ್ತಿ ಹಾಗೂ ಅಗ್ರಹಾರಗಳಿಗೆ ಭೂಮಿಯ ಕೊಡುಗೆ ಮುಂತಾದ ವಿಷಯಗಳು ಶ್ರೀರಂಗಪಟ್ಟಣ, ಮೇಲುಕೋಟೆ, ಮದ್ದೂರು, ನಾಗಮಂಗಲಗಳ ಶಾಸನಗಳಲ್ಲಿ ಉಕ್ತವಾಗಿರುವುದರಿಂದಲೂ, ದೇವಾಲಯಗಳ ಮತ್ತು ಅಗ್ರಹಾರಗಳ ಬ್ರಾಹ್ಮಣರಿಗೆ ಹಾಗೂ ಜಿನಾಲಯಗಳ ಭಟ್ಟಾರರಿಗೆ ಜನರು ದತ್ತಿದಾನ ನೀಡಿ, ಪೂಜೆ ಸಲ್ಲಿಸುತ್ತಿದ್ದ ವಿಷಯವು ಈ ಶಾಸನಗಳಲ್ಲಿ ಉಲ್ಲೇಖವಾಗಿರುವುದರಿಂದಲೂ ಶಿಕ್ಷಣ ಕಾರ್ಯ ಭರದಿಂದ ಸಾಗಿದ್ದಿರಬಹುದೆಂದು ಊಹಿಸಬಹುದಾಗಿದೆ. ಹೊಯ್ಸಳರ ಕಾಲದಲ್ಲಿ ಮೇಲುಕೋಟೆ, ಶ್ರೀರಂಗಪಟ್ಟಣ, ಮಂಡ್ಯ, ಅಗ್ರಹಾರಬಾಚಳ್ಳಿ, ಕಿಕ್ಕೇರಿಗಳಲ್ಲಿ ಅಗ್ರಹಾರಗಳಿದ್ದು, ಇಲ್ಲಿ ಉಪಲಬ್ಧವಾಗಿರುವ ಶಾಸನಗಳಲ್ಲಿ ತೋರಿಬರುವ ಪ್ರೌಢ ಸಾಹಿತ್ಯದಿಂದ ಅಂದಿನ ಶೈಕ್ಷಣಿಕ ಔನ್ನತ್ಯವನ್ನು ಕಾಣಬಹುದಾಗಿದೆ. ಮಂಡ್ಯ, ಮೇಲುಕೋಟೆ, ತೊಣ್ಣೂರು, ಶ್ರೀರಂಗಪಟ್ಟಣಗಳಲ್ಲಿ ರಾಮಾನುಜಾಚಾರ್ಯರ ಶ್ರೀವೈಷ್ಣವ ಸಿದ್ಧಾಂತದ ಶಿಕ್ಷಣಕ್ಕೆ ಪ್ರಾಶಸ್ತ್ಯವಿದ್ದಿತು. ವಿಜಯನಗರ ಕಾಲದ ಹಲವು ಕನ್ನಡ ಶಾಸನಗಳು ಜಿಲ್ಲೆಯಲ್ಲಿ ದೊರೆತಿದ್ದು, ಕನ್ನಡ ಮಾಧ್ಯಮ ಪ್ರಚಲಿತವಿದ್ದ ಬಗ್ಗೆ ಬೆಳಕು ಚೆಲ್ಲುತ್ತವೆ. ಉರ್ದು ಶಿಕ್ಷಣಕ್ಕೂ, ಜಿಲ್ಲೆಯಲ್ಲಿ ಪ್ರಾಶಸ್ತ್ಯವಿದ್ದು, ಆ ಕಾಲದ ಮಸೀದಿಗಳಲ್ಲಿ ಇಂತಹ ಶಿಕ್ಷಣವನ್ನು ಮಕ್ಕಳಿಗೆ ನೀಡಲಾಗುತ್ತಿತ್ತೆಂದು ತಿಳಿದುಬರುತ್ತದೆ.

ರಾಜ್ಯದಲ್ಲಿ ಬ್ರಿಟಿಷರ ಆಳ್ವಿಕೆಯ ಪ್ರಾರಂಭಕಾಲವನ್ನು ಶೈಕ್ಷಣಿಕವಾಗಿ ಸಂಕ್ರಮಣ ಕಾಲವೆನ್ನಬಹುದು. ಈ ವೇಳೆಗೆ ಅಗ್ರಹಾರಗಳು ಮಾಯವಾಗುತ್ತಾ ಬಂದವು. ದೇವಾಲಯಗಳಲ್ಲಿ ನೀಡಲ್ಪಡುತ್ತಿದ್ದ ವೈದಿಕ ಶಿಕ್ಷಣವೂ ಸೊರಗಿತು. ಇದರಿಂದಾಗಿ ಅಯ್ಯನವರ ಕೂಲಿಮಠಗಳು ತಲೆ ಎತ್ತಿದವು. ಸಾಮಾನ್ಯ ಓದು ಬರಹ ಹಾಗೂ ಲೆಕ್ಕ ಇವುಗಳು ಶಿಕ್ಷಣ ವಿಷಯಗಳಾದವು. ಈ ವೇಳೆಗಾಗಲೇ ಕ್ರೈಸ್ತಧರ್ಮದ ಪ್ರಚಾರವೂ ಸಾಗಿದ್ದಿತು. ತಮ್ಮ ಮತಪ್ರಚಾರಕ್ಕಾಗಿ ಕ್ರೈಸ್ತಪಾದ್ರಿಗಳು ಪ್ರಾಥಮಿಕ ಶಾಲೆಗಳನ್ನು ಪ್ರಾರಂಭಿಸಿ ಶಿಕ್ಷಣಕ್ಕೆ ಒತ್ತು ನೀಡಿದರು. ಇದರಿಂದ ಶೈಕ್ಷಣಿಕ ಕ್ಷೇತ್ರದಲ್ಲಿ ಉಂಟಾದ ಮತ್ತೊಂದು ಕ್ರಾಂತಿಕಾರಕ ಬದಲಾವಣೆಯಾದ ಇಂಗ್ಲಿಷ್ ಭಾಷೆಯ ಕಲಿಕೆ ಹಾಗೂ ಇಂಗ್ಲಿಷ್ ಶಿಕ್ಷಣ ಪದ್ಧತಿಗಳನ್ನು, ಶಿಕ್ಷಣಾರ್ಥಿಗಳು ಹಾರ್ದಿಕವಾಗಿ ಸ್ವಾಗತಿಸಿದರು. ವಿಜ್ಞಾನ ವಿಷಯಗಳ ಕಲಿಕೆಯ ನೆಪದಲ್ಲಿ ಇಂಗ್ಲಿಷ್ ಶಿಕ್ಷಣ ಭರದಿಂದ ಸಾಗಿತು.ಇದರ ಪ್ರಭಾವದಿಂದಾಗಿ ಸಂಸ್ಕೃತ ತನ್ನ ಪ್ರಾಶಸ್ತ್ಯವನ್ನು ಕಳೆದುಕೊಂಡು ದೇಶೀಯ ಭಾಷೆಗಳು ಎರಡನೇ ದರ್ಜೆಗೆ ಇಳಿಸಲ್ಪಟ್ಟವು. ಆದರೆ ಮುಸ್ಲಿಂ ಶಿಕ್ಷಣ ಪದ್ಧತಿ ಮಸೀದಿ ಹಾಗೂ ಮಕ್ತಬಾಗಳಲ್ಲಿ ನಿರಾತಂಕವಾಗಿ ಸಾಗಿತು. ದೇವಾಲಯ ಹಾಗೂ ಅಗ್ರಹಾರಗಳಲ್ಲಿದ್ದ ಹಿಂದೂ ಶಿಕ್ಷಣ ಅಯ್ಯನವರ ಕೂಲಿಮಠಗಳಲ್ಲಿ ಮಾತ್ರ ಉಳಿಯಿತು. ಆದರೆ ಈ ಕೂಲಿಮಠಗಳು ಸಾರ್ವತ್ರಿಕ ಶಿಕ್ಷಣವನ್ನೇನೂ ನೀಡಲಿಲ್ಲ.

೧೮೫೪ರಲ್ಲಿ ವುಡ್ಸ್ ವರದಿಯ ನಂತರ ಭಾರತದಲ್ಲಿ ಉಂಟಾದ ಹೊಸ ಸ್ಥಿರ ಶಿಕ್ಷಣ ನೀತಿ ರಾಜ್ಯದ ಎಲ್ಲೆಡೆ ತನ್ನ ಪ್ರಭಾವ ಬೀರಿತು. ಸಂಸ್ಥಾನದಲ್ಲಿ ೧೮೫೭ರಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆ ಪ್ರಾರಂಭವಾಯಿತು. ಪಠ್ಯಪುಸ್ತಕಗಳ

ಮುದ್ರಣಕ್ಕಾಗಿ ೧೮೭೮ರಲ್ಲಿ ಬೆಂಗಳೂರಿನಲ್ಲಿ ಸರ್ಕಾರಿ ಮುದ್ರಣಾಲಯ ಪ್ರಾರಂಭವಾಯಿತು. ಅಯ್ಯನವರ ಕೂಲಿಮಠಗಳಲ್ಲಿ ಶಿಕ್ಷಣ ಇಲಾಖೆ ರೂಪಿಸಿದ ಇಂಗ್ಲಿಷ್ ಮಾದರಿಯ ಪಠ್ಯಕ್ರಮ ಜಾರಿಗೆ ಬಂದಿತು. ಅಧ್ಯಾಪಕರ ತರಬೇತಿಗಾಗಿ ನಾರ್ಮಲ್ ಶಾಲೆಗಳು ಪ್ರಾರಂಭಗೊಂಡವು.

ಒಂಭತ್ತು ರೂಪಾಯಿ ಮೇಲ್ಪಟ್ಟು ಸಂಬಳ ಪಡೆಯುತ್ತಿದ್ದ ಸರ್ಕಾರಿ ನೌಕರರು ಮಾತೃಭಾಷೆಯಲ್ಲಿ ಓದಲು ಹಾಗೂ ಬರೆಯಲು ಬಲ್ಲವರಾಗಿರಬೇಕೆಂದು ಸರಕಾರ ೧೮೬೪ರಲ್ಲಿ ಕಾನೂನು ಜಾರಿ ಮಾಡಿತು. ಇದನ್ನು ಅಂದಿನ ಶಿಕ್ಷಣ ಇಲಾಖೆಯ ಮುಖ್ಯಸ್ಥರಾದ ಬಿ.ಎಲ್.ರೈಸ್‌ರವರು ಅನುಷ್ಠಾನಕ್ಕೆ ತಂದರು. ಪ್ರತೀ ಹೋಬಳಿ ಕೇಂದ್ರದಲ್ಲಿ ಒಂದು ಸರ್ಕಾರಿ ಕಿರಿಯ ಹಾಗೂ ತಾಲೂಕು ಕೇಂದ್ರಗಳಲ್ಲಿ ಹಿರಿಯ ಪ್ರಾಥಮಿಕ ಶಾಲೆಯೂ, ಜಿಲ್ಲಾ ಕೇಂದ್ರದಲ್ಲಿ ಮೆಟ್ರಿಕ್ಯುಲೇಷನ್‌ವರೆಗೆ ಶಿಕ್ಷಣ ನೀಡುವ ಪ್ರೌಢಶಾಲೆಯೂ ಆರಂಭಗೊಂಡವು. ಇಪ್ಪತ್ತು ರೂಪಾಯಿ ಮಾಸಿಕ ವೇತನ ಪಡೆಯುವ ಸರ್ಕಾರಿ ಹುದ್ದೆಗಳಿಗೆ ಇಂಗ್ಲಿಷನ್ನೊಳಗೊಂಡ ಸಾಮಾನ್ಯ ಶಿಕ್ಷಣ ಪರೀಕ್ಷೆ ಕಡ್ಡಾಯವಾಯಿತು. ಇದರಿಂದಾಗಿ ಇಂಗ್ಲಿಷ್ ಶಿಕ್ಷಣದ ಪ್ರಾಮುಖ್ಯತೆ ವೃದ್ಧಿಯಾಯಿತು. ಆದರೂ ಈ ಯೋಜನೆಯಿಂದ ಮಂಡ್ಯ ಜಿಲ್ಲೆಯಲ್ಲಿ ಕ್ರಾಂತಿಕಾರಕ ಶೈಕ್ಷಣಿಕ ಬದಲಾವಣೆಗಳೇನೂ ಆಗಲಿಲ್ಲ.

## ಅಗ್ರಹಾರಗಳು

ವಿದ್ಯಾದಾನಕ್ಕಾಗಿ ಅಗ್ರಹಾರಗಳನ್ನು ಸೃಷ್ಟಿಸಿ ಬ್ರಾಹ್ಮಣರಿಗೆ ದಾನ ಮಾಡುವ ಕಾರ್ಯ ಅನಾದಿಕಾಲದಿಂದಲೂ ನಡೆದು ಬಂದ ಪದ್ಧತಿ. ಇಂತಹ ಗ್ರಾಮಗಳನ್ನು ಚತುರ್ವೇದಿ ಮಂಗಲಗಳೆಂದೂ ಕರೆಯಲಾಗುತ್ತಿತ್ತು. ತಮ್ಮ ಷಟ್ಕರ್ಮಗಳಾದ ಯಜನ, ಯಾಜನ, ಅಧ್ಯಯನ, ಅಧ್ಯಾಪನ, ದಾನ ಹಾಗೂ ಪ್ರತಿಗ್ರಹಾದಿಗಳನ್ನು ಸ್ಮೃತಿಗಳ ಆದೇಶದಂತೆ ನೆರವೇರಿಸಿಕೊಂಡು ಹೋಗಲು ಬ್ರಾಹ್ಮಣರಿಗೆ ಹೊಲ, ನಿವೇಶನ, ಮನೆಗಳನ್ನು ವೃತ್ತಿಗಳಾಗಿ ವಿಂಗಡಿಸಿ, ಇವುಗಳೊಂದಿಗೆ ಸಾಮೂಹಿಕ ಅಗ್ರಹಾರಗಳನ್ನು ನಿರ್ಮಿಸಲಾಗುತ್ತಿತ್ತು. ಇಂತಹ ಅಗ್ರಹಾರಗಳು ಮುಖ್ಯವಾಗಿ ಅಧ್ಯಯನ ಮತ್ತು ಅಧ್ಯಾಪನಗಳನ್ನು ನಡೆಸುವ ವಿದ್ಯಾಕೇಂದ್ರಗಳ ಕಾರ್ಯ ನಿರ್ವಹಿಸುವ ಉದ್ದೇಶ ಹೊಂದಿದ್ದವು. ಬ್ರಾಹ್ಮಣರ ವಾಸಕ್ಕೆಂದು ಪಟ್ಟಣಗಳಲ್ಲಿ ಮೀಸಲಿರಿಸಿದ್ದ ಕೇರಿಗಳನ್ನು 'ಬ್ರಹ್ಮಪುರಿ'ಗಳೆನ್ನುತ್ತಿದ್ದರು. ಜಿಲ್ಲೆಯಲ್ಲಿದ್ದ ಇಂತಹ ಕೆಲವು ಅಗ್ರಹಾರ ಹಾಗೂ ಬ್ರಹ್ಮಪುರಿಗಳಲ್ಲಿ ವೇದವೇದಾಂಗ ಕೋವಿದರಾದಂತಹ ಬ್ರಾಹ್ಮಣೋತ್ತಮರು ತತ್ವಜ್ಞಾನ, ಇತಿಹಾಸ, ಮೀಮಾಂಸೆ ಹಾಗೂ ಗಣಿತ ಮುಂತಾದ ಇತರ ವಿಷಯಗಳಲ್ಲಿಯೂ ಪಾಂಡಿತ್ಯಪೂರ್ಣ ಪ್ರಾವೀಣ್ಯತೆ ಸಾಧಿಸಿದ್ದರು. ಇದೇ ರೀತಿ ವೀರಶೈವಾವಲಂಬಿ ವಿದ್ವಾಂಸರ ವಾಸಕ್ಕೆಂದು ಸೃಷ್ಟಿಸಲಾದ ಅಗ್ರಹಾರಗಳನ್ನು 'ಶಿವಪುರ' ಗಳೆನ್ನುತ್ತಿದ್ದರು. ಇದಕ್ಕೆ ಮರಡಿಪುರ, ಮದ್ದೂರು ಮತ್ತು ಬಸರಾಳುಗಳನ್ನು ಉದಾಹರಣೆಗಳಾಗಿ ಹೆಸರಿಸಬಹುದಾಗಿದೆ.

ಕ್ರಿ.ಶ,ಸುಮಾರು ೧೨೭೬ರ ಹೊಸಬೂದನೂರು ಗ್ರಾಮದ ಹೊಯ್ಸಳ ಮೂರನೇ ನರಸಿಂಹನ ಕಾಲದ ಶಾಸನದಲ್ಲಿ 'ಶ್ರೀಮದ್ ಅನಾದಿ ಅಗ್ರಹಾರಂ ಮಂಡಯದ ಮಹಾಜನಂಗಳು' ಎಂಬ ಉಕ್ತಿಯಂತೆ ಮಂಡ್ಯ ಒಂದು ಅಗ್ರಹಾರವಾಗಿತ್ತೆಂದು ತಿಳಿದುಬರುತ್ತದೆ. ಸ್ಥಳ ಪುರಾಣೇತಿಹಾಸ ಹಾಗೂ ಶಾಸನೋಕ್ತಿಗಳಂತೆ ಜಿಲ್ಲೆಯ ನಾಗಮಂಗಲ ಒಂದು ಪ್ರಾಚೀನ ಅಗ್ರಹಾರವಾಗಿದ್ದಿತು. ಹೊಯ್ಸಳ ಕಾಲದ ಪೂರ್ವದಿಂದಲೇ ಇದು 'ಚತುರ್ವೇದಿ ಭಟ್ಟಾಕರ ರತ್ನ ಅಗ್ರಹಾರ' ವೆಂಬ ಹೆಸರಿನ ಪ್ರಮುಖ ವಿದ್ಯಾ ಹಾಗೂ ವಾಣಿಜ್ಯ ಕೇಂದ್ರವಾಗಿದ್ದಿತೆಂದು ತಿಳಿದು ಬರುತ್ತದೆ. ವಿಷ್ಣುವರ್ಧನನ ಎರಡನೇ ಪಟ್ಟದರಸಿ ರಾಣಿ ಬಮ್ಮಲಾದೇವಿ ಕ್ರಿ.ಶ. ಸುಮಾರು ೧೧೩೫ರಲ್ಲಿ ಈ ಅಗ್ರಹಾರವನ್ನು ಜೀರ್ಣೋದ್ಧಾರ ಮಾಡಿದ ಬಗ್ಗೆ ಮಾಹಿತಿ ಇದೆ. ನೆರೆಯ ಬೆಳ್ಳೂರು ಸಹ ಪ್ರಮುಖ ಅಗ್ರಹಾರವಾಗಿದ್ದು, ಉದ್ಭವ ನರಸಿಂಹಪುರ ಎಂಬ ಅಭಿದಾನವನ್ನು ಹೊಂದಿದ್ದ ಅಂಶವನ್ನು ೧೨-೧೩ನೇ ಶತಮಾನದ ಶಾಸನಗಳು ಖಚಿತಪಡಿಸುತ್ತವೆ. ಮಳವಳ್ಳಿ

ಸಮೀಪದ ಮಾರೇಹಳ್ಳಿ ೧೧ನೇ ಶತಮಾನದ ಚೋಳರ ಆಳ್ವಿಕೆಯಲ್ಲಿ ಉನ್ನತ ಸ್ಥಿತಿಯಲ್ಲಿದ್ದ ಮತ್ತೊಂದು ಅಗ್ರಹಾರವಾಗಿತ್ತೆಂಬ ವಿಷಯ ಬೆಳಕಿಗೆ ಬಂದಿದೆ. ತೊಣ್ಣೂರು ಸಹ ಒಂದು ಪ್ರಮುಖ ಅಗ್ರಹಾರವಾಗಿದ್ದು, ಶಾಸನಗಳಲ್ಲಿ ಇದನ್ನು ಯಾದವನಾರಾಯಣ ಚತುರ್ವೇದಿ ಮಂಗಲ, ಅಗ್ರಹಾರ ತೊಂಡನೂರು ಎಂದೇ ಕರೆಯಲಾಗಿದ್ದುದನ್ನು, ಹಾಗೂ ನೆರೆಯ ಮೇಲುಕೋಟೆ ಸಹ ಪ್ರಮುಖ ವೈದಿಕ ಅಧ್ಯಯನ ಕೇಂದ್ರವಾಗಿದ್ದುದನ್ನು ಅನೇಕ ಶಾಸನಗಳು ದಾಖಲಿಸಿವೆ. ಇದೇ ಕಾಲಕ್ಕೆ ಮಳವಳ್ಳಿ ಬಳಿಯ ಅಂತರವಳ್ಳಿ, ಶ್ರೀರಂಗಪಟ್ಟಣದ ಬಳಿಯ ಅರಕೆರೆ ಮತ್ತು ಬೆಳಗೊಳಗಳೂ ಸಹ ಖ್ಯಾತ ಅಗ್ರಹಾರಗಳಾಗಿದ್ದುವೆಂಬ ವಿಷಯ ವಿದಿತವಾಗಿದೆ. ಜಿಲ್ಲೆಯ ಅಗ್ರಹಾರಗಳು ಹೆಚ್ಚಾಗಿ ಹೊಯ್ಸಳ ಕಾಲದವುಗಳಾಗಿದ್ದರೂ, ವಿಜಯನಗರ ಹಾಗೂ ಮೈಸೂರರಸರ ಆಶ್ರಯದಲ್ಲಿಯೂ ಬೆಳೆದವೆಂಬ ಅಭಿಪ್ರಾಯವನ್ನೂ ವಿದ್ವಾಂಸರು ಒಪ್ಪಿರುತ್ತಾರೆ. ಇವಲ್ಲದೇ ಕಿಕ್ಕೇರಿ, ದೊಡ್ಡರಸಿನಕೆರೆ, ಭೈರಾಪುರ, ವರಾಹನಾಥಕಲ್ಲಹಳ್ಳಿ, ಕಲ್ಲಂಗೆರೆ, ದಡಗ, ಹೊಸಹೊಳಲು, ಹರಿಹರಪುರ, ಸಿಂಧಘಟ್ಟ, ಮಾಳಗೂರು, ಗುತ್ತಲು, ಅಗ್ರಹಾರಬಾಚಹಳ್ಳಿ, ಬ್ಯಾಲದಕೆರೆ, ಮುಂತಾದವೂ ಪ್ರಮುಖ ವಿದ್ಯಾಕೇಂದ್ರಗಳಾಗಿದ್ದವೆಂದು ತಿಳಿದುಬರುತ್ತದೆ. ವಿಜಯನಗರದ ಅರಸರ ಕಾಲದಲ್ಲಿ ಸ್ಥಾಪಿಸಲ್ಪಟ್ಟ ಅಗ್ರಹಾರಗಳಲ್ಲಿ ಹೊನ್ನೇನಹಳ್ಳಿ, ತಿಬ್ಬನಹಳ್ಳಿ (ನಾಗಮಂಗಲ ತಾಲೂಕು) ಹಾಗೂ ಬೆಳಕವಾಡಿ ಬಳಿಯ ಮಟ್ಟಹಳ್ಳಿಗಳನ್ನು ಉದಾಹರಿಸಬಹುದಾಗಿದೆ. ಮಳವಳ್ಳಿ ಹಾಗೂ ಶ್ರೀರಂಗಪಟ್ಟಣಗಳು ಮೈಸೂರರಸರ ಕಾಲದಲ್ಲಿ ಅಧ್ಯಯನ ಮತ್ತು ಅಧ್ಯಾಪನ ಕೇಂದ್ರಗಳಾಗಿರದಿದ್ದರೂ, ವಿದ್ವಾಂಸರು ಹಾಗೂ ಸಾಹಿತ್ಯಾಸಕ್ತರನ್ನೂ ಸಂಗೀತಗಾರರನ್ನೂ ಹೊಂದಿದ್ದವೆಂದು ತಿಳಿದುಬರುತ್ತದೆ. ಶ್ರೀರಂಗಪಟ್ಟಣ ಬಳಿಯ ಶ್ರೀನಿವಾಸ ಅಗ್ರಹಾರವು ಆ ಕಾಲದ ಹೆಸರುವಾಸಿಯಾದ ವಿದ್ಯಾಕೇಂದ್ರವಾಗಿದ್ದಿತೆಂದೂ ತಿಳಿದುಬರುತ್ತದೆ.

**ಮಠಗಳು:** ಮೂಲತಃ ಮಠಗಳು ಅಧ್ಯಾತ್ಮ ಕೇಂದ್ರಗಳೇ ಆಗಿದ್ದು, ಧರ್ಮ ಬೋಧನೆ ಮತ್ತು ಧರ್ಮ ಪ್ರಸಾರಗಳನ್ನು ಮಾಡುತ್ತಿದ್ದು, ಕ್ರಮೇಣ ಗುರು ಮನೆಗಳಾಗಿಯೂ, ಗುರುಕುಲಗಳಾಗಿಯೂ ಬೆಳೆದು, ನಂತರದಲ್ಲಿ ವಿದ್ಯಾಪ್ರಸಾರ ಕೇಂದ್ರಗಳಾಗಿ ಮಾರ್ಪಾಡಾದ ಉದಾಹರಣೆಗಳು ಹೇರಳವಾಗಿವೆ. ಜಿಲ್ಲೆಯ ನಾಗಮಂಗಲ ತಾಲೂಕಿನ ಆದಿಚುಂಚನಗಿರಿ ಮಠ ಇಂತಹ ವಿದ್ಯಾಕೇಂದ್ರದ ಉದಾಹರಣೆ. ಸಾಮಾಜಿಕ ಹಾಗೂ ಮುಖ್ಯವಾಗಿ ಶೈಕ್ಷಣಿಕ ಕ್ಷೇತ್ರದಲ್ಲಿ ದೇಶಕ್ಕೆ ಈ ಮಠದ ಕಾಣಿಕೆ ಅಮೂಲ್ಯವಾಗಿದೆ(ಮುಂದೆ ಸವಿಸ್ತಾರವಾಗಿ ಚರ್ಚಿಸಲಾಗಿದೆ). ಹೀಗಿಯೇ ಮೇಲುಕೋಟೆಯಲ್ಲಿ ರಾಮಾನುಜ ಸಿದ್ಧಾಂತ ಪರಂಪರೆಯ ಯತಿರಾಜ ಮಠ, ಅಹೋಬಲಮಠ, ವಾನಯಾಮಲೈ ಮಠ, ಉತ್ತಮ ಪ್ರಾಚೀನ ಗ್ರಂಥಗಳನ್ನು ಹೊಂದಿದ್ದು, ಜನ ಸಾಮಾನ್ಯರಲ್ಲಿ ಶ್ರೀ ವೈಷ್ಣವ ಧರ್ಮ ಜಾಗೃತಿಯನ್ನು ಉಂಟು ಮಾಡುವಲ್ಲಿ ಸಫಲವಾಗಿವೆ. ಯತಿರಾಜ ಮಠವನ್ನು ಸ್ವತಃ ರಾಮಾನುಜರು ಹಾಗೂ ಅಹೋಬಲ ಮಠವನ್ನು (೧೪೩೮) 'ಆದಿವಣ್' ಶಠಕೋಪ ಮಹಾದೇಶಿಕರ್ ಸ್ಥಾಪಿಸಿರುವುದಾಗಿ ವಿದ್ವಜ್ಜನರ ಅಭಿಪ್ರಾಯವಾಗಿದೆ. ಇದೇ ರೀತಿ ಪ್ರಾಚೀನವಾದ ಹುಳ್ಳಂಬಳ್ಳಿ ರೇವಣಾರಾಧ್ಯ ಮಠ, ಹಲಗೂರಿನ ಬೃಹನ್ಮಠ, ರಾಮಾರೂಢ ಮಠ, ಧನಗೂರು ವೀರಸಿಂಹಾಸನಮಠ, ಮಂಟೇಸ್ವಾಮಿ ಮಠ, ಬೊಪ್ಪನಗೌಡನಪುರದ ಮಳವಳ್ಳಿಯ ಮಠಗಳು ಹಾಗೂ ಕೃಷ್ಣರಾಜಪೇಟೆ ತಾಲೂಕಿನ ತೆಂಡೆಕೆರೆ ಹಾಗೂ ಕಾಪನಹಳ್ಳಿ ಗವಿಮಠ, ಪಾಂಡವಪುರ ತಾಲೂಕಿನ ಬೇಬಿ ಬೆಟ್ಟದ ಸಿದ್ಧೇಶ್ವರ ಮಠ ಇವುಗಳು ಧಾರ್ಮಿಕ ಹಾಗೂ ಶೈಕ್ಷಣಿಕ ಸೇವೆಗಳಲ್ಲಿ ನಿರತವಾಗಿವೆ. ತಿರುಪತಿಯಲ್ಲಿ ಕೇಂದ್ರಸ್ಥಾನ ಹೊಂದಿದ್ದ ಮೈಸೂರು ದೊರೆಗಳ ರಾಜಗುರುಗಳಾದ ಶ್ರೀ ಬ್ರಹ್ಮತಂತ್ರ ಸ್ವತಂತ್ರ ಪರಕಾಲ ಮಠ (ಕ್ರಿ.ಶ ೧೬೭೬–೧೭೦೦) ಶ್ರೀರಂಗಪಟ್ಟಣದಲ್ಲಿಯೂ ಇದ್ದು, ನಾಲ್ವಡಿ ಕೃಷ್ಣರಾಜ ಒಡೆಯರ ಕಾಲಕ್ಕೆ ಮೈಸೂರಿಗೆ ಸ್ಥಳಾಂತರಿಸಲ್ಪಟ್ಟಿತು. ಇವಲ್ಲದೆ ವಿದ್ಯಾಕ್ಷೇತ್ರಕ್ಕೆ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಸೇವೆ ಸಲ್ಲಿಸುತ್ತಿರುವ ಇನ್ನೂ ಹಲವಾರು ಮಠಗಳು ಜಿಲ್ಲೆಯಾದ್ಯಂತ ಕಾರ್ಯಪ್ರವೃತ್ತವಾಗಿವೆ.

**ಕಲಿಕಾ ಕೇಂದ್ರ ಮೇಲುಕೋಟೆ**

ಶ್ರೀ ರಾಮಾನುಜಾಚಾರ್ಯರ ಆಗಮನಕ್ಕಿಂತಲೂ ಮೊದಲಿನಿಂದ ಮೇಲುಕೋಟೆ ಖ್ಯಾತ ಕಲಿಕಾ ಕೇಂದ್ರವಾಗಿದ್ದಿತೆಂದೂ, ಪ್ರಾಚೀನ ಗುರುಕುಲ ವ್ಯವಸ್ಥೆ ೧೮೪೮ ರವರೆವಿಗೂ ಈ ಸ್ಥಳದಲ್ಲಿ ಪ್ರಚಲಿತವಿದ್ದಿತೆಂದೂ ತಿಳಿದುಬರುತ್ತದೆ. ಮೈಸೂರಿನ ಮಹರಾಜ ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರು ೧೮೪೮ರಲ್ಲಿ ಇಲ್ಲಿ 'ಆಭಿನವ ಕೃಷ್ಣ ಮನೋರಂಜನಿ ಪಾಠಶಾಲಾ' ಎಂಬ ಕೇಂದ್ರವನ್ನು ಆರಂಭಿಸುವ ಮೂಲಕ ಗುರುಕುಲ ಪದ್ಧತಿಯನ್ನು ಸಾಂಸ್ಥಿಕವಾಗಿಸಿದರು. ಇದರ ಆಡಳಿತವನ್ನು ಶ್ರೀ ತಿರುನಾರಾಯಣ ದೇವಸ್ಥಾನದ ಆಡಳಿತದಡಿ ಸೇರಿಸಲಾಗಿತ್ತು. ಈ ಕೇಂದ್ರವು ದೇವಸ್ಥಾನದ ಪ್ರಾಕಾರದೊಳಗೇ ಇದ್ದು, ದಕ್ಷಿಣ ಏಷಿಯಾದಲ್ಲಿಯೇ ಅದ್ವಿತೀಯವಾಗಿದ್ದಿತು. ಅಂದಿನ ಕಂಪನಿ ಸರಕಾರ ಇದನ್ನು ೧೮೫೩ ರಲ್ಲಿ ಸಂಸ್ಕೃತ ಕಾಲೇಜು ಎಂದು ಪರಿಗಣಿಸಿ ಮಾಹೆಯಾನ ರೂ. ೪೫ ರ ಅನುದಾನವನ್ನು ನೀಡಿತು. ಆದರೆ ಮೊದಲನೇ ಮಹಾಯುದ್ಧದ ಸಮಯದಲ್ಲಿ ಇಲ್ಲಿನ ಹಲವಾರು ವಿದ್ವಾಂಸರು ಬ್ರಿಟಿಷ್ ಸರ್ಕಾರದ ವಿರುದ್ಧ ಪಿತೂರಿ ನಡೆಸುತ್ತಿರಬಹುದೆಂಬ ಶಂಕೆಯಿಂದ ಇದು ಮುಚ್ಚಲ್ಪಟ್ಟು, ಅನುದಾನವೂ ನಿಂತುಹೋಯಿತೆಂದು ತಿಳಿದುಬರುತ್ತದೆ.

೧೮೮೭ರರಲ್ಲಿ ಕುಪ್ಪಣ್ಣ ಸ್ವಾಮಿ ಎಂಬ ವಿದ್ವಾಂಸ ಈ ಪಾಠಶಾಲೆಯನ್ನು ಪುನರುಜ್ಜೀವನಗೊಳಿಸಿ ಇದರ ಮುಖ್ಯಸ್ಥರಾದರು. ಸರ್ಕಾರದೊಡನೆ ವ್ಯವಹರಿಸಿ ಪುನಃ ಅನುದಾನ ಪಡೆದು, ಈ ಶಾಲೆಗೆ 'ವೇದವೇದಾಂತ ಬೋಧಿನಿ ಮಹಾಪಾಠಶಾಲೆ' ಎಂದು ಪುನರ್ನಾಮಕರಣ ಮಾಡಿದರು. ಇಲ್ಲಿ ಸರಸ್ವತಿ ಭಂಡಾರವೆಂಬ ಗ್ರಂಥಾಲಯವನ್ನೂ ಪ್ರಾರಂಭಿಸಿ, ಇದರಲ್ಲಿ ಉಭಯವೇದಾಂತ ಹಾಗೂ ಸಂಸ್ಕೃತ ಸಾಹಿತ್ಯದ ಬಗ್ಗೆ ಅಪೂರ್ವ ಗ್ರಂಥಗಳನ್ನು ಸೇರ್ಪಡೆ ಮಾಡಿದರು.

## ಸಾಕ್ಷರತೆ

ಮಂಡ್ಯ ಜಿಲ್ಲೆಯ ಸಾಕ್ಷರತೆಯ ಪ್ರಮಾಣ ಭಾರತ ಹಾಗೂ ಕರ್ನಾಟಕ ರಾಜ್ಯದ ಒಟ್ಟು ಪ್ರಮಾಣಕ್ಕಿಂತ ಕಡಿಮೆ ಮಟ್ಟದಲ್ಲಿ ಇರುವುದು ಕಂಡು ಬರುತ್ತದೆ. ಕಡ್ಡಾಯ ಪ್ರಾಥಮಿಕ ಶಿಕ್ಷಣ ನೀತಿ ಜಾರಿಯಾದ ನಂತರವೂ ಇಲ್ಲಿ ಅಕ್ಷರಸ್ಥರ ಪ್ರಮಾಣದಲ್ಲಿ ಗಣನೀಯವಾದ ಹೆಚ್ಚಳ ಕಂಡುಬರಲಿಲ್ಲ. ೧೮೯೧ರ ಜನಗಣತಿಯಲ್ಲಿ ಅಕ್ಷರಸ್ಥರ ಮತ್ತು ಹಾಗೂ ಅನಕ್ಷರಸ್ಥರ ಪ್ರಮಾಣ ಹಾಗೂ ಶೇಕಡಾವಾರು ಅಂಕಿಅಂಶಗಳನ್ನು ನಿಖರವಾಗಿ ದಾಖಲಿಸಿರುವುದಿಲ್ಲ. ಆ ದಶಕದಲ್ಲಿ ಪಂಡಿತರು, ಅಕ್ಷರಸ್ಥರು ಹಾಗೂ ಅನಕ್ಷರಸ್ಥರೆಂದು ಮಾತ್ರ ಜನಗಣತಿ ಮಾಡಲಾಯಿತು. ಇದರಿಂದಾಗಿ ಗೊಂದಲವೇರ್ಪಟ್ಟು, ಮುಂದಿನ ೧೯೦೧ರ ಜನಗಣತಿಯಲ್ಲಿ ಅಕ್ಷರಸ್ಥರು ಹಾಗೂ ಅನಕ್ಷರಸ್ಥರೆಂದು ಎರಡೇ ವರ್ಗಗಳಾಗಿ ಜನಸಂಖ್ಯೆಯನ್ನು ವಿಂಗಡಿಸಲಾಯಿತು. ಆ ಸಮಯದಲ್ಲಿ ಜಿಲ್ಲೆ ಮೈಸೂರು ಪ್ರದೇಶಕ್ಕೆ ಸೇರಿತ್ತಾದ್ದರಿಂದ, ಅಕ್ಷರಸ್ಥರ ಪ್ರಮಾಣ ನಿಖರವಾಗಿ ತಿಳಿದುಬಂದಿಲ್ಲ. ಕೃಷ್ಣರಾಜಸಾಗರ ಆಣೆಕಟ್ಟು ಪೂರ್ಣಗೊಳ್ಳುವ ಮೊದಲು (೧೯೩೨) ಮಂಡ್ಯ ಪ್ರದೇಶ ನೀರಿಲ್ಲದ ಬೆಂಗಾಡಾಗಿದ್ದು, ಬಡತನ ಹಾಗೂ ಅಜ್ಞಾನಗಳಿಂದ ತುಂಬಿದ್ದಿತು. ಅಗ್ರಹಾರ ಹಾಗೂ ಮಠಗಳಂತಹ ಕಲಿಕಾ ಕೇಂದ್ರಗಳೂ ಪ್ರೋತ್ಸಾಹವಿಲ್ಲದೆ ಸೊರಗಿದ್ದವು. ಸುಶಿಕ್ಷಿತರು ಬೆಂಗಳೂರು. ಮೈಸೂರುಗಳಿಗೆ ವಲಸೆ ಹೋಗಿದ್ದರು. ಆದುದರಿಂದ ಆ ಕಾಲದ ಸಾಕ್ಷರತೆ ಸಹಜವಾಗಿ ಅತಿ ಕಡಿಮೆ ಇದ್ದಿತು.

ಮಂಡ್ಯ ಜಿಲ್ಲೆಯು ೧೯೩೯ರಲ್ಲಿ ಪ್ರತ್ಯೇಕತೆ ಪಡೆದುದರಿಂದ, ಸಾಕ್ಷರತೆಯ ಅಂಕಿಅಂಶಗಳು ೧೯೪೧ರ ಜನಗಣತಿಯಿಂದ ಲಭ್ಯವಿದ್ದು ಅವನ್ನು ಈ ಮುಂದೆ ನೀಡಲಾಗಿದೆ.

**ಕೋಷ್ಟಕ ೧೩.೧ ೦–೪ವಯೋಮಾನದವರೂ ಸೇರಿದಂತೆ ೧೯೪೧ ರಿಂದ ೧೯೭೧ರವರೆಗೆ ಮಂಡ್ಯಜಿಲ್ಲೆಯ ಸಾಕ್ಷರತಾ ಪ್ರಮಾಣದ ಪ್ರಗತಿ**

| ವರ್ಷ | ಜನಸಂಖ್ಯೆ | | ಸಾಕ್ಷರತೆ | | ಶೇಕಡವಾರು ಸಾಕ್ಷರತೆ | |
|---|---|---|---|---|---|---|
| | ಗಂಡು | ಹೆಣ್ಣು | ಗಂಡು | ಹೆಣ್ಣು | ಗಂಡು | ಹೆಣ್ಣು |
| ೧೯೪೧ | ೩,೨೦,೭೭೨ | ೩,೧೪,೮೧೬ | ೪೫,೭೨೯ | ೮,೨೨೮ | ೧೪.೨ | ೨.೬ |
| ೧೯೫೧ | ೩,೬೦,೫೩೦ | ೩,೫೭,೦೧೫ | ೮೩,೧೯೪ | ೧೮,೮೫೧ | ೨೩.೧ | ೫.೩ |
| ೧೯೬೧ | ೪,೫೭,೧೪೩ | ೪,೪೨,೦೬೭ | ೧,೨೦,೯೧೨ | ೩೪,೭೩೯ | ೨೬.೩ | ೭.೮ |
| ೧೯೭೧ | ೫,೮೮,೨೬೯ | ೫,೬೪,೪೯೪ | ೧,೮೫,೪೪೭ | ೭೧,೫೬೦ | ೩೧.೫೨ | ೧೨.೬೮ |

ಇತ್ತೀಚಿನ ಎರಡು ದಶಕಗಳಲ್ಲಿ ಮಂಡ್ಯ ಜಿಲ್ಲೆಯ ಸಾಕ್ಷರತಾ ಪ್ರಮಾಣ ಗಣನೀಯವಾಗಿ ಅಧಿಕಗೊಂಡಿದ್ದು, ಸಾಮಾಜಿಕ ಹಾಗೂ ರಾಜಕೀಯವಾಗಿ ಜನಜಾಗೃತಿ ಉಂಟಾಗಿದೆ. ೧೯೯೧ರ ಜನಗಣತಿಯಂತೆ ಜಿಲ್ಲೆಯಲ್ಲಿ ೦–೬ ವಯಸ್ಸಿಗಿಂತ ಮೇಲ್ಪಟ್ಟವರ ಜನಸಂಖ್ಯೆ ಒಟ್ಟು(ಆರು ವಯುಸ್ಸಿಗಿಂತ ಕಡಿಮೆ ವಯಸ್ಕರನ್ನು ಸಾಕ್ಷರತೆಗೆ ಪರಿಗಣಿಸಿಲ್ಲ) ೧೪,೦೩,೦೧೮ ಆಗಿದ್ದು, ಇವರಲ್ಲಿ ಒಟ್ಟು ೬೭೫,೫೦೨ ಮಂದಿ ಸಾಕ್ಷರರಾಗಿದ್ದರು. ಇದು ೧೯೮೧ರ ಸಾಕ್ಷರತೆಗಿಂತ ಶೇ.೯.೦೨ ಹೆಚ್ಚಾಗಿದ್ದಿತು.

**ಗಂಡಸರಲ್ಲಿ ಸಾಕ್ಷರತೆ :** ೧೯೯೧ರ ಜನಗಣತಿಯಂತೆ ೦–೬ ವಯಸ್ಸಿಗಿಂತ ಮೇಲ್ಪಟ್ಟ ಗಂಡಸರ ಜನಸಂಖ್ಯೆ ಒಟ್ಟು ೭೧೪,೩೯೩ ಆಗಿದ್ದು, ಇವರಲ್ಲಿ ಒಟ್ಟು ೪೨೨,೭೮೧ ಮಂದಿ, ಅಥವಾ ೫೯.೧೮ ಶೇಕಡಾ ಸಾಕ್ಷರರಾಗಿದ್ದರು. ಇದರಲ್ಲಿ ನಗರ ಪ್ರದೇಶದ ಸಾಕ್ಷರತೆ ಶೇಕಡಾ ೭೫.೭೫ ಹಾಗೂ ಗ್ರಾಮೀಣ ಪ್ರದೇಶದ ಸಾಕ್ಷರತೆ ಶೇಕಡಾ ೫೫.೮೯ ಆಗಿದ್ದಿತು. ಇದು ೧೯೮೧ರ ಸಾಕ್ಷರತೆಗಿಂತ ಶೇ.೧೦.೭೨ ಹೆಚ್ಚಾಗಿದ್ದಿತು.

**ಹೆಂಗಸರಲ್ಲಿ ಸಾಕ್ಷರತೆ :** ೦–೬ ವಯೋಮಿತಿ ಮೇಲ್ಪಟ್ಟ ಹೆಂಗಸರ ಜನಸಂಖ್ಯೆ ಜಿಲ್ಲೆಯಲ್ಲಿ ೧೯೯೧ರ ಜನಗಣತಿಯಂತೆ ಒಟ್ಟು ೬,೮೮,೬೨೫ ಆಗಿದ್ದು ಇವರಲ್ಲಿ ಒಟ್ಟು ೨೫೨,೭೨೧ ಮಂದಿ ಅಥವಾ ಶೇಕಡಾ ೩೭.೯೫ ಮಂದಿ ಸಾಕ್ಷರರಾಗಿದ್ದರು. ನಗರ ಪ್ರದೇಶದಲ್ಲಿ ಹೆಂಗಸರ ಸಾಕ್ಷರತೆ ಶೇಕಡಾ ೪೩.೫೯ ಹಾಗೂ ಗ್ರಾಮೀಣ ಪ್ರದೇಶದಲ್ಲಿ ಹೆಂಗಸರ ಸಾಕ್ಷರತೆ ೧೬.೪೮ ಆಗಿದ್ದಿತು. ಇದು ೧೯೮೧ ಸಾಕ್ಷರತೆಗಿಂತ ಶೇ.೧೨.೮೮ ರಷ್ಟು ಹೆಚ್ಚಾಗಿದ್ದಿತು.

**೧೯೯೧ರ ಜನಗಣತಿಯಂತೆ ಜಿಲ್ಲೆಯಲ್ಲಿ ವಿವಿಧ ಶೈಕ್ಷಣಿಕ ಹಂತಗಳಲ್ಲಿ ಶೇಕಡವಾರು ಜನಸಂಖ್ಯೆ ಈ ರೀತಿ ಹಂಚಲ್ಪಟ್ಟಿದ್ದಿತು.**

| | |
|---|---|
| ಪ್ರಾಥಮಿಕ\ ಮಾಧ್ಯಮಿಕ ಹಂತ | ಶೇ. ೪೮.೮೩ |
| ಪ್ರೌಢ\ಪಿ.ಯು.ಸಿ.\ಡಿಪ್ಲೊಮಾ ಹಂತ | ಶೇ. ೨೦.೪೯ |
| ಪದವಿ ಹಾಗೂ ಮೇಲ್ಪಟ್ಟ ಹಂತ | ಶೇ. ೦೩.೮೬ |
| ವಿದ್ಯಾಮಟ್ಟವೇ ಇಲ್ಲದ ಅನಕ್ಷರಸ್ಥರು | ಶೇ. ೨೬.೮೨ |

೧೯೯೧ರ ಜನಗಣತಿಯಂತೆ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲೆಗಳಿಗೆ ಸೇರಬೇಕಾದ ಒಟ್ಟು ಗಂಡು ಮಕ್ಕಳ ಸಂಖ್ಯೆ ೧,೭೫,೪೦೫ ಆಗಿದ್ದು, ಇವರಲ್ಲಿ ೫೫,೬೧೦ ಅಥವಾ ಶೇಕಡಾ ೩೧.೭೦ ಮಂದಿ ಮಾತ್ರ ಶಾಲೆಗಳಿಗೆ ದಾಖಲಾಗಿದ್ದರು.

ಇದೇ ವರ್ಷಕ್ಕೆ ಮೇಲ್ಕಂಡ ಶಾಲೆಗಳಿಗೆ ಸೇರಬೇಕಾದ ಹೆಣ್ಣು ಮಕ್ಕಳ ಸಂಖ್ಯೆ ೧,೭೮,೭೫೭ ಆಗಿದ್ದು, ಇವರಲ್ಲಿ ೪೨,೭೦೦ ಮಂದಿ ಅಥವಾ ಶೇಕಡಾ ೨೩.೮೯ ಮಾತ್ರ ಶಾಲೆಗಳಿಗೆ ದಾಖಲಾಗಿದ್ದರು.

ಪ್ರಾಥಮಿಕ ಹಂತದಲ್ಲಿ ಜಿಲ್ಲೆಯ ಒಟ್ಟು ಮಕ್ಕಳ ಸಂಖ್ಯೆ ೨೬೭,೦೨೨ ಆಗಿದ್ದು, ಇವರಿಗೆ ಬೋಧಿಸಲು ಒಟ್ಟು ೫,೫೦೬ ಅಂದರೆ ಪ್ರತೀ ೧,೦೦೦ ಮಕ್ಕಳಿಗೆ ೨೧ ಮಂದಿ ಶಿಕ್ಷಕರಿದ್ದರು.

ಪ್ರೌಢಶಾಲಾ ಹಂತದಲ್ಲಿ ಮಕ್ಕಳ ಸಂಖ್ಯೆ ೪೦,೩೧೬ ಆಗಿದ್ದು, ಒಟ್ಟು ಶಿಕ್ಷಕರ ಸಂಖ್ಯೆ ೧,೦೦೭ ಆಗಿದ್ದಿತು. ಅಂದರೆ ಪ್ರತೀ ೧,೦೦೦ ಮಕ್ಕಳಿಗೆ ೨೫ ಮಂದಿ ಬೋಧಕ ಸಿಬ್ಬಂದಿ ಇದ್ದರು.

ಇದೇ ದಶಕದಲ್ಲಿ ಜಿಲ್ಲೆಯ ನಗರಪ್ರದೇಶದಲ್ಲಿ ಏಳರಿಂದ ೧೪ ವರ್ಷ ವಯೋಮಾನದ ಒಟ್ಟು ೫೨,೮೯೦ ಮಂದಿ ಇದ್ದು, ಇವರಲ್ಲಿ ಒಟ್ಟು ೪೫,೨೪೧ (ಶೇ.೮೫.೫೩) ಮಂದಿ ಅಕ್ಷರಸ್ಥರಿದ್ದರು. ಹಾಗೂ ೧೫ ರಿಂದ ೩೪ ವರ್ಷ ವಯೋಮಾನದ ಒಟ್ಟು ೯೯,೪೮೬ ಮಂದಿಯಲ್ಲಿ ಒಟ್ಟು ೭೧,೨೯೬ (ಶೇ.೭೧.೬೬) ಅಕ್ಷರಸ್ಥರಿದ್ದರು.

ಗ್ರಾಮೀಣ ಪ್ರದೇಶದಲ್ಲಿ ಏಳರಿಂದ ೧೪ ವರ್ಷ ವಯೋಮಾನದ ಒಟ್ಟು ೨,೬೫,೪೯೧ ಮಂದಿಯಲ್ಲಿ ೧,೯೪,೮೫೧ (ಶೇ. ೭೩.೩೯) ಮಂದಿಯೂ, ೧೫ ರಿಂದ ೩೪ ವರ್ಷ ವಯೋಮಾನದ ೪,೬೯,೯೧೪ ಮಂದಿಯಲ್ಲಿ ೨,೧೩,೬೮೨ (ಶೆ.೪೫.೪೭) ಮಂದಿಯೂ ಅಕ್ಷರಸ್ಥರಾಗಿದ್ದರು. ೨೦೦೧ರ ತಾತ್ಕಾಲಿಕ ಜನಗಣತಿಯಲ್ಲಿ ಆರು ವರ್ಷಗಳಿಗೆ ಮೇಲ್ಪಟ್ಟ ವ್ಯಕ್ತಿಗಳನ್ನೂ ಗಣತಿಗೆ ಒಳಪಡಿಸಿದ್ದು, ಈ ದಶಕದಲ್ಲಿ ಜಿಲ್ಲೆಯ ಒಟ್ಟು ಸಾಕ್ಷರತಾ ಪ್ರಮಾಣ ೬೧.೨೧ ಆಗಿದ್ದಿತು. ಜಿಲ್ಲೆಯ ಒಟ್ಟು ಜನಸಂಖ್ಯೆ ೧೭,೬೧,೭೧೮ ಆಗಿದ್ದು, ಇವರಲ್ಲಿ ೮,೮೭,೩೦೭ ಗಂಡಸರು, ೮,೭೪,೪೧೧ ಹೆಂಗಸರೂ ಇದ್ದರು. ೦–೬ ವಯೋಮಾನದವರ ಸಂಖ್ಯೆ ೧,೯೧,೬೭೭ ಆಗಿದ್ದು, ಇವರಲ್ಲಿ ೯೮,೯೪೯ ಗಂಡು ಮತ್ತು ೯೨,೭೨೮ ಹೆಣ್ಣು ಮಕ್ಕಳಿದ್ದರು. ಜಿಲ್ಲೆಯ ಒಟ್ಟು ಅಕ್ಷರಸ್ಥರ ಸಂಖ್ಯೆ ೯೬೦,೯೪೮ (ಶೇ.೬೧.೨೧) ಆಗಿದ್ದು, ಇವರಲ್ಲಿ ೫,೫೭,೪೩೫ ಗಂಡಸರು (ಶೇಕಡ ೭೪.೪೩) ಹಾಗೂ ೪,೦೩,೫೧೩ ಅಂದರೆ (ಶೇ. ೫೧.೬೨) ಹೆಂಗಸರು ಇದ್ದರು. ಹಿಂದಿನ ದಶಕದಲ್ಲಿ ಜಿಲ್ಲೆಯ ಒಟ್ಟು ಸಾಕ್ಷರತಾ ಪ್ರಮಾಣ ಶೇ.೫೬.೦೪ ಆಗಿದ್ದು, ಗಂಡಸರಲ್ಲಿ ಶೇ.೬೭.೨೬ ಮತ್ತು ಹೆಂಗಸರಲ್ಲಿ ಶೇ.೪೪.೩೪ ಆಗಿದ್ದುದಕ್ಕೆ ಹೋಲಿಸಿದಾಗ ಜಿಲ್ಲೆಯು ಸಾಕ್ಷರತೆಯಲ್ಲಿ ಸಾಧಿಸಿರುವ ಮುನ್ನಡೆಯನ್ನು ಕಾಣಬಹುದಾಗಿದೆ.

## ಪೂರ್ವ ಪ್ರಾಥಮಿಕ ಶಿಕ್ಷಣ

ಪ್ರಾಥಮಿಕ ಶಿಕ್ಷಣದ ವಿಸ್ತರಣದೊಡನೆಯೇ ಶಿಶುವಿಹಾರಗಳು ಪ್ರಾರಂಭವಾಗಿ ಪೂರ್ವ ಪ್ರಾಥಮಿಕ ಶಿಕ್ಷಣದ ಅಗತ್ಯ ಹಾಗೂ ಪ್ರಾಮುಖ್ಯತೆಯನ್ನು ಸರ್ಕಾರ ಹಾಗೂ ಖಾಸಗಿ ಸಂಸ್ಥೆಗಳು ಮನಗಂಡಿದ್ದರೂ, ಇದರ ಬೆಳವಣಿಗೆ ವೈಜ್ಞಾನಿಕ ಚೌಕಟ್ಟಿಗೆ ಒಳಪಟ್ಟಿದ್ದು ೧೯೭೦ರ ನಂತರವೇ. ಇದಕ್ಕೆ ಪಂಚವಾರ್ಷಿಕ ಯೋಜನೆಗಳಲ್ಲಿಯೂ ಒತ್ತು ಸಿಕ್ಕಿ, ತಾಯ್ತಂದೆಗಳು ತಮ್ಮ ಮಕ್ಕಳನ್ನು ಪ್ರಾಥಮಿಕ ಶಾಲೆಗಳಿಗೆ ಸೇರಿಸುವ ಮುನ್ನ ಅವರಿಗೆ ಶಾಲೆಯ ಶಿಸ್ತಿನ ಬಗ್ಗೆ, ಕಾರ್ಯಚಟುವಟಿಕೆಗಳ ಬಗ್ಗೆ, ಮುಖ್ಯವಾಗಿ ಅವರಲ್ಲಿ ಶಾಲೆಗೆ ಹೋಗುವ ಅಭ್ಯಾಸ ಬೆಳೆಸುವ ಬಗ್ಗೆ ಮಾನಸಿಕ ತಯಾರಿ ನೀಡಲು ಪೂರ್ವ ಪ್ರಾಥಮಿಕ ಶಾಲೆಗಳೇ ಸೂಕ್ತವೆಂಬ ಸಂಗತಿಯನ್ನು ಮನಗಂಡರು.

ಪ್ರಾಥಮಿಕ ಪೂರ್ವ ಹಂತದಲ್ಲಿ ಯಾವುದೇ ಔಪಚಾರಿಕ ಪದ್ಧತಿಯ ಶಿಕ್ಷಣ ನೀಡಲ್ಪಡುವುದಿಲ್ಲ. ಇದು ರಾಜ್ಯ ಸರ್ಕಾರದ ಹೊಣೆಯಾದರೂ, ಈ ಕಾರ್ಯದಲ್ಲಿ ತೊಡಗಿರುವ ಖಾಸಗಿ ಸಂಸ್ಥೆಗಳು ವಿವಿಧ ರೀತಿಯ ಸಹಾಯ ಮಾಡುತ್ತವೆ. ಮೂರರಿಂದ ಆರು ವರ್ಷಗಳೊಳಗಿನ ಮಕ್ಕಳಿಗಾಗಿ ನೀಡಲ್ಪಡುವ ಪೂರ್ವ ಪ್ರಾಥಮಿಕ ಶಿಕ್ಷಣ ಬಹುತೇಕ ಖಾಸಗಿ ಸಂಸ್ಥೆಗಳ ಜವಾಬ್ದಾರಿಯಾಗಿದೆ. ಇದರಲ್ಲಿ ಸರ್ಕಾರ ನೇರ ಹಸ್ತಕ್ಷೇಪ ಮಾಡುವುದಿಲ್ಲವಾದರೂ, ಇದಕ್ಕೆ ಎಲ್ಲ ರೀತಿಯ ಸಹಾಯ ಹಾಗೂ ಪ್ರೋತ್ಸಾಹಗಳನ್ನು ನೀಡುತ್ತದೆ. ಹಾಗಾಗಿ ನರ್ಸರಿ ಶಾಲೆಗಳಿಗೆ ಸರ್ಕಾರದ ಧನ ಸಹಾಯವೂ ದೊರೆಯುತ್ತದೆ.

ಪ್ರಾಥಮಿಕ ಪೂರ್ವಹಂತದಲ್ಲಿ ಮಕ್ಕಳ ದೈಹಿಕ ಹಾಗೂ ಮಾನಸಿಕ ವಿಕಸನ, ವೈಯಕ್ತಿಕ ಶುಚಿತ್ವದ ಅರಿವು, ಪರಸ್ಪರ ಸಹಾಯ, ಸ್ವಾವಲಂಬನೆ, ಸಹಕಾರ, ಮಾತೃಭಾಷೆಯ ಪ್ರಭಾವಶಾಲಿ ಬಳಕೆ, ಇವೇ ಮುಂತಾದವುಗಳನ್ನು ಬೆಳೆಸುವ ಮೂಲೋದ್ದೇಶಗಳನ್ನು ಹೊಂದಿರುವ ಈ ಶೈಕ್ಷಣಿಕ ಹಂತದ ಪ್ರಾಮುಖ್ಯತೆಯನ್ನು ಸಾರ್ವಜನಿಕರು ಹೆಚ್ಚು ಹೆಚ್ಚಾಗಿ ಮನಗಾಣುತ್ತಿದ್ದಾರೆ. ೧೯೭೦ರ ದಶಕದ ನಂತರ ಜನಪ್ರಿಯವಾದ ಈ ಶಿಕ್ಷಣ ಹಂತ, ಪ್ರಾರಂಭದಲ್ಲಿ ಪಟ್ಟಣ ಪ್ರದೇಶಗಳಲ್ಲಿ ಮಾತ್ರ ಮನ್ನಣೆ ಪಡೆಯಿತು. ಇದನ್ನು ಗ್ರಾಮೀಣ ಪ್ರದೇಶಗಳಿಗೂ ವಿಸ್ತರಿಸುವ ಅವಶ್ಯಕತೆಯನ್ನು ಮನಗಂಡ ಸರ್ಕಾರ, ಇಂತಹ ಶಾಲೆಗಳನ್ನು ಗ್ರಾಮೀಣ ಪ್ರದೇಶಗಳಲ್ಲಿ ಪ್ರಾರಂಭಿಸುವ ಸಂಸ್ಥೆಗಳಿಗೆ ಶೇ.೭೦ ರಷ್ಟು ಅನುದಾನವನ್ನು ನೀಡಲು ಕ್ರಮಕೈಗೊಂಡಿತು. ನಗರ ಪ್ರದೇಶಗಳಲ್ಲಿನ ಇಂತಹ ಶಾಲೆಗಳು ಶೇ.೫೦ ಅನುದಾನ ಪಡೆಯುತ್ತಿದ್ದವು. ೧೯೬೫ರ ಮಾರ್ಚ್ ತಿಂಗಳಿನಲ್ಲಿದ್ದಂತೆ ಜಿಲ್ಲೆಯಲ್ಲಿ ಒಟ್ಟು ೪೨ ಪೂರ್ವ ಪ್ರಾಥಮಿಕ ಶಾಲೆಗಳಿದ್ದು, ಅವುಗಳಲ್ಲಿ ಒಟ್ಟು ೧,೯೦೭ (೯೬೬ ಗಂಡು, ೯೪೧ ಹೆಣ್ಣು) ಮಕ್ಕಳಿದ್ದರು.

## ಪ್ರಾಥಮಿಕ ಶಿಕ್ಷಣ

ಮಂಡ್ಯ ಸ್ವತಂತ್ರ ಜಿಲ್ಲೆಯಾಗುವ ವೇಳೆಗೆ ಸರಿಯಾಗಿ ಮೈಸೂರು ಪ್ರಾಥಮಿಕ ಶಿಕ್ಷಣ ಕಾಯ್ದೆ ಜಾರಿಯಾದರೂ ೧೯೩೧-೩೨ ರ ಆರ್ಥಿಕ ಮುಗ್ಗಟ್ಟಿನಿಂದಾಗಿ ಜಿಲ್ಲೆಯ ಶೈಕ್ಷಣಿಕ ರಂಗದಲ್ಲಿ ಯಾವುದೇ ಗಣನೀಯ ಅಭಿವೃದ್ಧಿಯಾಗಿರಲಿಲ್ಲ. ಅನಕ್ಷರತೆ ಹೋಗಲಾಡಿಸಿ ಪ್ರಾಥಮಿಕ ಶಿಕ್ಷಣದ ಅಭಿವೃದ್ಧಿಗಾಗಿ ಮಾರ್ಗೋಪಾಯ ಗಳನ್ನು ಸೂಚಿಸಲು, ೧೯೩೭ರಲ್ಲಿ ಸರ್ಕಾರ ಸಮಿತಿಯೊಂದನ್ನು ರಚಿಸಿತು. ಮೇಲ್ಕಂಡ ವಿಷಯಗಳನ್ನು ಕೂಲಂಕಷವಾಗಿ ಪರಿಶೀಲಿಸಿದ ಸಮಿತಿ, ಈ ಹಂತದ ಶಿಕ್ಷಣವನ್ನು ಸರ್ಕಾರವೇ ವಹಿಸಿಕೊಳ್ಳುವುದು ಸೂಕ್ತವೆಂದು ಶಿಫಾರಸ್ಸು ಮಾಡಿತು.

ಇದನ್ನು ಅಳವಡಿಸಿಕೊಂಡು ಸರ್ಕಾರ ಗ್ರಾಮಾಂತರ ಪ್ರದೇಶದ ಮಕ್ಕಳಿಗೆ ಪ್ರಾಥಮಿಕ ಶಿಕ್ಷಣ ದೊರೆಯುವ ವ್ಯವಸ್ಥೆ ಮಾಡಿತು. ಶಾಲಾ ನಿರ್ವಹಣೆಯ ಒಟ್ಟು ವೆಚ್ಚದ ಶೇ.೭೦ರಷ್ಟು ಹಣವನ್ನು ಸರ್ಕಾರ ನೀಡಿತು. ಇದರಿಂದ ಹಲವಾರು ಸ್ಥಳೀಯ ಖಾಸಗಿ ಸಂಸ್ಥೆಗಳು ಶಾಲೆಗಳನ್ನು ತೆರೆಯಲು ಮುಂದಾದವು. ಹಾಗಾಗಿ ಜಿಲ್ಲೆಯಾದ್ಯಂತ ಖಾಸಗಿ ಶಾಲೆಗಳ ಸಂಖ್ಯೆ ಹೆಚ್ಚಿತು.

ಆದರೆ ಸ್ಥಳೀಯ ಸಂಸ್ಥೆಗಳಿಂದ ನಡೆಸಲ್ಪಟ್ಟ ಶಾಲೆಗಳ ಅಭಿವೃದ್ಧಿ ನಿರೀಕ್ಷಿತ ಫಲ ನೀಡಲಿಲ್ಲವಾಗಿ, ಇವುಗಳನ್ನು ಸರ್ಕಾರ ತಾನೇ ವಹಿಸಿಕೊಂಡಿತು. ಪ್ರಾಥಮಿಕ ಹಂತದ ವಿದ್ಯಾಭ್ಯಾಸ ಕ್ರಮವನ್ನು ಉತ್ತಮಪಡಿಸಲು ೧೯೪೧ರಲ್ಲಿ ಪ್ರಾಥಮಿಕ ಶಿಕ್ಷಣ ಕಾಯ್ದೆಯನ್ನು ಸರ್ಕಾರ ಜಾರಿ ಮಾಡಿತು. ಇದರಂತೆ ಪಟ್ಟಣ ಪ್ರದೇಶಗಳಲ್ಲಿ ೫೦೦ ಮಂದಿಯ ಪ್ರಜಾ ಸಂಖ್ಯೆಗೂ, ಗ್ರಾಮಾಂತರ ಪ್ರದೇಶದಲ್ಲಿ ೩೦೦ ಮಂದಿ ಪ್ರಜಾ ಸಂಖ್ಯೆಗೂ ತಲಾ ಒಂದರಂತೆ, ಒಂದರಿಂದ ನಾಲ್ಕನೇ ತರಗತಿಗಳನ್ನೊಳಗೊಂಡ ಕಿರಿಯ ಪ್ರಾಥಮಿಕ ಶಾಲೆಗಳನ್ನು ತೆರೆಯಲಾಯಿತು. ಈ ಶಾಲೆಗಳಲ್ಲಿ ಭಾಷೆಗಳೇ ಅಲ್ಲದೇ ಚರಿತ್ರೆ, ಭೂಗೋಳ, ಗಣಿತ, ಸಂಗೀತ, ಪ್ರಕೃತಿಪಾಠ ಹಾಗೂ ನೀತಿಪಾಠಗಳನ್ನು ಬೋಧಿಸಲಾಗುತ್ತಿತ್ತು.

ಮೇಲಿನ ನಾಲ್ಕು ತರಗತಿಗಳ ನಂತರ ಶಿಕ್ಷಣ ಮುಂದುವರೆಸಲು ಮೂರು ವರ್ಷ ಅವಧಿಯ ಮಾಧ್ಯಮಿಕ ಶಾಲೆಗಳನ್ನು ನ್ಯೂ ಟೈಪ್ ಮಿಡ್ಸ್ ಸ್ಕೂಲ್(ಎನ್.ಟಿ.ಎಂ.ಎಸ್)ಗಳೆಂಬ ಹೆಸರಿನಲ್ಲಿ ಪ್ರಾರಂಭಿಸಲಾಯಿತು.

೧೯೪೧ರ ಪ್ರಾಥಮಿಕ ಶಿಕ್ಷಣ ಕಾಯ್ದೆಯಂತೆ, ೧೯೪೭ ಆಗಸ್ಟ್ ೧ ರಿಂದ ಈ ಕಡ್ಡಾಯ ಕಾಯ್ದೆ ರಾಜ್ಯದ ಎಲ್ಲೆಡೆ ಜಾರಿಯಾಗಬೇಕೆಂಬ ಸರ್ಕಾರಿ ಕಾನೂನಿನಂತೆ, ಮಂಡ್ಯ ತಾಲೂಕಿನ ಕೊತ್ತತ್ತಿಯಲ್ಲಿ ೧೯೪೭–೪೮ನೇ ವರ್ಷ ಕಡ್ಡಾಯ ಪ್ರಾಥಮಿಕ ಶಿಕ್ಷಣ ಕಾಯ್ದೆ ಜಾರಿಯಾಯಿತು. ಮರುವರ್ಷದಿಂದ ಇದು ಇಡೀ ಜಿಲ್ಲೆಗೆ ಅನ್ವಯವಾಯಿತು. ಆದರೆ ನಿರೀಕ್ಷಿತ ಫಲ ದೊರೆಯಲಿಲ್ಲವಾಗಿ, ೧೯೫೦–೫೧ ರಿಂದ ಈ ಕಾಯ್ದೆ ರದ್ದಾಯಿತು.

ಜಿಲ್ಲೆಯಲ್ಲಿ ಈಗಾಗಲೇ ಪ್ರಾರಂಭಿಸಲ್ಪಟ್ಟ ಹಲವಾರು ಪ್ರಾಥಮಿಕ ಶಾಲೆಗಳ ಸಂಖ್ಯೆ ೧೯೫೯–೬೦ ನೇ ಸಾಲಿಗೆ ೯೨೯ ಆಗಿದ್ದು, ಅವುಗಳಲ್ಲಿ ಒಟ್ಟು ೪೫,೧೯೫ (೩೦,೯೮೮ ಗಂಡು, ೧೪,೧೦೭ ಹೆಣ್ಣು) ಮಕ್ಕಳು ವ್ಯಾಸಂಗ ಮಾಡುತ್ತಿದ್ದರು. ೧೯೬೪–೬೫ ಶೈಕ್ಷಣಿಕ ವರ್ಷಕ್ಕೆ ಇಂತಹ ಶಾಲೆಗಳ ಒಟ್ಟು ಸಂಖ್ಯೆ ೧೧೨೭ಕ್ಕೆ ಹೆಚ್ಚಳಗೊಂಡು ಒಟ್ಟು ಮಕ್ಕಳ ಸಂಖ್ಯೆ ೭೯,೨೭೨ (೪೪,೧೭೭ ಗಂಡು ಮತ್ತು ೩೫,೧೯೫ ಹೆಣ್ಣು) ಆಯಿತು. ೧೯೬೦ರ ವೇಳೆಗೆ ಜಿಲ್ಲೆಯಲ್ಲಿ ೧೧೧ ನ್ಯೂ ಟೈಪ್ ಮಿಡ್ಲ್ ಸ್ಕೂಲ್‌ಗಳಿದ್ದು, ಇವುಗಳಲ್ಲಿ ಒಟ್ಟು ೧೬,೪೬೮ (೧೧,೪೭೧ ಗಂಡು ಹಾಗೂ ೪,೯೯೭ ಹೆಣ್ಣು)ಮಕ್ಕಳಿದ್ದರು. ನ್ಯೂ ಟೈಪ್ ಮಿಡ್ಲ್ ಸ್ಕೂಲ್‌ಗಳಲ್ಲಿ ಹಲವು ಒಂದರಿಂದ ಏಳರವರೆಗೆ ತರಗತಿಗಳನ್ನು ಹೊಂದಿದ ಶಾಲೆಗಳಾಗಿದ್ದು, ಇವುಗಳಲ್ಲಿ ಹೆಣ್ಣು ಹಾಗೂ ಗಂಡುಮಕ್ಕಳಿಬ್ಬರಿಗೂ ಪ್ರವೇಶವಿದ್ದಿತು. ೧೯೬೫ರಲ್ಲಿದ್ದಂತೆ ಅಂತಹ ಶಾಲೆಗಳ ತಾಲೂಕುವಾರು ವಿವರ ಈ ಮುಂದಿನ ಕೋಷ್ಟಕದಲ್ಲಿ ನೀಡಲಾಗಿದೆ.

**ಕೋಷ್ಟಕ ೧೩.೨**

| ತಾಲೂಕು | ಶಾಲೆಗಳ ಸಂಖ್ಯೆ | ಮಕ್ಕಳ ಸಂಖ್ಯೆ | | ಬೋಧಕ ಸಿಬ್ಬಂದಿ ಸಂಖ್ಯೆ | |
|---|---|---|---|---|---|
| | | ಗಂಡು | ಹೆಣ್ಣು | ಗಂಡು | ಹೆಣ್ಣು |
| ಮಂಡ್ಯ | ೩೫ | ೫೧೩೩ | ೨೯೪೪ | ೧೮೬ | ೩೧ |
| ಮಳವಳ್ಳಿ | ೨೬ | ೩೨೨೮ | ೧೮೮೭ | ೧೩೩ | ೦೨ |
| ಮದ್ದೂರು | ೨೮ | ೩೭೮೨ | ೨೧೦೩ | ೧೭೩ | ೦೨ |
| ಶ್ರೀರಂಗಪಟ್ಟಣ | ೧೭ | ೨೧೨೭ | ೧೫೧೪ | ೯೩ | ೦೫ |
| ಪಾಂಡವಪುರ | ೧೩ | ೧೫೭೪ | ೮೪೩ | ೬೫ | — |
| ಕೃಷ್ಣರಾಜಪೇಟೆ | ೨೭ | ೨೮೩೦ | ೧೯೦೬ | ೧೨೬ | ೦೪ |
| ನಾಗಮಂಗಲ | ೨೫ | ೨೨೯೪ | ೧೮೮ | ೯೭ | — |
| ಉರ್ದು ಶಾಲೆಗಳು (ಮಂಡ್ಯ) | ೧೩ | ೧೩೨೬ | ೪೭೩ | ೫೭ | ೦೩ |
| ಒಟ್ಟು | ೧೮೪ | ೩೨೫೮೪ | ೧೫೬೨೮ | ೯೩೦ | ೪೭ |

ಕ್ರಮೇಣ ಇಂತಹ ಮಾಧ್ಯಮಿಕ ಶಾಲೆಗಳನ್ನು ಸರ್ಕಾರ ರದ್ದುಪಡಿಸಿತು.

**೧೯೬೧ರ ಕಡ್ಡಾಯ ಪ್ರಾಥಮಿಕ ಶಿಕ್ಷಣ ಕಾಯ್ದೆ**

ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಸರ್ಕಾರ ಪ್ರಾಥಮಿಕ ಶಿಕ್ಷಣಕ್ಕೆ ಹೆಚ್ಚಿನ ಪ್ರಾಮುಖ್ಯತೆ

ನೀಡಿತು. ೧೯೬೧–೬೨ ರಿಂದ ಪ್ರಾರಂಭಿಸಿ, ೧೯೬೫–೬೬ರ ಒಳಗಿನ ಅವಧಿಯಲ್ಲಿ ಆರರಿಂದ ೧೧ ವರ್ಷದ ವಯೋಮಾನದ ಎಲ್ಲಾ ಮಕ್ಕಳಿಗೂ ಪ್ರಾಥಮಿಕ ಶಿಕ್ಷಣವನ್ನು ಕಡ್ಡಾಯವಾಗಿಯೂ ಉಚಿತವಾಗಿಯೂ ನೀಡಬೇಕೆಂದು ಆಜ್ಞೆ ಮಾಡಿತು. ಇದಕ್ಕೆ ಅನುಗುಣವಾಗಿ ಮೈಸೂರು ಸರ್ಕಾರ ಆರರಿಂದ ಏಳು ವರ್ಷದ ಮಕ್ಕಳಿಗೆ ಈ ಹಂತದ ಶಿಕ್ಷಣವನ್ನು ಒದಗಿಸುವ ಸಲುವಾಗಿ ೧೯೬೧ರಲ್ಲಿ ಮೈಸೂರು ಕಡ್ಡಾಯ ಪ್ರಾಥಮಿಕ ಶಿಕ್ಷಣ ಕಾಯ್ದೆ ಜಾರಿ ಮಾಡಿತು.

**ಕೋಷ್ಟಕ ೧೩.೩ ೧೯೬೫ ರಲ್ಲಿ ಜಿಲ್ಲೆಯಲ್ಲಿ ಕಿರಿಯ ಪ್ರಾಥಮಿಕ ಶಾಲೆಗಳ ತಾಲೂಕುವಾರು ವಿವರ ಹೀಗಿದ್ದಿತು.**

| ತಾಲೂಕು | ಒಟ್ಟು ಶಾಲೆಗಳು | ಒಟ್ಟು ಮಕ್ಕಳು | ಗಂಡು | ಹೆಣ್ಣು |
|---|---|---|---|---|
| ಮಂಡ್ಯ | ೧೪೯ | ೧೨,೩೫೭ | ೬,೮೦೭ | ೫,೫೫೦ |
| ಮದ್ದೂರು | ೧೫೨ | ೧೦,೪೮೦ | ೬,೨೩೦ | ೪,೨೫೦ |
| ಮಳವಳ್ಳಿ | ೧೬೧ | ೧೧,೩೩೪ | ೬,೫೬೬ | ೪,೭೬೮ |
| ಶ್ರೀರಂಗಪಟ್ಟಣ | ೬೮ | ೪,೮೦೦ | ೨,೯೯೪ | ೧,೮೦೬ |
| ಪಾಂಡವಪುರ | ೧೦೨ | ೭,೦೩೦ | ೪,೧೯೭ | ೨,೮೩೩ |
| ನಾಗಮಂಗಲ | ೧೭೨ | ೮,೪೪೫ | ೪,೯೩೬ | ೩,೫೦೯ |
| ಕೃಷ್ಣರಾಜಪೇಟೆ | ೧೭೨ | ೧೧,೫೪೫ | ೬,೪೭೯ | ೫,೦೬೬ |
| ಒಟ್ಟು: | ೯೮೬ | ೬೫,೯೯೧ | ೩೮,೨೦೯ | ೨೭,೭೮೨ |

ಇವಲ್ಲದೆ ಈ ವರ್ಷ ಜಿಲ್ಲೆಯಲ್ಲಿ ಹೆಣ್ಣು ಮಕ್ಕಳಿಗಾಗಿಯೇ ೧೪ ಪ್ರಾಥಮಿಕ ಶಾಲೆಗಳಿದ್ದು, ಅವುಗಳಲ್ಲಿ ಒಟ್ಟು ೨,೧೨೭ ಮಕ್ಕಳು ಹಾಗೂ ೧೨ ಉರ್ದು, ಒಂದು ತಮಿಳು ಮತ್ತು ಒಂದು ತೆಲಗು ಶಾಲೆಗಳಿದ್ದು, ಅವುಗಳಲ್ಲಿ ಒಟ್ಟು ೧,೧೪೯ ಮಕ್ಕಳು ವ್ಯಾಸಂಗ ಮಾಡುತ್ತಿದ್ದರು. ಅಲ್ಲದೆ, ಇವುಗಳ ಜೊತೆಗೆ ಜಿಲ್ಲೆಯಲ್ಲಿ ೧,೭೦೪ ಮಕ್ಕಳನ್ನು ಹೊಂದಿದ್ದ ಆರು ಕನ್ನಡ ಹೆಣ್ಣು ಮಕ್ಕಳ ಶಾಲೆಗಳೂ, ೩೩೬ ಮಕ್ಕಳನ್ನು ಹೊಂದಿದ್ದ ಎರಡು ಉರ್ದು ಹೆಣ್ಣುಮಕ್ಕಳ ಶಾಲೆಗಳೂ ಕಾರ್ಯ ನಿರ್ವಹಿಸುತ್ತಿದ್ದವು.

೧೯೭೫ರ ವೇಳೆಗೆ ಜಿಲ್ಲೆಯಲ್ಲಿ ಪ್ರತೀ ೧.೩ ಚದರ ಕಿ.ಮೀ.ಗೆ ಒಂದರಂತೆ ಒಟ್ಟು ೧,೪೯೮ ಪ್ರಾಥಮಿಕ ಶಾಲೆಗಳಿದ್ದು, ಇವುಗಳಲ್ಲಿ ೨೮ ಖಾಸಗಿ ಶಾಲೆಗಳಾಗಿದ್ದವು. ಅವುಗಳಲ್ಲಿ ೧,೧೬೮ ಕಿರಿಯ ಹಾಗೂ ೩೩೦ ಹಿರಿಯ ಪ್ರಾಥಮಿಕ ಶಾಲೆಗಳಾಗಿದ್ದವು. ಈ ಎಲ್ಲಾ ಶಾಲೆಗಳಲ್ಲಿ ಒಟ್ಟು ೩,೮೧೨ ಮಂದಿ ಶಿಕ್ಷಕರಿದ್ದು, ಅವರಲ್ಲಿ ಶೇಕಡಾ ೧೦ ಮಹಿಳೆಯರಿದ್ದರು.

ಇತ್ತೀಚಿನ ದಶಕಗಳಲ್ಲಿ ಸರ್ಕಾರದ ನೂತನ ಶಿಕ್ಷಣ ಯೋಜನೆಗಳಡಿ ಪ್ರಾಥಮಿಕ ಶಿಕ್ಷಣಕ್ಕೆ ವ್ಯಾಪಕ ಪ್ರಚಾರ ದೊರಕಿ, ಜಿಲ್ಲೆಯಲ್ಲಿ ಈ ಹಂತದ ಶಿಕ್ಷಣ ಗಣನೀಯವಾಗಿ ಪ್ರಗತಿ ಸಾಧಿಸಿದೆ. ಮುಂದಿನ ಕೋಷ್ಟಕದಲ್ಲಿ ೨೦೦೧–೨೦೦೨ ನೇ ಸಾಲಿಗೆ ಪ್ರಾಥಮಿಕ ಶಾಲೆಗಳ ಮತ್ತು ಮಕ್ಕಳ ತಾಲೂಕುವಾರು ವಿವರಗಳನ್ನು ನೀಡಲಾಗಿದೆ.

## ಕೋಷ್ಟಕ ೧೩.೪

| ಕ್ರ.ಸಂ | ತಾಲೂಕಿನ ಹೆಸರು | ಕಿರಿಯ ಪ್ರಾಥಮಿಕ ಶಾಲೆಗಳು ೨೦೦೧–೨೦೦೨ | | | | | |
|---|---|---|---|---|---|---|---|
| | | ಶಾಲೆಗಳು | | | ಮಕ್ಕಳು | | |
| | | ಸರ್ಕಾರಿ | ಅನುದಾನಿತ | ಅನುದಾನ ರಹಿತ | ಗಂಡು | ಹೆಣ್ಣು | ಒಟ್ಟು |
| ೧ | ಕೃಷ್ಣರಾಜಪೇಟೆ | ೨೦೯ | – | ೧೨ | ೪೨೯೮ | ೩೭೫೦ | ೮೦೪೮ |
| ೨ | ಮದ್ದೂರು | ೧೦೮ | – | ೨೬ | ೪೫೩೪ | ೪೦೦೩ | ೮೫೩೭ |
| ೩ | ಮಳವಳ್ಳಿ | ೧೧೩ | – | ೧೨ | ೨೯೫೬ | ೨೮೫೨ | ೫೮೦೮ |
| ೪ | ಮಂಡ್ಯ | ೧೧೫ | ೦೩ | ೨೧ | ೨೮೧೪ | ೨೭೬೪ | ೫೫೭೮ |
| ೫ | ನಾಗಮಂಗಲ | ೨೨೩ | – | ೦೨ | ೩೨೮೨ | ೩೨೮೩ | ೬೫೬೫ |
| ೬ | ಪಾಂಡವಪುರ | ೯೫ | – | ೦೮ | ೬೨೪೩ | ೫೮೨೮ | ೧೨೦೭೧ |
| ೭ | ಶ್ರೀರಂಗಪಟ್ಟಣ | ೫೯ | – | ೦೫ | ೨೦೦೩ | ೧೯೨೬ | ೩೯೨೯ |
| | ಜಿಲ್ಲೆಯ ಮೊತ್ತ | ೯೨೨ | ೦೩ | ೮೬ | ೨೬೧೩೦ | ೨೪೪೦೬ | ೫೦೫೩೬ |

| ಕ್ರ.ಸಂ | ತಾಲೂಕಿನ ಹೆಸರು | ಹಿರಿಯ ಪ್ರಾಥಮಿಕ ಶಾಲೆಗಳು ೨೦೦೧–೨೦೦೨ | | | | | |
|---|---|---|---|---|---|---|---|
| | | ಶಾಲೆಗಳು | | | ಮಕ್ಕಳು | | |
| | | ಸರ್ಕಾರಿ | ಅನುದಾನಿತ | ಅನುದಾನ ರಹಿತ | ಗಂಡು | ಹೆಣ್ಣು | ಒಟ್ಟು |
| ೧ | ಕೃಷ್ಣರಾಜಪೇಟೆ | ೧೫೩ | ೦೨ | ೧೬ | ೧೫೩೧೯ | ೧೪೭೫೫ | ೩೦೦೭೪ |
| ೨ | ಮದ್ದೂರು | ೧೪೬ | ೦೩ | ೨೨ | ೧೮೭೧೮ | ೧೭೨೩೭ | ೩೫೯೫೫ |
| ೩ | ಮಳವಳ್ಳಿ | ೧೫೪ | ೦೨ | ೨೧ | ೧೭೪೫೯ | ೧೬೧೪೦ | ೩೩೫೯೯ |
| ೪ | ಮಂಡ್ಯ | ೧೮೧ | ೧೫ | ೨೬ | ೨೮೬೨೩ | ೨೬೯೫೯ | ೫೫೫೮೨ |
| ೫ | ನಾಗಮಂಗಲ | ೧೫೨ | ೦೨ | ೦೫ | ೮೩೩೮ | ೭೨೭೯ | ೧೫೬೧೭ |
| ೬ | ಪಾಂಡವಪುರ | ೯೧ | ೦೩ | ೧೮ | ೧೧೦೦೦ | ೧೦೧೫೬ | ೨೧೧೫೬ |
| ೭ | ಶ್ರೀರಂಗಪಟ್ಟಣ | ೭೦ | ೦೪ | ೧೬ | ೧೦೩೮೮ | ೧೦೧೧೧ | ೨೦೪೯೯ |
| | ಜಿಲ್ಲೆಯ ಮೊತ್ತ | ೯೪೭ | ೩೧ | ೧೨೪ | ೧೦೯೮೪೫ | ೧೦೨೬೩೭ | ೨೧೨೪೮೨ |

## ಶಿಕ್ಷಕರ ತರಬೇತಿ

**ಬಿ.ಇ.ಡಿ.ಶಿಕ್ಷಣ:–** ಜಿಲ್ಲೆಯ ಏಕೈಕ ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯವಾದ ಶಂಕರೇಗೌಡ ಶಿಕ್ಷಣ ಮಹವಿದ್ಯಾಲಯ ಜನತಾ ಶಿಕ್ಷಣ ಸಂಸ್ಥೆಯ ವತಿಯಿಂದ ೧೯೭೪ರಲ್ಲಿ ಸ್ಥಾಪಿತವಾಗಿ, ೧೯೯೩ರಲ್ಲಿ ಸರ್ಕಾರಿ ಅನುದಾನಕ್ಕೊಳಪಟ್ಟಿತು. ಸಂಸ್ಥೆಯ ವಾರ್ಷಿಕ ಪ್ರವೇಶಾವಕಾಶ ೧೦೦ ಆಗಿದ್ದು, ಇಲ್ಲಿ ಕನ್ನಡ, ಇಂಗ್ಲಿಷ್, ಇತಿಹಾಸ,

ಭೌತಶಾಸ್ತ್ರ, ರಸಾಯನಶಾಸ್ತ್ರ, ಗಣಿತ ಹಾಗೂ ಜೀವಶಾಸ್ತ್ರಗಳ ಬೋಧನಾ ವಿಧಾನಗಳಲ್ಲಿ ತರಬೇತಿ ನೀಡಲಾಗುತ್ತದೆ. ಮುಕ್ತ ವಿಶ್ವವಿದ್ಯಾಲಯದ ಅಧ್ಯಯನ ಕೇಂದ್ರವನ್ನೂ ಹೊಂದಿರುವ ಈ ಸಂಸ್ಥೆಯಲ್ಲಿ ಏಳು ಮಂದಿ ಬೋಧಕ ಸಿಬ್ಬಂದಿ ಇದ್ದಾರೆ.

**ಪ್ರಾಥಮಿಕ ಪ್ರಶಿಕ್ಷಣ:** ಜಿಲ್ಲೆಯ ಪ್ರಥಮ ಪ್ರಶಿಕ್ಷಣ ಕೇಂದ್ರ (ಬೇಸಿಕ್ ಟ್ರೈನಿಂಗ್ ಇನ್ಸ್ಟಿಟ್ಯೂಟ್) ೧೯೬೦ರಲ್ಲಿ ನಾಗಮಂಗಲದಲ್ಲಿ ಪ್ರಾರಂಭವಾಯಿತು. ಇದೇ ವರ್ಷ ಮಂಡ್ಯದಲ್ಲಿ ಅಲ್ಪಸಂಖ್ಯಾತ ಸಂಸ್ಥೆಯಾದ ಸಂತ ಜೋಸೆಫರ ಸಂಸ್ಥೆಯಿಂದ ಮಹಿಳೆಯರ ಪ್ರಶಿಕ್ಷಣ ಕೇಂದ್ರ ಪ್ರಾರಂಭವಾಯಿತು. ಪ್ರಸ್ತುತ ಸರ್ಕಾರಿ ಅನುದಾನ ಪಡೆಯುತ್ತಿರುವ ಈ ಸಂಸ್ಥೆ ಸ್ವಂತ ಕಟ್ಟಡವನ್ನೂ, ವಸತಿ ನಿಲಯ ಸೌಕರ್ಯವನ್ನು ಹೊಂದಿರುತ್ತದೆ. ಇದೇ ವರ್ಷ ಮದ್ದೂರಿನಲ್ಲಿ ಕೇಂದ್ರ ಸರ್ಕಾರದ ಅನುದಾನದ ಯೋಜನೆಯಡಿ ಪ್ರಶಿಕ್ಷಣ ಕೇಂದ್ರ ಸ್ಥಾಪಿತವಾಯಿತು (ಪ್ರಸ್ತುತ ಕಾರ್ಯನಿರ್ವಹಿಸುತ್ತಿಲ್ಲ). ತದನಂತರ ೧೯೮೩ರಲ್ಲಿ ಮಳವಳ್ಳಿಯಲ್ಲಿ ಸರ್ಕಾರ ಪ್ರಾರಂಭಿಸಿದ ಪ್ರಶಿಕ್ಷಣ ಸಂಸ್ಥೆ, ಪ್ರಸ್ತುತ ಬಾಚನಹಳ್ಳಿಯಲ್ಲಿ ಸ್ವಂತ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದೆ. ಗ್ರಾಮೀಣ ವಿದ್ಯಾ ಸಂಸ್ಥೆಯ ವತಿಯಿಂದ ೧೯೮೬ರಲ್ಲಿ ಕೆರೆಗೋಡು ಗ್ರಾಮದಲ್ಲಿ ಕೆ.ವಿ.ಶಂಕರೇಗೌಡ ಪ್ರಶಿಕ್ಷಣ ತರಬೇತಿ ಸಂಸ್ಥೆ ಪ್ರಾರಂಭವಾಯಿತು. ಇದು ಖಾಸಗಿ ಅನುದಾನ ರಹಿತ ಸಂಸ್ಥೆಯಾಗಿದ್ದು, ಸ್ವಂತ ಕಟ್ಟಡದಲ್ಲಿ ಕಾರ್ಯ ನಿರ್ವಹಿಸುತ್ತಿದೆ.

## ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (ಡಯೆಟ್)

ರಾಷ್ಟ್ರೀಯ ಶಿಕ್ಷಣ ನೀತಿಗನುಗುಣವಾಗಿ ಕೇಂದ್ರ ಸರ್ಕಾರದ ಮಾನವ ಸಂಪನ್ಮೂಲ ಇಲಾಖೆ ಸ್ಥಾಪಿಸಿರುವ ಯೋಜನೆಯಡಿ ಮಂಡ್ಯದಲ್ಲಿ ಡಯೆಟ್ (ಡಿಸ್ಟ್ರಿಕ್ಟ್ ಇನ್‌ಸ್ಟಿಟ್ಯೂಟ್ ಆಫ್ ಎಜುಕೇಷನ್ ಆಂಡ್ ಟ್ರೈನಿಂಗ್) ಸಂಸ್ಥೆ ೧೯೯೫ರಲ್ಲಿ ಪ್ರಾರಂಭವಾಯಿತು. ಸ್ವಂತ ಕಟ್ಟಡ ಹೊಂದಿರುವ ಈ ಸಂಸ್ಥೆ ೨೫ ಎಕರೆ ಪ್ರದೇಶದಲ್ಲಿ ವಸತಿ ಗೃಹಗಳನ್ನು ಹೊಂದಿದೆ. ಸೇವಾ ನಿರತ ಶಿಕ್ಷಕರಿಗೆ ಉತ್ತಮ ಸಂಪನ್ಮೂಲ ವ್ಯಕ್ತಿಗಳ (ರಿಸೋರ್ಸ್ ಪರ್ಸನ್ಸ್) ಮಾರ್ಗದರ್ಶನದಲ್ಲಿ ಇಲ್ಲಿ ಏಳು ವಿಭಾಗಗಳಲ್ಲಿ ತರಬೇತಿ ನೀಡಲಾಗುವುದು.ಡಯೆಟ್ ಸಂಸ್ಥೆಯಡಿ ಸರ್ಕಾರದ ವತಿಯಿಂದ ೧೯೯೫ರಲ್ಲಿ ಒಂದು ಪ್ರಶಿಕ್ಷಣ ಸಂಸ್ಥೆ ಸ್ಥಾಪಿಸಲ್ಪಟ್ಟಿತು. ಪ್ರಾರಂಭದಲ್ಲಿ ೩೦ ಮಂದಿಗೆ ಪ್ರವೇಶಾವಕಾಶವಿದ್ದು, ಪ್ರಸ್ತುತ ಇದನ್ನು ೫೦ ಮಂದಿಗೆ ಹೆಚ್ಚಿಸಲಾಗಿದೆ.

## ಮಧ್ಯಾಹ್ನ ಭೋಜನ ಯೋಜನೆ

ಶಾಲಾ ಮಕ್ಕಳಿಗೆ ಪೌಷ್ಟಿಕ ಆಹಾರ ಪೂರೈಕೆಗಾಗಿ ಅಮೆರಿಕದ 'ಕೇರ್' ಸಂಸ್ಥೆ ( ಕೋ ಅಪರೇಟೀವ್ ಅಮೆರಿಕನ್ ರಿಲೀಫ್ ಎವೆರಿವೇರ್) ೧೯೬೩ರಲ್ಲಿ ಹಾಲು ಪುಡಿ, ಎಣ್ಣೆ ಹಾಗೂ ಮುಸುಕಿನ ಜೋಳದ ಕಾರ್ನ್ ಮೀಲ್‌ಗಳನ್ನು ಉಚಿತವಾಗಿ ನೀಡಲು ಮುಂದೆ ಬಂದದ್ದರಿಂದ ಈ ಯೋಜನೆ ರಾಜ್ಯಾದ್ಯಂತ ಜಾರಿಯಾಗಿ, ಮಂಡ್ಯ ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿ ಅನುಷ್ಠಾನಕ್ಕೆ ಬಂದಿತು.

ಈ ಯೋಜನೆಯಡಿ ೧೯೯೮-೯೯ ರಿಂದ ೨೦೦೧-೨೦೦೨ದ ವರೆಗಿನ ತಾಲೂಕುವಾರು ಫಲಾನುಭವಿಗಳ ಸಂಖ್ಯೆಯನ್ನು ಈ ಮುಂದಿನ ಕೋಷ್ಟಕಗಳಲ್ಲಿ ನೀಡಲಾಗಿದೆ.

**ಕೋಷ್ಟಕ ೧೩.೫**

| ಕ್ರ.ಸಂ | ತಾಲೂಕು | ಫಲಾನುಭವಿಗಳ ಸಂಖ್ಯೆ | | | |
|---|---|---|---|---|---|
| | | ೧೯೯೮-೧೯೯೯ | ೧೯೯೯-೨೦೦೦ | ೨೦೦೦-೨೦೦೧ | ೨೦೦೧-೨೦೦೨ |
| ೧ | ಕೃಷ್ಣರಾಜಪೇಟೆ | ೨೦೪೦೮ | ೨೨೪೦೩ | ೨೪೦೩೧ | ೨೬೦೩೧ |
| ೨ | ಮದ್ದೂರು | ೨೨೪೪೧ | ೨೫೭೨೫ | ೨೪೦೮೦ | ೨೭೦೦೦ |
| ೩ | ಮಳವಳ್ಳಿ | ೨೫೩೭೮ | ೨೫೭೬೧ | ೨೫೪೫೫ | ೨೬೫೦೦ |
| ೪ | ಮಂಡ್ಯ | ೩೩೮೭೧೦ | ೩೧೯೯೦ | ೩೨೬೮೫ | ೩೧೫೧೨ |
| ೫ | ನಾಗಮಂಗಲ | ೧೯೧೧೧ | ೨೦೭೭೮ | ೨೪೯೫೫ | ೨೦೮೪೮ |
| ೬ | ಪಾಂಡವಪುರ | ೧೪೫೧೮ | ೧೪೦೫೭ | ೧೪೬೭೦ | ೧೪೧೦೦ |
| ೭ | ಶ್ರೀರಂಗಪಟ್ಟಣ | ೧೪೧೧೨ | ೧೪೫೫೯ | ೧೩೯೦೧ | ೧೨೩೩೩ |

## ವಿದ್ಯಾವಿಕಾಸ ಯೋಜನೆ

ಈ ಯೋಜನೆಯಡಿ ಪರಿಶಿಷ್ಟ ಜಾತಿ ಹಾಗೂ ವರ್ಗದ ಮಕ್ಕಳಿಗೆ ಮಾತ್ರ ಶಾಲಾ ಚೀಲಗಳನ್ನು ವಿತರಿಸಲಾಗುವುದು. ಒಂದರಿಂದ ಏಳರವರೆಗೆ ಎಲ್ಲಾ ವರ್ಗದ ಮಕ್ಕಳಿಗೆ ಹಾಗೂ ಪ್ರೌಢಶಾಲೆಗಳಲ್ಲಿನ ಹೆಣ್ಣು ಮಕ್ಕಳಿಗೆ ಸಮವಸ್ತ್ರಗಳನ್ನೂ ವಿತರಿಸಲಾಗುವುದು. ಈ ಯೋಜನೆಯ ಫಲಾನುಭವಿಗಳ ತಾಲೂಕುವಾರು ವಿವರಗಳನ್ನು ೧೯೯೭-೯೮ ರಿಂದ ೨೦೦೧-೨೦೦೨ರ ವರೆಗೆ ಈ ಮುಂದೆ ನೀಡಲಾಗಿದೆ.

**ಕೋಷ್ಟಕ ೧೩.೬**

| ತಾಲೂಕು | ೧೯೯೭-೧೯೯೮ | ೧೯೯೮-೧೯೯೯ | ೧೯೯೯-೨೦೦೦ | ೨೦೦೦-೨೦೦೧ | ೨೦೦೧-೨೦೦೨ |
|---|---|---|---|---|---|
| ಕೃಷ್ಣರಾಜಪೇಟೆ | ೧೨೫೨೫ | ೧೪೩೮೫ | ೨೨೩೨೦ | ೨೨೦೦೩ | ೨೦೨೫೦ |
| ಮದ್ದೂರು | ೬೯೦ | ೭೪೬ | ೧೦೫೦ | ೮೭೫ | ೧೦೭೨ |
| ಮಳವಳ್ಳಿ | ೨೭೯೨೫ | ೨೦೨೬೫ | ೧೩೩೯೯ | ೧೪೬೮೦ | ೧೭೪೩೭ |
| ಮಂಡ್ಯ | ೩೧೯೮೮ | ೩೦೨೧೨ | ೩೨೧೩೬ | ೧೬೪೩೨ | ೨೨೪೬೭ |
| ನಾಗಮಂಗಲ | ೧೨೯೫೧ | ೧೨೨೫೧ | ೧೦೪೯೮ | ೧೫೪೭೧ | ೧೬೨೯೯ |
| ಪಾಂಡವಪುರ | ೧೪೫೧೨ | ೧೩೫೧೬ | ೧೧೪೯೫ | ೧೨೮೬೨ | ೧೧೬೪೦ |
| ಶ್ರೀರಂಗಪಟ್ಟಣ | ೧೨೯೬೪ | ೧೨೩೮೪ | ೧೨೮೬೮ | ೧೨೨೬೧ | ೧೨೪೫೭ |

## ಕಪ್ಪು ಹಲಗೆ ಕಾರ್ಯಾಚರಣೆ

ಕೇಂದ್ರ ಪ್ರಾಯೋಜಿತವಾದ ಈ ಯೋಜನೆ ಪ್ರಾಥಮಿಕ ಶಾಲೆಗಳಿಗಾಗಿ ಕೊಠಡಿಗಳ ನಿರ್ಮಾಣ, ಪೀಠೋಪಕರಣ ಹಾಗೂ ಪಾಠೋಪಕರಣಗಳ ಪೂರೈಕೆ ಹಾಗೂ ಶಿಕ್ಷಕರ ವೇತನಗಳನ್ನು ನೀಡುವ ಗುರಿಗಳನ್ನು ಹೊಂದಿದೆ. ಈ ಯೋಜನೆ ಜಿಲ್ಲೆಯಲ್ಲಿ ನಾಲ್ಕು ಹಂತಗಳಲ್ಲಿ ೧೯೮೭ ರಿಂದ ಅನುಷ್ಠಾನಕ್ಕೆ ಬಂದಿತು. ಮೊದಲನೇ ಹಂತದ ಯೋಜನೆ ಮಳವಳ್ಳಿಯಲ್ಲಿ ೧೯೮೭-೮೮ ರಲ್ಲಿಯೂ, ಎರಡನೇ ಹಂತದ ಯೋಜನೆ ಮದ್ದೂರು ಹಾಗೂ ಕೃಷ್ಣರಾಜಪೇಟೆಗಳಲ್ಲಿ ೧೯೮೯-೯೦ ರಲ್ಲಿಯೂ, ಮೂರನೇ ಹಂತದ ಯೋಜನೆ ನಾಗಮಂಗಲ ಹಾಗೂ ಪಾಂಡವಪುರಗಳಲ್ಲಿ ೧೯೯೨-೯೩ ರಲ್ಲಿಯೂ ಮತ್ತು ನಾಲ್ಕನೇ ಹಾಗೂ ಕೊನೆಯ ಹಂತದ ಯೋಜನೆ ಮಂಡ್ಯ ಹಾಗೂ ಶ್ರೀರಂಗಪಟ್ಟಣಗಳಲ್ಲಿ

೧೯೯೩-೯೪ರ ರಲ್ಲಿಯೂ ಜಾರಿಯಾಯಿತು. ಈ ಯೋಜನೆ ೨೦೦೦ದ ನಂತರ ಜಾರಿಯಲ್ಲಿಲ್ಲ. ಜಿಲ್ಲೆಯಲ್ಲಿ ೨೦೦೦ದಲ್ಲಿ ನಾಲ್ಕನೇ ಹಂತದಡಿ ಕಾರ್ಯನಿರ್ವಹಿಸುತ್ತಿದ್ದ ಕೇಂದ್ರಗಳ ಹಾಗೂ ಫಲಾನುಭವಿಗಳ ತಾಲೂಕುವಾರು ವಿವರಗಳನ್ನು ಈ ಮುಂದೆ ನೀಡಲಾಗಿದೆ.

**ಕೋಷ್ಟಕ ೧೩.೭**

| ಕ್ರ.ಸಂ | ತಾಲೂಕು | ಕೇಂದ್ರಗಳು | ಫಲಾನುಭವಿಗಳು |
|---|---|---|---|
| ೧ | ಕೃಷ್ಣರಾಜಪೇಟೆ | ೧೩ | ೨೧೭೨ |
| ೨ | ಮದ್ದೂರು | ೧೬ | ೨೬೭೫ |
| ೩ | ಮಳವಳ್ಳಿ | ೧೫ | ೩೧೦೧ |
| ೪ | ಮಂಡ್ಯ | ೧೬ | ೩೨೧೬ |
| ೫ | ನಾಗಮಂಗಲ | ೧೩ | ೧೫೬೬ |
| ೬ | ಪಾಂಡವಪುರ | ೧೧ | ೧೬೯೪ |
| ೭ | ಶ್ರೀರಂಗಪಟ್ಟಣ | ೧೩ | ೨೦೨೭ |

**ಮಾಹಿತಿ ಸಿಂಧು ಕಾರ್ಯಕ್ರಮ:** ಮಕ್ಕಳನ್ನು ಕಂಪ್ಯೂಟರ್‌ಗಳತ್ತ ಒಯ್ಯುವ ಉದ್ದೇಶ ಹೊಂದಿದ ಈ ಕಾರ್ಯಕ್ರಮ ರಾಜ್ಯಾದ್ಯಂತ ಒಂದು ಸಾವಿರ ಸರ್ಕಾರಿ ಪ್ರೌಢಶಾಲೆಗಳಲ್ಲಿ ೨೦೦೧-೦೨ನೇ ಸಾಲಿನಿಂದ ಅನುಷ್ಠಾನಗೊಂಡಿದ್ದು, ಮಂಡ್ಯ ಜಿಲ್ಲೆಯ ೪೦ ಪ್ರೌಢಶಾಲೆಗಳಲ್ಲಿಯೂ ಪ್ರಾರಂಭವಾಗಿದೆ. ಈ ಶಾಲೆಗಳಲ್ಲಿ ವಿದ್ಯುದೀಕರಣ, ಲೀಕ್ ಪ್ರೂಫ್ ಕೊಠಡಿ ನಿರ್ಮಾಣ, ಕಂಪ್ಯೂಟರ್‌ಗಳ ಪೂರೈಕೆ ಮುಂತಾದ ಬಾಬ್ತುಗಳಿಗಾಗಿ ಪ್ರತೀ ಶಾಲೆಗೆ ರೂ ೪೫,೦೦೦ ಗಳಂತೆ ಒಟ್ಟು ೧೮ ಲಕ್ಷ ರೂಪಾಯಿಗಳನ್ನು ೨೦೦೧-೦೨ನೇ ಸಾಲಿಗೆ ಖರ್ಚು ಮಾಡಲಾಗಿದೆ. ಈ ಕಾರ್ಯಕ್ರಮದಲ್ಲಿ ಕಂಪ್ಯೂಟರ್ ಆಧಾರಿತ ಶಿಕ್ಷಣದಡಿ ಗಣಕಯಂತ್ರದ ಮುಖೇನ ಗಣಿತ, ಸಾಮಾನ್ಯ ವಿಜ್ಞಾನ, ಸಾಮಾಜಿಕ ವಿಜ್ಞಾನ ಹಾಗೂ ಆಂಗ್ಲ ಭಾಷೆಗಳನ್ನು ಬೋಧಿಸಲಾಗುತ್ತಿದ್ದು, ಬೆಂಗಳೂರಿನ ಎನ್.ಐ.ಐ.ಟಿ. ಸಂಸ್ಥೆ ಇದರ ಉಸ್ತುವಾರಿ ನೋಡಿಕೊಳ್ಳುತ್ತಿದೆ. ಪ್ರತೀ ಕೇಂದ್ರಕ್ಕೆ ದೂರವಾಣಿ ಸೌಲಭ್ಯವನ್ನೂ ಒದಗಿಸಲಾಗಿದ್ದು, ಈವರೆಗೆ ೧೩,೭೪೩ ಮಕ್ಕಳು ಇದರ ಉಪಯೋಗ ಪಡೆದಿರುತ್ತಾರೆ.

### ಸಮುದಾಯುಮತ್ತ ಶಾಲೆ ಯೋಜನೆ

ಪ್ರಾಥಮಿಕ ಶಿಕ್ಷಣದ ಅಭಿವೃದ್ಧಿಗಾಗಿ ಈ ಯೋಜನೆ ಜಿಲ್ಲೆಯಲ್ಲಿ ೨೦೦೧ ನೇ ನವಂಬರ್ ತಿಂಗಳಿನಲ್ಲಿ ಜಾರಿಯಾಯಿತು. ಬಾಲಕ-ಪೋಷಕ-ಶಿಕ್ಷಕ ಒಂದೆಡೆ ಹಾಗೂ ಸಮುದಾಯ-ಸಮಾಜ-ಸರ್ಕಾರ ಮತ್ತೊಂದೆಡೆ ಒಂದಾಗಿ ಮಗುವಿನ ಸರ್ವಾಂಗೀಣ ಬೆಳವಣಿಗೆಗೆ ಪೂರಕವಾಗಿ ದುಡಿಯುವುದೇ ಈ ಯೋಜನೆಯ ಮುಖ್ಯ ಗುರಿಯಾಗಿದೆ. ಈ ಯೋಜನೆಯಡಿ ತಾಯ್ತಂದೆಗಳು ಹಾಗೂ ಪೋಷಕರು ತಮ್ಮ ಮಕ್ಕಳ ಶೈಕ್ಷಣಿಕ ಅಭಿವೃದ್ಧಿಯಲ್ಲಿ ನೇರವಾದ ಸಂಪರ್ಕ ಹೊಂದಿ, ದೈನಂದಿನ ಆಗುಹೋಗುಗಳ ಬಗ್ಗೆ ಶಿಕ್ಷಕರು ಮತ್ತು ಶಾಲೆಯ ಮುಖ್ಯಸ್ಥರೊಂದಿಗೆ ಸಂವಾದ ನಡೆಸಬಹುದು. ಲೋಪದೋಷಗಳು ಕಂಡು ಬಂದಲ್ಲಿ ತಮ್ಮ ಸಲಹೆಗಳನ್ನು ನೀಡಬಹುದು. ಸಮಸ್ಯೆಗಳು ಪರಹಾರವಾಗದಿದ್ದಲ್ಲಿ ಅಲ್ಲಿಯೇ ಉಪಸ್ಥಿತರಿರುವ ಇಲಾಖಾ ಸಿಬ್ಬಂದಿಯಲ್ಲಿ ತಮ್ಮ ಅಹವಾಲುಗಳನ್ನು ಹೇಳಿಕೊಳ್ಳಬಹುದು.

**ಶಾಲಾಭಿವೃದ್ಧಿ ಮೇಲುಸ್ತುವಾರಿ ಸಮಿತಿ(ಎಸ್.ಡಿ.ಎಂ.ಸಿ.):** ಶಾಲಾ ಶಿಕ್ಷಕರಲ್ಲಿ ಗುಣಾತ್ಮಕ ಬದಲಾವಣೆ ತರುವ ಹಾಗೂ ಶಾಲಾ ಆಡಳಿತದಲ್ಲಿ ಸಮುದಾಯದ ಸಕ್ರಿಯ ಪಾತ್ರ ಖಚಿತಪಡಿಸುವ ಉದ್ದೇಶಗಳಿಂದ ಈ ಕಾರ್ಯಕ್ರಮ ಜಿಲ್ಲೆಯ ಎಲ್ಲಾ ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ೨೦೦೦-೨೦೦೧ನೇ ಸಾಲಿನಿಂದ ಪ್ರಾರಂಭವಾಗಿದೆ. ಜಿಲ್ಲೆಯ ಶಾಲೆಗಳಲ್ಲಿ ಇದರ ಪ್ರಗತಿ ಆಶಾದಾಯಕವಾಗಿದೆ.

**ಶಾಲಾ ದತ್ತು ಯೋಜನೆ:** ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಹಲವಾರು ಅಭಿವೃದ್ಧಿ ಕಾರ್ಯಕ್ರಮಗಳನ್ನು ಅಳವಡಿಸಲು ಹಾಗೂ ತನ್ಮೂಲಕ ಅವುಗಳಲ್ಲಿ ಪ್ರಗತಿ ತರಲು ಸರ್ಕಾರ ಶಾಲಾ ದತ್ತು ಯೋಜನೆಯನ್ನು ಕಾರ್ಯಗತಗೊಳಿಸಿದೆ. ಇದರಡಿ ಸಾರ್ವಜನಿಕ ಸಂಘ ಸಂಸ್ಥೆಗಳಿಂದ ನೆರವು ಪಡೆದು, ಅವುಗಳು ಹಲವು ಶಾಲೆಗಳನ್ನು ದತ್ತುತೆಗೆದುಕೊಂಡು ಅವುಗಳ ಪ್ರಗತಿಗಾಗಿ ಕಾರ್ಯನಿರ್ವಹಿಸುವಂತೆ ಕೋರಲಾಗುವುದು.

**ಉರ್ದು ಹಾಗೂ ಇತರ ಅಲ್ಪಸಂಖ್ಯಾತರ ಶಿಕ್ಷಣ**

ಮುಸ್ಲಿಮರು ರಾಜಕೀಯವಾಗಿ ಅಧಿಕಾರ ನಡೆಸಿದಲ್ಲೆಲ್ಲಾ ಪರ್ಷಿಯನ್ ಅಧಿಕೃತ ಭಾಷೆಯಾಗಿದ್ದರೂ, ಹೈದರ್ ಹಾಗೂ ಟೀಪೂ ಅಧಿಕಾರಕ್ಕೆ ಬರುವ ಮೊದಲು ಮೈಸೂರು ರಾಜ್ಯ ಉರ್ದು ಅಥವಾ ಪರ್ಷಿಯನ್ ವಿದ್ಯಾಭ್ಯಾಸಕ್ಕೆ ಕೇಂದ್ರವಾಗಿರಲಿಲ್ಲ. ಆದರೆ ಇವರು ಅಧಿಕಾರಕ್ಕೆ ಬಂದ ಸುಮಾರು ನಲವತ್ತು ವರ್ಷಗಳ ಅವಧಿಯಲ್ಲಿ ಪರ್ಷಿಯನ್ ಭಾಷೆ ಈ ರಾಜ್ಯದ ಅಧಿಕೃತ ಭಾಷೆಯಾಗಿ, ಜ್ಞಾನವನ್ನು ಪ್ರಸಾರ ಮಾಡುವ ಶಿಕ್ಷಣ ಮಾಧ್ಯಮವಾಗಿಯೂ ಬೆಳೆಯಿತು. ಉರ್ದು ಭಾಷೆ ಜನಸಾಮಾನ್ಯರ ದೈನಂದಿನ ಭಾಷೆಯಾಗಿ ಜನಪ್ರಿಯವಾಯಿತು. ವಿದ್ಯೆಯೇ ಇಲ್ಲದ ಹೈದರ್ ಹಾಗೂ ಸ್ವಯಂ ವಿದ್ಯಾವಂತನಾದ ಟೀಪು ವಿದ್ಯಾಕ್ಷೇತ್ರಕ್ಕೆ ಗಣನೀಯ ಸೇವೆ ಸಲ್ಲಿಸಿದರು. ಟೀಪೂವಿನ ಗ್ರಂಥ ಭಂಡಾರ, ಆತನ ಸ್ವವಿರಚಿತ ಗ್ರಂಥಗಳು, ವಿದ್ವತ್ ಜನರಿಗೆ ಅವರು ನೀಡಿದ ಪೋಷಣೆ, ಭಾರತೀಯ ಪತ್ರಿಕಾ ರಂಗದಲ್ಲಿ ಟೀಪೂ ಪ್ರಾರಂಭಿಸಿದ ಮೊಟ್ಟ ಮೊದಲ ಉರ್ದು ಪತ್ರಿಕೆ – ಇವೆಲ್ಲವೂ ಶೈಕ್ಷಣಿಕ ಹಾಗೂ ಸಾಹಿತ್ಯ ಕ್ಷೇತ್ರಗಳಲ್ಲಿ ಅವರಿಗಿದ್ದ ಅದಮ್ಯ ಆಸಕ್ತಿಯ ದ್ಯೋತಕಗಳು. ಇದಲ್ಲದೇ ಟೀಪೂ ಶ್ರೀರಂಗಪಟ್ಟಣದಲ್ಲಿ ಒಂದು ಉನ್ನತ ವ್ಯಾಸಂಗ ಕೇಂದ್ರ ಸ್ಥಾಪಿಸಿ, ಅದಕ್ಕೆ ಜಮಿ-ಉಲ್-ಉಮರ್ ಎಂದು ನಾಮಕರಣ ಮಾಡಿದ್ದನು. ಉರ್ದು ಶಿಕ್ಷಣ ಪ್ರಸಾರಕ್ಕಾಗಿ ಮಸೀದಿಗಳಲ್ಲಿ ನಡೆಸಲ್ಪಡುತ್ತಿದ್ದ ಮಕ್ತಬಾ ಮತ್ತು ಮದರಸಾಗಳಲ್ಲಿ ಖುರಾನ್ ಪಠಣವೇ ಅಲ್ಲದೇ ಉನ್ನತ ಶಿಕ್ಷಣವೂ ನೀಡಲ್ಪಡುತ್ತಿತ್ತು. ಈಗಲೂ ಜಿಲ್ಲೆಯ ಎಲ್ಲೆಡೆ ನೆಲೆಸಿರುವ ಮುಸ್ಲಿಮರ ಹಾಗೂ ಇತರ ಅಲ್ಪಸಂಖ್ಯಾತರ ಶಿಕ್ಷಣಕ್ಕಾಗಿ ಸರ್ಕಾರ ಶಾಲೆಗಳನ್ನು ನಡೆಸುತ್ತಿದ್ದು, ೨೦೦೦-೨೦೦೧ನೇ ಸಾಲಿಗೆ ಕಾರ್ಯನಿರ್ವಹಿಸುತ್ತಿದ್ದ ಅಂತಹ ಶಾಲೆಗಳ ಅಂಕಿಅಂಶಗಳನ್ನು ಈ ಮುಂದೆ ನೀಡಲಾಗಿದೆ: ಕೃಷ್ಣರಾಜಪೇಟೆ-೧೨, ಮದ್ದೂರು-೯, ಮಂಡ್ಯ-೧೬, ಮಳವಳ್ಳಿ-೧೨, ನಾಗಮಂಗಲ-೧೧, ಪಾಂಡವಪುರ-೦೯ ಹಾಗೂ ಶ್ರೀರಂಗಪಟ್ಟಣ-೧೩. ಇವಲ್ಲದೇ ಮಂಡ್ಯದಲ್ಲಿ ಒಂದು ತೆಲುಗು ಹಾಗೂ ಎರಡು ತಮಿಳು ಶಾಲೆಗಳೂ ಕಾರ್ಯನಿರ್ವಹಿಸುತ್ತಿವೆ.

## ಪ್ರೌಢ ಶಿಕ್ಷಣ

ಜಿಲ್ಲೆಯಲ್ಲಿ ಸ್ವಾತಂತ್ರ್ಯ ಪೂರ್ವದಲ್ಲಿ ಮೂರು ಸರ್ಕಾರಿ ಪ್ರೌಢ ಶಾಲೆಗಳಿದ್ದವು. ಅವೆಂದರೆ, ಮಳವಳ್ಳಿ ಪ್ರೌಢಶಾಲೆ (೧೯೨೮), ಪುರಸಭೆ ಪ್ರೌಢಶಾಲೆ, ಮಂಡ್ಯ (೧೯೩೭) ಮತ್ತು ಕೃಷ್ಣರಾಜಪೇಟೆ ಪ್ರೌಢಶಾಲೆ (೧೯೪೫-ಪ್ರಸ್ತುತ ಪದವಿಪೂರ್ವ ಕಾಲೇಜು). ಇವುಗಳ ನಂತರ ಶ್ರೀರಂಗಪಟ್ಟಣ ಪ್ರೌಢಶಾಲೆ (ಪ್ರಸ್ತುತ ಪದವಿ ಪೂರ್ವ ಕಾಲೇಜು) ೧೯೪೭ರಲ್ಲಿಯೂ, ಅರಕೆರೆ ಪ್ರೌಢಶಾಲೆ (ಪ್ರಸ್ತುತ ಪದವಿ ಪೂರ್ವ ಕಾಲೇಜು) ೧೯೫೦ರಲ್ಲಿಯೂ, ಅಘಲಯ ಪ್ರೌಢಶಾಲೆ ೧೯೫೧ರಲ್ಲಿಯೂ, ನಾಗಮಂಗಲ ಪ್ರೌಢಶಾಲೆ (ಪ್ರಸ್ತುತ ಪದವಿ ಪೂರ್ವಕಾಲೇಜು) ೧೯೫೨ರಲ್ಲಿಯೂ ಹಾಗೂ ಕೃಷ್ಣರಾಜಪೇಟೆ ಪ್ರೌಢಶಾಲೆ (ಪ್ರಸ್ತುತ ಪದವಿ ಪೂರ್ವ ಕಾಲೇಜು) ೧೯೫೫ರಲ್ಲಿಯೂ ಪ್ರಾರಂಭವಾದ

ಇತರ ಪ್ರೌಢಶಾಲೆಗಳು. ಇವಲ್ಲದೆ ಹಲವಾರು ಖಾಸಗಿ ಸಂಸ್ಥೆಗಳು ಇದೇ ಸಮಯಕ್ಕೆ ಪ್ರೌಢಶಾಲೆಗಳನ್ನು ಪ್ರಾರಂಭಿಸಿ ಅನುದಾನವನ್ನು ಪಡೆದವು. ಅವೆಂದರೆ, ಪಾಂಡವಪುರದ ವಿಜಯ ಪ್ರೌಢಶಾಲೆ (೧೯೪೭), ಮಂಡ್ಯದ ಮೈಷುಗರ್ ಪ್ರೌಢಶಾಲೆ (೧೯೪೯) ಹಾಗೂ ಮೇಲುಕೋಟೆ ಶ್ರೀ ಯದುಶೈಲ ಪ್ರೌಢಶಾಲೆ (೧೯೫೦).

ರಾಜ್ಯ ಏಕೀಕರಣದ ಕಾಲಕ್ಕೆ ಸರಕಾರಿ ಪ್ರೌಢಶಾಲೆಗಳ ಸಂಖ್ಯೆ ೧೮ಕ್ಕೆ ಏರಿ, ೧೯೬೬ರ ವೇಳೆಗೆ ೫೦ ಆಯಿತು. ಈ ಸಂಖ್ಯೆಯಲ್ಲಿ ಒಟ್ಟು ೨೭೪೪ ಮಕ್ಕಳನ್ನೊಳಗೊಂಡ (೨೪೭೧ ಗಂಡು ೨೭೩ ಹೆಣ್ಣು) ಸರ್ಕಾರಿ ಶಾಲೆಗಳು ಆರು; ೪,೦೨೩ ಮಕ್ಕಳನ್ನೊಳಗೊಂಡ (೩,೫೦೮ ಗಂಡು ಹಾಗೂ ೫೧೫ ಹೆಣ್ಣು) ಮುನಿಸಿಪಲ್ ಶಾಲೆಗಳು ಆರು; ೨,೧೬೯ ಮಕ್ಕಳನ್ನೊಳಗೊಂಡ (೧,೯೨೯ ಗಂಡು, ೨೪೦ ಹೆಣ್ಣು) ಬೋರ್ಡ್ ಶಾಲೆಗಳು ೧೪; ೨,೧೧೧ ಮಕ್ಕಳನ್ನೊಳಗೊಂಡ ಅನುದಾನಿತ ಖಾಸಗಿ ಶಾಲೆಗಳು ಒಂಭತ್ತು: ೧,೭೫೪ ಮಕ್ಕಳನ್ನೊಳಗೊಂಡ (೧,೫೭೮ ಗಂಡು, ೧೭೬ ಹೆಣ್ಣು) ಅನುದಾನ ರಹಿತ ಖಾಸಗಿ ಶಾಲೆಗಳು ೧೨ ಹಾಗೂ ೯೧೧ ಮಕ್ಕಳನ್ನೊಳಗೊಂಡ ಅನುದಾನ ರಹಿತ ಬಾಲಕಿಯರ ಖಾಸಗಿ ಶಾಲೆಗಳು ಮೂರು ಸೇರಿದ್ದವು.

ಸ್ವಾತಂತ್ರ್ಯಾನಂತರ ರಚಿತವಾದ ಶಿಕ್ಷಣ ಆಯೋಗಗಳಾದ ಡಾ.ರಾಧಾಕೃಷ್ಣನ್ ಆಯೋಗ (೧೯೪೮), ಸೆಕೆಂಡರಿ ಶಿಕ್ಷಣ ಆಯೋಗ (೧೯೫೩) ಮತ್ತು ಕೊಠಾರಿ ಶಿಕ್ಷಣ ಆಯೋಗ (೧೯೬೪) ಇವು ನಡೆಸಿದ ಚಿಂತನೆಗಳಿಂದಲೂ, ನೀಡಿದ ಸಲಹೆಗಳಿಂದಲೂ ಶಿಕ್ಷಣ ಕ್ಷೇತ್ರ ವಿಸ್ತಾರಗೊಂಡು ಸೂಕ್ತ ಬದಲಾವಣೆಗಳು ಬಂದವು. ನಾಲ್ಕು ವರ್ಷದ ಪ್ರಾಥಮಿಕ ಹಂತ, ಮೂರು ವರ್ಷದ ಮಾಧ್ಯಮಿಕ (ಹಿರಿಯ ಪ್ರಾಥಮಿಕ) ಹಂತ, ಮೂರು ವರ್ಷದ ಪ್ರೌಢ ಹಾಗೂ ಎರಡು ವರ್ಷದ ಪದವಿಪೂರ್ವ ಶಿಕ್ಷಣ ಹಂತಗಳು ಶಿಫಾರಸ್ಸಾಗಿ ಜಾರಿಯಾದವು.

೧೯೨೭ರ ವೇಳೆಗೆ ಸ್ಥಳೀಯ ಸಂಸ್ಥೆಗಳು ಜಿಲ್ಲೆಯಲ್ಲಿ ನಡೆಸುತ್ತಿದ್ದ ಹಲವಾರು ಪ್ರೌಢಶಾಲೆಗಳನ್ನು ಸರ್ಕಾರವೇ ವಹಿಸಿಕೊಂಡಿತು. ೧೯೭೦ರ ದಶಕದ ನಂತರ ಜಿಲ್ಲೆಯಲ್ಲಿ ಪ್ರೌಢಶಾಲೆಗಳ ಸಂಖ್ಯೆ ಗಣನೀಯವಾಗಿ ಹೆಚ್ಚಳಹೊಂದಿ, ಅವುಗಳಲ್ಲಿ ಒಟ್ಟು ಮಕ್ಕಳ ಸಂಖ್ಯೆ ೧೯೭೦ರಲ್ಲಿ ೨೩,೮೯೧, ೧೯೮೦ ರಲ್ಲಿ ೨೩,೦೦೦ ಹಾಗೂ ೧೯೮೫ರ ವೇಳೆಗೆ ೩೨,೬೧೨ ಎಂದು ತಿಳಿದುಬರುತ್ತದೆ. ಕಳೆದ ಮೂರು ದಶಕಗಳಿಂದ ಹಲವಾರು ಹೊಸ ಖಾಸಗಿ ಸಂಸ್ಥೆಗಳು ಪ್ರೌಢಶಾಲೆಯ ಹಂತದ ಶಿಕ್ಷಣ ನೀಡಲು ಶಾಲೆಗಳನ್ನು ಪ್ರಾರಂಭಿಸಿ, ಸರ್ಕಾರಿ ಅನುದಾನವನ್ನು ಪಡೆದಿರುತ್ತವೆ.

೧೯೯೯–೨೦೦೦ಕ್ಕೆ ಜಿಲ್ಲೆಯ ಒಟ್ಟು ಪ್ರೌಢಶಾಲೆಗಳ ಸಂಖ್ಯೆ ೨೫೯ (ಸರ್ಕಾರಿ–೯೯, ಅನುದಾನಿತ–೫೬ ಹಾಗೂ ಅನುದಾನ ರಹಿತ ೧೦೪) ಆಗಿದ್ದು, ಇವುಗಳಲ್ಲಿನ ಒಟ್ಟು ಮಕ್ಕಳ ಸಂಖ್ಯೆ ೭೦,೫೯೯ (ಗಂಡು–೩೮,೦೭೦ ಹೆಣ್ಣು ೩೨,೫೨೯) ಪ.ಜಾ ಗಂಡು ೪,೬೨೭; ಪ.ಜಾ. ಹೆಣ್ಣು ೪,೩೩೦; ಪ.ವರ್ಗ ಗಂಡು ೩೬೮ ಹಾಗೂ ಪ.ವರ್ಗ ಹೆಣ್ಣು ೩೨೯ ಆಗಿದ್ದಿತು. ಈ ಎಲ್ಲಾ ಶಾಲೆಗಳ ಬೋಧಕ ಸಿಬ್ಬಂದಿ ವರ್ಗದ ಸಂಖ್ಯೆ ಒಟ್ಟು ೨,೩೬೫ ಆಗಿದ್ದು, ಇದರಲ್ಲಿ ೧,೭೬೬ ಗಂಡಸರು, ೫೯೯ ಹೆಂಗಸರು ಆ ಪೈಕಿ ೩೦೩ ಪ.ಜಾತಿ ಗಂಡಸರು, ೯೪ ಪ.ಜಾತಿ ಹೆಂಗಸರು, ೪೫ ಪ.ವರ್ಗ ಗಂಡಸರು ಹಾಗೂ ೧೨ ಪ.ವರ್ಗ ಹೆಂಗಸರು ಸೇರಿದ್ದರು.

೨೦೦೦–೨೦೦೧ನೇ ಸಾಲಿಗೆ ಜಿಲ್ಲೆಯ ಒಟ್ಟು ಪ್ರೌಢಶಾಲೆಗಳ ಸಂಖ್ಯೆ ಒಟ್ಟು ೩೨೨ ಆಗಿದ್ದು, ಇವುಗಳಲ್ಲಿ ೧೬೬ ಸರ್ಕಾರಿ, ೬೨ ಅನುದಾನಿತ ಹಾಗೂ ೧೧೪ ಅನುದಾನ ರಹಿತ ಶಾಲೆಗಳಾಗಿದ್ದವು. ಅವುಗಳ ತಾಲೂಕುವಾರು ವಿವರ, ವಿದ್ಯಾರ್ಥಿ ವಿದ್ಯಾರ್ಥಿನಿಯರ ಹಾಗೂ ಅಧ್ಯಾಪಕರ ಸಂಖ್ಯೆಯನ್ನು ಮುಂದಿನ ಕೋಷ್ಟಕದಲ್ಲಿ ನೀಡಲಾಗಿದೆ.

### ಕೋಷ್ಟಕ ೧೩.೮

| ಕ್ರ. ಸಂ | ತಾಲೂಕು | ಶಾಲೆಗಳು | | | ಮಕ್ಕಳು | | | ಅಧ್ಯಾಪಕರು | | |
|---|---|---|---|---|---|---|---|---|---|---|
| | | ಸರ್ಕಾರಿ | ಅನುದಾನಿತ | ಅನುದಾನ ರಹಿತ | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು |
| ೧ | ಕೃಷ್ಣರಾಜಪೇಟೆ | ೧೯ | ೧೫ | ೧೪ | ೪೩೯೫ | ೨೯೯೭ | ೭೩೯೭ | ೨೧೩ | ೨೦ | ೨೩೩ |
| ೨ | ಮದ್ದೂರು | ೨೬ | ೧೩ | ೨೦ | ೬೯೬೪ | ೭೧೪೫ | ೧೪೧೦೯ | ೩೩೪ | ೯೨ | ೪೨೬ |
| ೩ | ಮಳವಳ್ಳಿ | ೨೬ | ೦೯ | ೧೯ | ೮೫೭೫ | ೬೨೯೮ | ೧೪೮೭೩ | ೨೭೪ | ೯೮ | ೩೭೨ |
| ೪ | ಮಂಡ್ಯ | ೩೨ | ೨೦ | ೨೫ | ೮೯೭೬ | ೮೪೯೮ | ೧೭೪೭೪ | ೪೦೧ | ೨೪೦ | ೬೪೧ |
| ೫ | ನಾಗಮಂಗಲ | ೧೬ | ೦೫ | ೧೬ | ೪೭೫೭ | ೩೯೦೨ | ೮೬೫೯ | ೧೫೭ | ೨೯ | ೧೮೬ |
| ೬ | ಪಾಂಡವಪುರ | ೧೩ | ೦೬ | ೦೮ | ೩೮೫೭ | ೩೩೯೫ | ೭೨೫೨ | ೧೨೫ | ೩೭ | ೧೬೨ |
| ೭ | ಶ್ರೀರಂಗಪಟ್ಟಣ | ೧೪ | ೦೪ | ೧೨ | ೫೧೪೯ | ೨೮೫೮ | ೮೦೦೭ | ೧೫೬ | ೧೨೬ | ೨೮೨ |

ಮೇಲ್ಕಂಡ ಎಲ್ಲಾ ಶಾಲೆಗಳಿಂದ ೧೯೯೪ ರಿಂದ ೨೦೦೨ರ ವರೆಗೆ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಹಾಜರಾದ ಮಕ್ಕಳ ವಿವರಗಳನ್ನು ಈ ಮುಂದೆ ನೀಡಲಾಗಿದೆ.

### ಕೋಷ್ಟಕ ೧೩.೯

| ವರ್ಷ ಮತ್ತು ಮಾಹೆ | ಪರೀಕ್ಷೆಗೆ ಹಾಜರಾದವರು | | ಉತ್ತೀರ್ಣರಾದವರು | | ಶೇಕಡಾ ಫಲಿತಾಂಶ | |
|---|---|---|---|---|---|---|
| | ಗಂಡು | ಹೆಣ್ಣು | ಗಂಡು | ಹೆಣ್ಣು | ಗಂಡು | ಹೆಣ್ಣು |
| ೧೯೯೪ ಏಪ್ರಿಲ್ | ೧೨೫೦೬ | ೭೭೦೪ | ೫೩೫೦ | ೩೬೬೭ | ೪೨.೦೮ | ೪೭.೪೪ |
| ೧೯೯೪ ಅಕ್ಟೋಬರ್ | ೪೭೮೬ | ೧೮೫೨ | ೩೭೭ | ೧೭೧ | ೭.೮೭ | ೯.೨೩ |
| ೧೯೯೫ ಏ | ೯೫೬೩ | ೬೭೯೩ | ೨೩೧೭ | ೧೮೬೨ | ೨೪.೨೨ | ೨೭.೪೧ |
| ೧೯೯೫ ಅ | ೫೬೧೪ | ೨೩೭೯ | ೩೯೨ | ೨೭೨ | ೬.೯೮ | ೧೧.೪೩ |
| ೧೯೯೬ ಏ | ೧೦೨೮೩ | ೮೦೧೩ | ೩೦೮೦ | ೨೬೮೬ | ೨೯.೯೫ | ೩೩.೫೨ |
| ೧೯೯೬ ಅ | ೭೮೬೨ | ೩೪೩೧ | ೫೨೦ | ೩೩೯ | ೬.೬೧ | ೯.೮೮ |
| ೧೯೯೭ ಏ | ೯೮೭೭ | ೮೦೧೧ | ೩೨೧೨ | ೩೦೨೫ | ೩೨.೦೫ | ೩೭.೭೬ |
| ೧೯೯೭ ಅ | ೩೯೪೪ | ೨೧೬೭ | ೪೭೩ | ೩೪೬ | ೧೧.೯೯ | ೧೫.೯೬ |
| ೧೯೯೮ ಏ | ೯೨೩೯ | ೮೨೩೮ | ೩೨೫೪ | ೨೯೯೭ | ೩೫.೨೨ | ೩೬.೩೮ |
| ೧೯೯೮ ಅ | ೭೦೫೭ | ೩೫೮೭ | ೧೦೪೮ | ೭೨೩ | ೧೪.೮೫ | ೨೦.೧೫ |

### ಏಪ್ರಿಲ್ ೧೯೯೯

| ಗಂಡಸರು | | | ಹೆಂಗಸರು | | |
|---|---|---|---|---|---|
| ಹಾಜರಾದವರು | ತೇರ್ಗಡೆಯಾದವರು | ಶೇಕಡಾ | ಹಾಜರಾದವರು | ತೇರ್ಗಡೆಯಾದವರು | ಶೇಕಡಾ |
| ೮೩೫೫ | ೪೦೩೨ | ೪೮.೨೬ | ೭೭೪೮ | ೩೯೨೨ | ೫೦.೬೨ |
| ಪರಿಶಿಷ್ಟ ವರ್ಗ ಗಂಡಸರು | | | ಪರಿಶಿಷ್ಟ ವರ್ಗ ಹೆಂಗಸರು | | |
| ೧೧೬ | ೫೬ | ೪೮.೨೮ | ೯೨ | ೪೫ | ೪೮.೯೧ |
| ಪರಿಶಿಷ್ಟ ಜಾತಿ ಗಂಡಸರು | | | ಪರಿಶಿಷ್ಟ ಜಾತಿ ಹೆಂಗಸರು | | |
| ೧೫೪೫ | ೬೦೭ | ೩೯.೨೯ | ೧೨೧೬ | ೪೮೦ | ೩೯.೪೭ |

**ಏಪ್ರಿಲ್ ೨೦೦೦**

| ಗಂಡಸರು | | | ಹೆಂಗಸರು | | |
|---|---|---|---|---|---|
| ಹಾಜರಾದವರು | ತೇರ್ಗಡೆಯಾದವರು | ಶೇಕಡಾ | ಹಾಜರಾದವರು | ತೇರ್ಗಡೆಯಾದವರು | ಶೇಕಡಾ |
| ೭೯೦೨ | ೩೬೬೯ | ೪೬.೪೩ | ೭೬೪೪ | ೩೬೨೬ | ೪೭.೪೪ |
| ಪರಿಶಿಷ್ಟ ವರ್ಗ ಗಂಡಸರು | | | ಪರಿಶಿಷ್ಟ ವರ್ಗ ಹೆಂಗಸರು | | |
| ೮೩ | ೩೪ | ೪೦.೯೬ | ೬೮ | ೩೩ | ೪೮.೫೨ |
| ಪರಿಶಿಷ್ಟ ಜಾತಿ ಗಂಡಸರು | | | ಪರಿಶಿಷ್ಟ ಜಾತಿ ಹೆಂಗಸರು | | |
| ೧೩೭೪ | ೫೪೯ | ೩೯.೯೬ | ೧೧೭೯ | ೪೪೫ | ೩೭.೭೪ |

**ಏಪ್ರಿಲ್ ೨೦೦೨**

| ಹಾಜರಾದವರು | | ತೇರ್ಗಡೆಯಾದವರು | | ಶೇಕಡಾ |
|---|---|---|---|---|
| ಹೆಣ್ಣು | ಗಂಡು | ಹೆಣ್ಣು | ಗಂಡು | |
| ೧೦೭೭೦ | ೧೦೯೭೯ | ೫೪೧೫ | ೫೩೬೯ | ೪೯.೫೮ |

## ಪದವಿಪೂರ್ವ ಶಿಕ್ಷಣ

ಮಂಡ್ಯದ ಹಿರಿಯ ರಾಜಕಾರಣಿ ಹಾಗೂ ಶಿಕ್ಷಣವೇತ್ತ ಶಂಕರೇಗೌಡರು ಶಿಕ್ಷಣ ಸಚಿವರಾಗಿದ್ದಾಗ ೧೯೭೨ರಲ್ಲಿ ಎರಡು ವರ್ಷದ ಪಿಯುಸಿ ಶಿಕ್ಷಣ ಕ್ರಮ ಕರ್ನಾಟಕದಾದ್ಯಂತ ಜಾರಿಯಾಗಿ ಮಂಡ್ಯದಲ್ಲಿಯೂ ಪ್ರಾರಂಭವಾಯಿತು. ಪ್ರಥಮ ದರ್ಜೆ ಕಾಲೇಜುಗಳಲ್ಲಿ ಹಾಗೂ ಹೈಯರ್ ಸೆಕೆಂಡರಿ ಶಾಲೆಗಳಲ್ಲಿ ನಡೆಯುತ್ತಿದ್ದ ಒಂದು ವರ್ಷದ ಪಿ.ಯು.ಸಿ. ತರಗತಿಗಳು ರದ್ದಾದವು. ನೂತನ ಶಿಕ್ಷಣ ಪದ್ಧತಿಯನ್ವಯ ೧೦+೨+೩ ಶಿಕ್ಷಣ ನಿಯಮ ಜಾರಿಯಾಯಿತು. ಶೈಕ್ಷಣಿಕ ವರ್ಷ ೧೯೭೯ರಲ್ಲಿ ಎರಡು ಭಾಷೆ ಹಾಗೂ ನಾಲ್ಕು ಐಚ್ಛಿಕ ವಿಷಯಗಳನ್ನೊಳಗೊಂಡ ಪಠ್ಯಕ್ರಮ ಪ್ರಾರಂಭಗೊಂಡು ಪದವಿ ಪೂರ್ವ ಕಾಲೇಜುಗಳ ಆಡಳಿತ ನೋಡಿಕೊಳ್ಳಲು ಪದವಿ ಪೂರ್ವ ಶಿಕ್ಷಣ ಮಂಡಳಿಯೂ ಅಸ್ತಿತ್ವಕ್ಕೆ ಬಂದಿತು. ಇದರ ಮುಖ್ಯಸ್ಥರಾಗಿ ಪ್ರಾರಂಭಕ್ಕೆ ಅಧ್ಯಕ್ಷರು, ಇವರ ಸಹಾಯಕರಾಗಿ ನಿರ್ದೇಶಕರು, ಹಾಗೂ ಉಪ ಮತ್ತು ಸಹ ನಿರ್ದೇಶಕರು ನಿಯೋಜಿಸಲ್ಪಟ್ಟರು. ತದನಂತರ ಈ ಮಂಡಳಿ ನಿರ್ದೇಶಕರ ಆಡಳಿತಕ್ಕೆ ಒಳಪಟ್ಟಿತು. ೧೯೮೬ ರಿಂದ ಮಂಡಳಿ ಸ್ವತಂತ್ರ ಇಲಾಖೆಯಾಗಿ ಮಾರ್ಪಟ್ಟು, ಪದವಿ ಪೂರ್ವ ಶಿಕ್ಷಣ ಇಲಾಖೆ ಎಂದು ಕರೆಯಲ್ಪಟ್ಟಿತು. ರಾಜ್ಯದ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಸಂಯುಕ್ತ ಪದವಿಪೂರ್ವ ಕಾಲೇಜುಗಳಲ್ಲಿ, ಹಾಗೂ ಸ್ವತಂತ್ರ ಪದವಿಪೂರ್ವ ಕಾಲೇಜುಗಳಲ್ಲಿ ನಡೆಯುತ್ತಿರುವ ಪದವಿ ಪೂರ್ವ ತರಗತಿಗಳ ಆಡಳಿತವನ್ನು ಇಲಾಖೆ ವಹಿಸಿಕೊಂಡಿರುತ್ತದೆ. ಇದರ ನಿರ್ದೇಶಕರಾಗಿ ಒಬ್ಬ ಐ.ಎ.ಎಸ್. ಅಥವಾ ಕೆ.ಎ.ಎಸ್. ದರ್ಜೆಯ ಅಧಿಕಾರಿ ನಿಯೋಜಿಸಲ್ಪಟ್ಟಿರುತ್ತಾರೆ. ಇವರಡಿ ಜಂಟಿ ನಿರ್ದೇಶಕರು, ಉಪನಿರ್ದೇಶಕರು ಹಾಗೂ ಸಹ ನಿರ್ದೇಶಕರು, ಹಲವಾರು ಶಾಖಾಧಿಕಾರಿಗಳು ಹಾಗೂ ಇತರೆ ಸಿಬ್ಬಂದಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಇತ್ತೀಚೆಗೆ ಇಲಾಖೆಯ ಆಡಳಿತ ವಿಕೇಂದ್ರಿಕರಣಗೊಂಡಿದ್ದು, ಪ್ರತೀ ಜಿಲ್ಲೆಗೆ ಒಬ್ಬರಂತೆ ಉಪನಿರ್ದೇಶಕರು ತಂತಮ್ಮ ಜಿಲ್ಲೆಯ ಪದವಿ ಪೂರ್ವ ಶಿಕ್ಷಣದ ಹೊಣೆ ಹೊತ್ತಿದ್ದಾರೆ.

ಮಾರ್ಚ್ ೨೦೦೦ದ ವೇಳೆಗೆ ಜಿಲ್ಲೆಯಲ್ಲಿ ಒಟ್ಟು ೩೭ ಸರ್ಕಾರಿ, ೧೦ ಅನುದಾನಿತ ಹಾಗೂ ೨೪ ಅನುದಾನ ರಹಿತ ಪದವಿಪೂರ್ವ ಕಾಲೇಜುಗಳಿದ್ದು, ಇವುಗಳಲ್ಲಿ ಒಟ್ಟು ೧೬,೨೨೯ ಮಕ್ಕಳು (೮,೯೨೫ ಗಂಡು, ೩,೩೦೪ ಹೆಣ್ಣು) ವ್ಯಾಸಂಗ ಮಾಡುತ್ತಿದ್ದರು. ಅವುಗಳ ಹೆಚ್ಚಿನ ವಿವರ ಈ ಕೆಳಕಂಡಂತಿದೆ.

**ಕೋಷ್ಟಕ ೧೩.೧೦**

| | ಕಾಲೇಜುಗಳ ಸಂಖ್ಯೆ | ಬಾಲಕರು | ಬಾಲಕಿಯರು | ಪರಿಶಿಷ್ಟ ಜಾತಿ | | ಪರಿಶಿಷ್ಟ ವರ್ಗ | | ಬೋಧಕ ವರ್ಗ |
|---|---|---|---|---|---|---|---|---|
| | | | | ಬಾಲಕರು | ಬಾಲಕಿಯರು | ಬಾಲಕರು | ಬಾಲಕಿಯರು | |
| ಸರ್ಕಾರಿ | ೩೨ | ೨೫೬೬ | ೩೮೧೬ | ೬೬೪ | ೫೫೦ | ೪೮ | ೪೯ | ೨೦೦ |
| ಅನುದಾನಿತ | ೧೦ | ೪೦೭೨ | ೨೪೭೪ | ೫೦೮ | ೩೧೬ | ೪೫ | ೧೪ | ೨೧೯ |
| ಅನುದಾನ ರಹಿತ | ೨೪ | ೧೫೮೭ | ೧೦೧೬ | ೧೭೯ | ೧೩೪ | ೧೨ | | ೧೨೯ |
| ಒಟ್ಟು | ೭೧ | ೯೨೨೫ | ೭೩೦೬ | ೧೩೫೧ | ೧೦೦೦ | ೧೦೫ | ೬೩ | ೫೪೮ |

೨೦೦೨–೨೦೦೩ನೇ ಸಾಲಿಗೆ ಜಿಲ್ಲೆಯಲ್ಲಿ ಒಟ್ಟು ೮೪ ಪದವಿಪೂರ್ವ ಕಾಲೇಜುಗಳಿದ್ದು, ಇವುಗಳಲ್ಲಿ ೪೦ ಸರ್ಕಾರಿ, ೧೦ ಅನುದಾನಿತ ಹಾಗೂ ೨೯ ಅನುದಾನ ರಹಿತ ಸಂಸ್ಥೆಗಳಾಗಿದ್ದವು. ಇವಲ್ಲದೆ, ಐದು ಪದವಿಪೂರ್ವ ಕಾಲೇಜುಗಳು ಪ್ರಥಮ ದರ್ಜೆ ಕಾಲೇಜುಗಳಿಗೆ ಹೊಂದಿಕೊಂಡು ಕಾರ್ಯನಿರ್ವಹಿಸುತ್ತಿದ್ದವು. ಈ ಎಲ್ಲಾ ಕಾಲೇಜುಗಳಲ್ಲಿ ಒಟ್ಟು ೧೯,೭೬೨ ಮಕ್ಕಳು ವ್ಯಾಸಂಗ ಮಾಡುತ್ತಿದ್ದು, ಇವರ ಪೈಕಿ ೧೦,೪೦೧ ಮಂದಿ ಪ್ರಥಮ ಪಿ.ಯು.ಸಿ. ಯಲ್ಲಿಯೂ, ೯೩೬೧ ಮಂದಿ ದ್ವಿತೀಯ ಪಿ.ಯು.ಸಿ. ಯಲ್ಲಿಯೂ ವ್ಯಾಸಂಗ ಮಾಡುತ್ತಿದ್ದರು.

ಈ ಮುಂದಿನ ಕೋಷ್ಟಕದಲ್ಲಿ ೧೯೯೮ ರಿಂದ ೨೦೦೨ರ ವರೆಗೆ ಮೇಲ್ಕಂಡ ಎಲ್ಲಾ ಸಂಸ್ಥೆಗಳಿಂದ ಪಿ.ಯು.ಸಿ. ಪರೀಕ್ಷೆಗೆ ಹಾಜರಾದ ಅಭ್ಯರ್ಥಿಗಳ ವಿವರಗಳನ್ನು ನೀಡಲಾಗಿದೆ(ಇದರಲ್ಲಿ ಪುನರಾವರ್ತಿತ ಅಭ್ಯರ್ಥಿಗಳೂ ಸೇರಿರುತ್ತಾರೆ).

**ಕೋಷ್ಟಕ ೧೩.೧೧**

| ವರ್ಷ | ತಿಂಗಳು | ಹಾಜರಾದವರು | ಉತ್ತೀರ್ಣರಾದವರು | ಶೇಕಡಾ |
|---|---|---|---|---|
| ೧೯೯೮ | ಏಪ್ರಿಲ್ | ೮೫೫೮ | ೨೪೬೨ | ೨೮.೭೭ |
| | ಅಕ್ಟೋಬರ್ | ೪೩೨೧ | ೬೧೦ | ೧೪.೧೨ |
| ೧೯೯೯ | ಏಪ್ರಿಲ್ | ೬೩೩೨(NS) ೩೦೫೨(OS) | ೨೭೭೫ ೫೨೬ | ೪೩.೮೨ ೧೭.೨೩ |
| | ಅಕ್ಟೋಬರ್ | ೨೬೨೭(NS) ೧೮೫೭(OS) | ೬೨೫ ೧೪೮ | ೨೩.೭೯ ೦೭.೯೭ |
| ೨೦೦೦ | ಏಪ್ರಿಲ್ | ೯೩೬೦ | ೩೪೨೬ | ೩೬.೬೦ |
| | ಅಕ್ಟೋಬರ್ | ೪೪೦೨ | ೬೬೦ | ೧೪.೯೯ |
| ೨೦೦೧ | ಏಪ್ರಿಲ್ | ೧೨೩೧೯ | ೩೯೯೭ | ೩೨.೪೫ |
| | ಆಕ್ಟೋಬರ್ | ೫೯೧೯ | ೧೨೫೩ | ೨೧.೧೭ |
| ೨೦೦೨ | ಏಪ್ರಿಲ್ | ೧೩೪೮೧ | ೫೭೭೨ | ೪೨.೮೨ |
| | ಅಕ್ಟೋಬರ್ | ೫೩೮೯ | ೭೦೯ | ೧೩.೧೬ |

## ವಯಸ್ಕರ ಶಿಕ್ಷಣ

ಸ್ವಾತಂತ್ರ್ಯ ಪೂರ್ವದಲ್ಲಿ ಜಿಲ್ಲೆಯಲ್ಲಿ ಪ್ರಾಥಮಿಕ ಶಿಕ್ಷಣ ಮಂದಗತಿಯಲ್ಲಿ ಸಾಗಿದುದರಿಂದ ಸಾಕ್ಷರರ ಸಂಖ್ಯೆ ಗಣನೀಯವಾಗಿರಲಿಲ್ಲ. ನಿರಕ್ಷರತೆ ರಾಷ್ಟ್ರದ ಪ್ರಗತಿಗೆ ಮಾರಕವೆಂಬ ಅಂಶವನ್ನು ಮನಗೊಂಡು, ಇಂತಹವರನ್ನು ಸಾಕ್ಷರರಾಗಿಸಬೇಕೆಂಬ ಮಹದುದ್ದೇಶದಿಂದ ಮೈಸೂರು ವಿಶ್ವವಿದ್ಯಾನಿಲಯದ ಹಲವು ಆಧ್ಯಾಪಕರು ಹಾಗೂ ವಿದ್ಯಾರ್ಥಿಗಳು ಕಾರ್ಯೋನ್ಮುಖರಾಗಿ, ೧೯೪೬-೪೭ ರಲ್ಲಿ ಲಾಟೀನು, ಪುಸ್ತಕಗಳೊಂದಿಗೆ ಜನರಲ್ಲಿಗೇ ಹೋಗಿ ಅಕ್ಷರ ಕಲಿಸಲು ಪ್ರಾರಂಭಿಸಿದರು. ಲಭ್ಯ ಮಾಹಿತಿಯಂತೆ ಇವರಿಂದ ಮೇಲಿನ ವರ್ಷದಲ್ಲಿ ಒಟ್ಟು ೩೨೧ ಕಲಿಕಾ ಕೇಂದ್ರಗಳು ಸ್ಥಾಪಿತವಾದುವು. ಇವುಗಳ ಫಲಾನುಭವಿಗಳ ಸಂಖ್ಯೆ ೬,೧೭೨ ಆಗಿದ್ದಿತು. ಇವುಗಳಲ್ಲಿ ಕನ್ನಡ ಹಾಗೂ ಉರ್ದು ಕಲಿಕಾ ಕೇಂದ್ರಗಳೂ, ಪರಿಶಿಷ್ಟರಿಗಾಗಿ ಪ್ರತ್ಯೇಕ ಕೇಂದ್ರಗಳೂ ಇದ್ದವು. ೧೯೫೦ರ ವೇಳೆಗೆ ಇಂತಹ ಕೇಂದ್ರಗಳ ಸಂಖ್ಯೆ ೩೩೭ ಅಗಿದ್ದು, ಫಲಾನುಭವಿಗಳ ಸಂಖ್ಯೆ ೩,೨೮೬ ಆಗಿದ್ದಿತು. ೧೯೫೬ರ ವೇಳೆಗೆ ಕೇಂದ್ರಗಳ ಸಂಖ್ಯೆ ೧೧೦ ಹಾಗೂ ಫಲಾನುಭವಿಗಳ ಸಂಖ್ಯೆ ೧,೨೧೪ ಆಗಿದ್ದಿತು. ಪ್ರತೀ ವರ್ಷ ಈ ಸಂಖ್ಯೆ ಏರುಮುಖವಾಗಿ ಇರಲಿಲ್ಲ. ಉದಾಹರಣೆಗೆ ೧೯೬೦ರಲ್ಲಿ ಕೇಂದ್ರಗಳ ಸಂಖ್ಯೆ ೧೦೬ ಹಾಗೂ ಫಲಾನುಭವಿಗಳ ಸಂಖ್ಯೆ ೪೮೦ ಆಗಿದ್ದಿತು. ೧೯೬೮ರಲ್ಲಿ ಕೇಂದ್ರಗಳ ಸಂಖ್ಯೆ ೭೭ಕ್ಕೆ ಇಳಿದು ಫಲಾನುಭವಿಗಳ ಸಂಖ್ಯೆಯೂ ೨೪೪ ಆಯಿತು.

ರಾಷ್ಟ್ರೀಯ ವಯಸ್ಕರ ಶಿಕ್ಷಣ ನೀತಿ ೧೯೭೮ರಲ್ಲಿ ಜಾರಿಯಾಗಿ, ಸಾಕ್ಷರತಾ ಉದ್ದೇಶ ಹೊಂದಿದ ಹತ್ತು ತಿಂಗಳ ಅವಧಿಯ ಶಿಕ್ಷಣ ಯೋಜನೆ ಜಾರಿಗೆ ಬಂದಿತು. ಇದರಂತೆ ಗ್ರಾಮೀಣ ಕ್ರಿಯಾತ್ಮಕ ಸಾಕ್ಷರತಾ ಯೋಜನೆ ಅಡಿ, ರಾಜ್ಯದ ಆಯ್ದ ಗ್ರಾಮಗಳಲ್ಲಿ ೩೦೦ ಕೇಂದ್ರ ಘಟಕಗಳು ಕಾರ್ಯಪ್ರವೃತ್ತವಾದವು. ಈ ಅವಕಾಶ ಜಿಲ್ಲೆಯ ಶ್ರೀರಂಗಪಟ್ಟಣ, ಮಂಡ್ಯ ಹಾಗೂ ಮದ್ದೂರು ತಾಲೂಕುಗಳಲ್ಲಿ ಇದೇ ವರ್ಷ ಒದಗಿ ಬಂದು, ಪ್ರತೀ ಕೇಂದ್ರದಲ್ಲಿ ೧೫ ರಿಂದ ೩೫ ವರ್ಷ ವಯಸ್ಸಿನ ೩೦ ವಯಸ್ಕರನ್ನು ಸಾಕ್ಷರರನ್ನಾಗಿ ಮಾಡುವ ಯೋಜನೆ ಅನುಷ್ಠಾನವಾಯಿತು. ಈ ಯೋಜನೆಯಡಿ ೧೯೭೯ ರಿಂದ ೧೯೮೯ರ ದಶಕದಲ್ಲಿ ೯,೦೦೦ ನಿರಕ್ಷರರನ್ನು ಸಾಕ್ಷರರನ್ನಾಗಿ ಮಾಡಲಾಯಿತು. ಕೇಂದ್ರ ಸರ್ಕಾರದ ಈ ಯೋಜನೆಯಡಿಯಲ್ಲಿಯೇ ರಾಜ್ಯ ಯೋಜನಾ ಘಟಕವು ಜಿಲ್ಲೆಯ ಪಾಂಡವಪುರ ತಾಲೂಕಿನಲ್ಲಿ ೧೯೮೦ರಲ್ಲಿ ಪ್ರಾರಂಭವಾಯಿತು. ೧೯೮೦ ರಿಂದ ೮೫ರ ವರೆಗೆ ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿ ತಲಾ ೧೦೦ ಕೇಂದ್ರಗಳು ಕಾರ್ಯಪ್ರವೃತ್ತವಾಗಿದ್ದು, ಇದರೊಟ್ಟಿಗೆ ಯುವ ಕೇಂದ್ರ ಹಾಗೂ ಕಾಲೇಜುಗಳ ಎನ್.ಎಸ್.ಎಸ್. ಘಟಕಗಳು ವಯಸ್ಕರ ಶಿಕ್ಷಣದತ್ತ ಗಮನ ಹರಿಸಿದವು.

ಕರ್ನಾಟಕ ಸರ್ಕಾರ ೧೯೮೪ರಲ್ಲಿ ಸಾಕ್ಷರತಾ ಪ್ರಮಾಣ ಹೆಚ್ಚಿಸಲು 'ಅಕ್ಷರ ಸೇನೆ' ಯೋಜನೆಯನ್ನು ಜಾರಿ ಮಾಡಿತು. ಇದರಡಿ ಮೂರರಿಂದ ಆರು ವಯಸ್ಸಿನ ಮಕ್ಕಳಿಗೆ ಪೂರ್ವ ಪ್ರಾಥಮಿಕ, ಆರರಿಂದ ೧೪ ವಯಸ್ಸಿನವರಿಗೆ ಪ್ರಾಥಮಿಕ ಹಾಗೂ ೧೫ ರಿಂದ ೨೫ ವಯಸ್ಸಿನ ನಿರಕ್ಷರಿಗಳಿಗೆ ಶಿಕ್ಷಣ ಕೇಂದ್ರಗಳನ್ನು ಸ್ಥಾಪಿಸಲಾಯಿತು. ಇಂತಹ ಒಟ್ಟು ೮೦೦ ಕೇಂದ್ರಗಳನ್ನು ಜಿಲ್ಲೆಯಲ್ಲಿ ತೆರೆಯಲಾಯಿತು. ೧೯೮೫ರಲ್ಲಿ ಒಂದು ಕೇಂದ್ರ ಗ್ರಾಮೀಣ ಕ್ರಿಯಾತ್ಮಕ ಸಾಕ್ಷರತಾ ಯೋಜನಾ ಘಟಕ ಮತ್ತು ಒಂದು ರಾಜ್ಯ ಯೋಜನಾ ಘಟಕಗಳು ಮಂಜೂರಾದ್ದರಿಂದ, ಕೃಷ್ಣರಾಜಪೇಟೆ ಮತ್ತು ನಾಗಮಂಗಲಗಳಲ್ಲಿ ೩೦೦ ಕೇಂದ್ರಗಳೂ, ಮಳವಳ್ಳಿಯಲ್ಲಿ ರಾಜ್ಯ ಘಟಕದ ನೂರು ಕೇಂದ್ರಗಳೂ ಅಸ್ತಿತ್ವಕ್ಕೆ ಬಂದು, ೧೯೮೮ರ ಹೊತ್ತಿಗೆ ಜಿಲ್ಲೆಯಲ್ಲಿ ಅಕ್ಷರ ಸೇವಾಕೇಂದ್ರಗಳಲ್ಲದೆ ೮೦೦ ವಯಸ್ಕರ ಶಿಕ್ಷಣ ಕೇಂದ್ರಗಳು ಕಾರ್ಯನಿರ್ವಹಿಸುತ್ತಿದ್ದವು.

ವಯಸ್ಕರ ಶಿಕ್ಷಣ ಇಲಾಖೆಯು ಜಿಲ್ಲೆಯಲ್ಲಿ ೧೯೮೦ರಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ನೆರವಿನೊಂದಿಗೆ ಪ್ರಾರಂಭವಾಯಿತು. ಹಲವು ಆಯ್ದ ಗ್ರಾಮಗಳಲ್ಲಿ ಒಂಭತ್ತರಿಂದ ೧೪ ವರ್ಷ ವಯೋಮಿತಿಯಲ್ಲಿರುವ ಅನಕ್ಷರಸ್ಥರನ್ನು

ಸಾಕ್ಷರರನ್ನಾಗಿಸುವ ಮೂಲ ಉದ್ದೇಶವನ್ನು ಇದು ಹೊಂದಿದ್ದಿತು. ಇದಕ್ಕಾಗಿ ೬೦೦ ಜನಶಿಕ್ಷಣ ಕೇಂದ್ರಗಳನ್ನು ತೆರೆಯಲಾಯಿತು. ಇಲಾಖೆಯಿಂದ ತರಬೇತು ಹೊಂದಿದ ಕಾರ್ಯಕರ್ತರನ್ನು ಇವುಗಳ ಮೇಲ್ವಿಚಾರಣೆಗಾಗಿ ನೇಮಿಸಲಾಯಿತು. ಪ್ರತೀ ಕೇಂದ್ರದಲ್ಲಿ ೩೦ ಮಂದಿ ಅನಕ್ಷರಸ್ಥರಿಗೆ ಅಕ್ಷರ ಕಲಿಸುವ ವ್ಯವಸ್ಥೆ ಮಾಡಲಾಯಿತು. ಈ ಯೋಜನೆಯ ಗುರಿ ಸಾಧನೆಗಾಗಿ ಜಿಲ್ಲೆಯನ್ನು ಎರಡು ಘಟಕಗಳಾಗಿ ವಿಭಜಿಸಿ, ಇಬ್ಬರು ಉಪ ಯೋಜನಾಧಿಕಾರಿಗಳನ್ನು ಉಸ್ತುವಾರಿಗಾಗಿ ನೇಮಿಸಲಾಯಿತು. ಈ ಕಾರ್ಯಕರ್ತರ ಕಾರ್ಯಕ್ಷಮತೆಯ ಅಭಿವೃದ್ಧಿಗಾಗಿ ವರ್ಷಂಪ್ರತಿ ಹತ್ತು ದಿನಗಳ ಪುನರ್ ಮನನ ಕಾರ್ಯಾಗಾರವನ್ನೂ ನಡೆಸಲಾಯಿತು.

ಗ್ರಾಮೀಣ ಪ್ರದೇಶದಲ್ಲಿ ಸಾಕ್ಷರತಾ ಅಭಿವೃದ್ಧಿಗಾಗಿ ಹಾಗೂ ಯೋಜನೆಯ ದಕ್ಷತೆ ಹೆಚ್ಚಿಸಲು ಕೇಂದ್ರಗಳ ಮೇಲ್ವಿಚಾರಣೆಗಾಗಿ ಜಿಲ್ಲಾ ಪಂಚಾಯಿತಿ ಆಧ್ಯಕ್ಷರ ಅಧೀನಕ್ಕೆ ಇದರ ಕಾರ್ಯವ್ಯಾಪ್ತಿಯನ್ನು ವಹಿಸಲಾಯಿತು. ಸ್ಥಳೀಯ ಶಾಲಾ ಮುಖ್ಯೋಪಾಧ್ಯಾಯರನ್ನು ಕಾರ್ಯದರ್ಶಿಯನ್ನಾಗಿ ನೇಮಿಸಿ, ಅವರಿಗೆ ಅಭ್ಯರ್ಥಿಗಳ ದಾಖಲಾತಿ ಹಾಗೂ ಕಲಿಕೆಯ ಜವಾಬ್ದಾರಿಯನ್ನು ವಹಿಸಲಾಯಿತು. ಈ ಕಾರ್ಯಕ್ರಮ ಇಂದಿಗೂ ಯಶಸ್ವಿಯಾಗಿ ನಡೆದು ಬಂದಿದೆ.

ಪ್ರಸ್ತುತ ಜಿಲ್ಲೆಯನ್ನು ಸಂಪೂರ್ಣ ಸಾಕ್ಷರತಾ ಆಂದೋಲನಕ್ಕೆ ಒಳಪಡಿಸಲಾಗಿದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರದ ನೆರವಿನಿಂದ ಜನಶಿಕ್ಷಣ ನಿಲಯಗಳ ಪ್ರೇರಕರ ಸೇವೆಯನ್ನು ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಂಡಿದ್ದು, ಈಗಾಗಲೇ ಕಾರ್ಯನಿರ್ವಹಿಸುತ್ತಿರುವ ವಾಚನಾಲಯ ಹಾಗೂ ಗ್ರಂಥಾಲಯಗಳನ್ನು ಉಪಯುಕ್ತ ರೀತಿಯಲ್ಲಿ ಬಳಸಿಕೊಳ್ಳಲಾಗುತ್ತಿದೆ. ಜಿಲ್ಲೆಯಲ್ಲಿ ಮೊದಲನೇ ಹಂತದ ಸಾಕ್ಷರತಾ ಕಾರ್ಯಕ್ರಮದಡಿಯಲ್ಲಿ ಶೇಕಡಾ ೮೦ ರಷ್ಟು ಸಾಧನೆಯಾಗಿದೆ.

ಮಾರ್ಚ್ ೨೦೦೦ದ ವೇಳೆಗೆ ಜಿಲ್ಲೆಯಲ್ಲಿ ಒಟ್ಟು ೯೮ ಜನಶಿಕ್ಷಣ ಕೇಂದ್ರಗಳಿದ್ದು, ಇವುಗಳಲ್ಲಿ ೩೭ ರಾಜ್ಯದ ವತಿಯಿಂದ ಹಾಗೂ ೬೧ ಕೇಂದ್ರದ ವತಿಯಿಂದ ನಡೆಸಲ್ಪಡುತ್ತಿದ್ದವು. ಅವುಗಳ ತಾಲೂಕುವಾರು ವಿವರ ಇಂತಿದೆ: ಮಂಡ್ಯ–ಕೇಂದ್ರ ೧೧, ರಾಜ್ಯ ೦೮; ಮದ್ದೂರು–ಕೇಂದ್ರ ೧೨, ರಾಜ್ಯ ೦೪; ಮಳವಳ್ಳಿ–ಕೇಂದ್ರ ಇಲ್ಲ, ರಾಜ್ಯ ೧೫; ಕೃಷ್ಣರಾಜಪೇಟೆ–ಕೇಂದ್ರ ೧೬, ರಾಜ್ಯ ಇಲ್ಲ; ನಾಗಮಂಗಲ ಕೇಂದ್ರ–೧೩, ರಾಜ್ಯ ಇಲ್ಲ; ಪಾಂಡವಪುರ–ಕೇಂದ್ರ ಇಲ್ಲ, ರಾಜ್ಯ ೧೦ ಮತ್ತು ಶ್ರೀರಂಗಪಟ್ಟಣ ಕೇಂದ್ರ ೦೯, ರಾಜ್ಯ ಇಲ್ಲ.

**ಮುಂದುವರಿಕೆ ಶಿಕ್ಷಣ ಯೋಜನೆ:** ಶಿಕ್ಷಣದಿಂದ ವಂಚಿತರಾದವರಿಗೆ ಓದು, ಬರಹ ಹಾಗೂ ಗಣಿತಗಳನ್ನು ಕಲಿಸುವುದು; ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣಕ್ಕೆ ಸೂಕ್ತ ವಾತಾವರಣ ಕಲ್ಪಿಸುವುದು; ಮುಕ್ತ ಕಲಿಕೆ (ಓಪನ್ ಸ್ಕೂಲ್) ಮುಖಾಂತರ ಪರ್ಯಾಯ ಶಿಕ್ಷಣ ಪಡೆಯಲು ಅನುಕೂಲ ಕಲ್ಪಿಸುವುದು; ಜನರಲ್ಲಿ ಓದುವ ಹವ್ಯಾಸ ಬೆಳೆಸುವುದು; ರಾಷ್ಟ್ರೀಯ ಮೌಲ್ಯಗಳ ಅರಿವು ಮೂಡಿಸುವುದು; ಸಮುದಾಯ ಮನೋಭಾವ ಬೆಳೆಸುವುದು; ಮಾನವ ಸಂಪನ್ಮೂಲ ಅಭಿವೃದ್ಧಿಗೆ ಉತ್ತೇಜನ ನೀಡುವುದು; ಗ್ರಾಮೀಣ ಜನತೆ ಸರ್ಕಾರಿ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವಂತೆ ಪ್ರೇರೇಪಿಸುವುದು ಹಾಗೂ ಆಜೀವ ಪರ್ಯಂತ ಕಲಿಕಾ ಮನೋಭಾವದಿಂದ ಜನರು ಒಂದು ಕಲಿಕಾ ಸಮಾಜವನ್ನು ನಿರ್ಮಿಸುವಂತೆ ಮಾಡುವ ಉದ್ದೇಶಗಳಿಂದ ಸರ್ಕಾರ ಮೇಲ್ಕಂಡ ಯೋಜನೆಯನ್ನು ೨೦೦೧ರಲ್ಲಿ ಜಾರಿಗೆ ತಂದಿದೆ. ಈ ಯೋಜನೆಯಲ್ಲಿ ನವಸಾಕ್ಷರರು, ಅರೆಸಾಕ್ಷರರು, ಅನಕ್ಷರಸ್ಥರು, ಶಾಲೆಬಿಟ್ಟವರು, ಅನೌಪಚಾರಿಕ ವ್ಯವಸ್ಥೆಯಲ್ಲಿ ಕಲಿತವರು ಹಾಗೂ ಸಮುದಾಯದ ಸರ್ವರೂ ಭಾಗವಹಿಸಬಹುದಾಗಿದೆ. ಈ ಕಾರ್ಯಕ್ರಮದಡಿ ಕನಿಷ್ಠ ೨೫೦೦ ಜನಸಂಖ್ಯೆಗೆ ಒಂದರಂತೆ ಒಬ್ಬ ಪ್ರೇರಕ/ಪ್ರೇರಕಿಯ ಮೇಲ್ವಿಚಾರಣೆಯಲ್ಲಿ ಮುಂದುವರಿಕೆ ಶಿಕ್ಷಣ ಕೇಂದ್ರಗಳನ್ನು ತೆರೆಯಲಾಗಿದೆ. ಈ ಯೋಜನೆಯ ಅನುಷ್ಠಾನಕ್ಕಾಗಿ 'ಗ್ರಾಮ ಸಾಕ್ಷರತಾ ಸಂಸ್ಥೆಗಳು' ಮೇಲ್ವಿಚಾರಣೆ

ನಡೆಸುತ್ತವೆ. ಪ್ರತೀ ಹತ್ತು ಕೇಂದ್ರಗಳ ಉಸ್ತುವಾರಿಗೆ ಒಂದು 'ನೋಡಲ್ ಕೇಂದ್ರ' ವನ್ನು ಸ್ಥಾಪಿಸಲಾಗಿದೆ. ಇದರ ಉಸ್ತುವಾರಿ ಒಬ್ಬ ನೋಡಲ್ ಪ್ರೇರಕ ಹಾಗೂ ಒಬ್ಬ ನೋಡಲ್ ಸಹ ಪ್ರೇರಕರಿಂದ ನಡೆಯುತ್ತದೆ.

೨೦೦೧-೦೨ರಲ್ಲಿ ಜಿಲ್ಲೆಯಲ್ಲಿ ಒಟ್ಟು ೫೮೦ ಇಂತಹ ಶಿಕ್ಷಣ ಮುಂದುವರಿಕೆ ಕೇಂದ್ರಗಳೂ, ೫೮ ನೋಡಲ್ ಕೇಂದ್ರಗಳೂ ಕಾರ್ಯನಿರ್ವಹಿಸುತ್ತಿದ್ದು ಅವುಗಳ ತಾಲೂಕುವಾರು ವಿವರಗಳನ್ನು ಈ ಮುಂದೆ ನೀಡಲಾಗಿದೆ.

**ಕೋಷ್ಟಕ ೧೩.೧೨**

| ಕ್ರಮ ಸಂಖ್ಯೆ | ತಾಲೂಕು | ಕಲಿಕಾ ಕೇಂದ್ರಗಳು | ನೋಡಲ್ ಕೇಂದ್ರಗಳು |
|---|---|---|---|
| ೧ | ಕೃಷ್ಣರಾಜಪೇಟೆ | ೮೦ | ೮ |
| ೨ | ಮದ್ದೂರು | ೯೦ | ೯ |
| ೩ | ಮಳವಳ್ಳಿ | ೯೦ | ೯ |
| ೪ | ಮಂಡ್ಯ ಗ್ರಾಮಾಂತರ | ೭೦ | ೭ |
| | ಮಂಡ್ಯ ನಗರ | ೬೦ | ೬ |
| ೫ | ನಾಗಮಂಗಲ | ೭೦ | ೭ |
| ೬ | ಪಾಂಡವಪುರ | ೬೦ | ೬ |
| ೭ | ಶ್ರೀರಂಗಪಟ್ಟಣ | ೬೦ | ೬ |
| | **ಒಟ್ಟು:** | **೫೮೦** | **೫೮** |

## ವಿದ್ಯಾರ್ಥಿ ನಿಲಯಗಳು

ಗ್ರಾಮೀಣ ಹಾಗೂ ಬಡ ವಿದ್ಯಾರ್ಥಿಗಳ ಶಿಕ್ಷಣಾನುಕೂಲಕ್ಕಾಗಿ ಸರ್ಕಾರ ಹಲವಾರು ಅಭಿವೃದ್ಧಿ ಹಾಗೂ ಕಲ್ಯಾಣ ಕಾರ್ಯಕ್ರಮಗಳನ್ನು ಕೈಗೊಂಡಿದ್ದು, ಅವರ ಮೂಲಭೂತ ಅಗತ್ಯಗಳಾದ ಊಟ ಮತ್ತು ವಸತಿಗಾಗಿ ವಿದ್ಯಾರ್ಥಿ ನಿಲಯಗಳನ್ನು ಸ್ಥಾಪಿಸಿದೆ. ಇದಕ್ಕಾಗಿ ರಾಜ್ಯ ಮಟ್ಟದಲ್ಲಿ ಸಮಾಜ ಕಲ್ಯಾಣ ಇಲಾಖೆಯೇ ಈ ಹೊಣೆಯನ್ನು ಹೊತ್ತಿದೆ. ಜಿಲ್ಲಾ ಮಟ್ಟದಲ್ಲಿ ಮಂಡ್ಯದಲ್ಲಿ ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಯ ಕಚೇರಿಯು ಜಿಲ್ಲೆಯ ಎಲ್ಲೆಡೆ ಮೆಟ್ರಿಕ್ ಪೂರ್ವ ಹಾಗೂ ಮೆಟ್ರಿಕ್ ನಂತರದ ಎರಡು ಹಂತಗಳಲ್ಲಿ ವಿದ್ಯಾರ್ಥಿ ನಿಲಯಗಳ ಮೇಲ್ವಿಚಾರಣೆ ನಡೆಸುತ್ತಿದೆ.

### ಸಮಾಜ ಕಲ್ಯಾಣ ಇಲಾಖೆಯ ಶೈಕ್ಷಣಿಕ ಕಾರ್ಯಕ್ರಮಗಳು

ಪರಿಶಿಷ್ಟ ಜಾತಿ ಹಾಗೂ ವರ್ಗದ ಸರ್ವತೋಮುಖ ಅಭಿವೃದ್ಧಿಗಾಗಿ ಸರ್ಕಾರ ಹಲವಾರು ಆರ್ಥಿಕ, ಸಾಮಾಜಿಕ ಹಾಗೂ ಶೈಕ್ಷಣಿಕ ಕಾರ್ಯಕ್ರಮಗಳನ್ನು ಸಮಾಜಕಲ್ಯಾಣ ಇಲಾಖೆಯ ಮುಖಾಂತರ ಅನುಷ್ಠಾನಗೊಳಿಸುತ್ತಿದೆ. ಇದಕ್ಕಾಗಿ ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿ ಹಾಗೂ ತಾಲೂಕು ಮಟ್ಟದಲ್ಲಿ ತಾಲೂಕು ಸಮಾಜ ಕಲ್ಯಾಣ ಅಧಿಕಾರಿ ಕಾರ್ಯನಿರ್ವಹಿಸುತ್ತಾರೆ.

ಮೇಲ್ಕಂಡ ವರ್ಗಗಳ ಕುಟುಂಬಗಳ ಮೂರರಿಂದ ಐದು ವರ್ಷದ ಮಕ್ಕಳಲ್ಲಿ ಶಾಲೆಗೆ ಹೋಗುವ ಅಭ್ಯಾಸ ಬೆಳೆಸಲು ಮಹಿಳಾ ಹಾಗೂ ಮಕ್ಕಳ ಕಲ್ಯಾಣ ಯೋಜನೆಯಡಿ ಜಿಲ್ಲೆಯಲ್ಲಿ ಒಟ್ಟು ೨೫ ಕಲ್ಯಾಣ ಕೇಂದ್ರಗಳು ಕಾರ್ಯೋನ್ಮುಖವಾಗಿವೆ. ಬೆಳಗ್ಗೆ ಒಂಭತ್ತರಿಂದ ಸಂಜೆ ಐದರವರೆಗೆ ನಡೆಯುವ ಕೇಂದ್ರಗಳಲ್ಲಿ ೫೦ ಮಂದಿ ಗಂಡು ಮತ್ತು ಹೆಣ್ಣು ಮಕ್ಕಳಿಗೆ ಪ್ರವೇಶಾವಕಾಶವಿದ್ದು, ಇವರ ಯೋಗಕ್ಷೇಮಕ್ಕಾಗಿ ಒಬ್ಬ ಮಹಿಳಾ ಕಲ್ಯಾಣ ಸಂಚಾಲಕಿ ಹಾಗೂ ಒಬ್ಬ ನಿರ್ವಾಹಕಿ ಇರುತ್ತಾರೆ. ಈ ಕೇಂದ್ರಗಳಲ್ಲಿ ಪ್ರತೀ ದಿನ ಮಕ್ಕಳಿಗೆ ಮಧ್ಯಾಹ್ನದ ಉಪಹಾರ ಹಾಗೂ ವರ್ಷಕ್ಕೆ ಎರಡು ಜೊತೆ ಸಮವಸ್ತ್ರ ನೀಡಲಾಗುತ್ತದೆ.

## ವಸತಿ ಮತ್ತು ಆಶ್ರಮ ಶಾಲೆಗಳು

ಜಿಲ್ಲೆಯ ಮಳವಳ್ಳಿ ತಾಲೂಕಿನಲ್ಲಿ ಪರಿಶಿಷ್ಟ ಜಾತಿಯವರಿಗಾಗಿ ೧೦೦ ಮಕ್ಕಳ ಒಂದು ವಸತಿ ಶಾಲೆ, ಪರಿಶಿಷ್ಟ ವರ್ಗದ ಮಕ್ಕಳಿಗಾಗಿ ಮಂಡ್ಯ ತಾಲೂಕು ಶಿವಾರಗುಡ್ಡ ಗಿರಿಜನ ಕಾಲೂನಿಯಲ್ಲಿ ೫೦ ಮಕ್ಕಳ ಆಶ್ರಮ ಶಾಲೆ ಕಾರ್ಯನಿರ್ವಹಿಸುತ್ತಿವೆ. ೧೯೯೭ ರಿಂದ ನಾಗಮಂಗಲದಲ್ಲಿ ಒಂದು ಆಶ್ರಮ ಶಾಲೆ ಪ್ರಾರಂಭವಾಗಿದೆ. ವಿದ್ಯಾ ಇಲಾಖೆಯಿಂದ ಮಾನ್ಯತೆ ಪಡೆದಿರುವ ಈ ಸಂಸ್ಥೆಗಳನ್ನು ಸರ್ಕಾರಿ ಕಟ್ಟಡಗಳಲ್ಲಿ ನಡೆಸಲಾಗುತ್ತಿದೆ. ಒಂದರಿಂದ ನಾಲ್ಕನೇ ತರಗತಿಯವರೆಗೆ ವಿದ್ಯಾಭ್ಯಾಸ ನೀಡುವ ಮೇಲ್ಕಂಡ ಪ್ರತೀ ಶಾಲೆಯಲ್ಲಿ ಒಬ್ಬ ಮುಖ್ಯೋಪಾಧ್ಯಾಯರು, ಒಬ್ಬ ಸಹಶಿಕ್ಷಕ ಹಾಗೂ ಅಡುಗೆ ಸಿಬ್ಬಂದಿ ಇರುತ್ತಾರೆ. ಆಹಾರ ಸಾಮಗ್ರಿ ಕೊಳ್ಳುವಿಕೆ, ಆಹಾರ ತಯಾರಿಕೆ, ವಿತರಣೆ ಹಾಗೂ ಉಗ್ರಾಣಗಳನ್ನೊಳಗೊಂಡ ಎಲ್ಲಾ ಆಡಳಿತಾತ್ಮಕ ವ್ಯವಹಾರಗಳನ್ನು ಮುಖ್ಯೋಪಾಧ್ಯಾಯರು ನೋಡಿಕೊಳ್ಳುತ್ತಾರೆ.

ಪ್ರತೀ ವಿದ್ಯಾರ್ಥಿಗೆ ಇಲ್ಲಿ ವಸತಿ ಸೌಕರ್ಯ ಒದಗಿಸಲಾಗಿದ್ದು, ವರ್ಷಕ್ಕೊಮ್ಮೆ ಎರಡು ಜೊತೆ ಸಮವಸ್ತ್ರ ನೀಡಲಾಗುತ್ತದಲ್ಲದೆ, ಸೋಪು, ಎಣ್ಣೆ, ಪಠ್ಯಪುಸ್ತಕ, ಲೇಖನ ಸಾಮಗ್ರಿ, ಹಾಸಿಗೆ, ಹೊದಿಕೆ ಮತ್ತು ಔಷಧೋಪಚಾರ ನೀಡಲಾಗುವುದು. ನಾಲ್ಕನೇ ತರಗತಿ ತೇರ್ಗಡೆಯಾದವರನ್ನು ಇತರೆ ಶಾಲೆಗಳಲ್ಲಿ ಮುಂದಿನ ತರಗತಿಗೆ ದಾಖಲಿಸಲಾಗುತ್ತದೆ.

ಡಾ.ಅಂಬೇಡ್ಕರ್ ಶತಮಾನೋತ್ಸವ ಅಂಗವಾಗಿ ೧೯೯೩–೯೪ನೇ ಸಾಲಿನಿಂದ ಒಂದರಿಂದ ನಾಲ್ಕನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ ಹಾಗೂ ವರ್ಗಗಳ ವಿದ್ಯಾರ್ಥಿಗಳಿಗೆ ಶಾಲೆಗಳಿಗೆ ದಾಖಲಾಗಲು ಪ್ರೋತ್ಸಾಹ ಧನ ಮಂಜೂರು ಮಡುವ ಕಾರ್ಯಕ್ರಮದಡಿ ಪ್ರತೀ ವಿದ್ಯಾರ್ಥಿಗೆ ವಾರ್ಷಿಕ ರೂ. ೭೫–೦೦ನ್ನು ನೀಡಲಾಗುತ್ತಿದೆ.

ಸರ್ಕಾರದಿಂದ ಅಂಗೀಕೃತವಾಗಿರುವ ಮಾಧ್ಯಮಿಕ ಹಾಗೂ ಪ್ರೌಢಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಮತ್ತು ವಿದ್ಯಾರ್ಥಿ ನಿಲಯಗಳ ಸೌಲಭ್ಯ ಹೊಂದದ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಐದರಿಂದ ಏಳನೇ ತರಗತಿಯ ಮಕ್ಕಳಿಗೆ ವಾರ್ಷಿಕ ೭೫ ರೂ ಹಾಗೂ ಎಂಟರಿಂದ ೧೦ನೇ ತರಗತಿಯ ಮಕ್ಕಳಿಗೆ ವಾರ್ಷಿಕ ೧೦೦ ರೂ.ಗಳ ಶಿಷ್ಯವೇತನ ನೀಡಲಾಗುತ್ತದೆ. ಇದಲ್ಲದೆ, ಮಕ್ಕಳಲ್ಲಿ ಸ್ಪರ್ಧಾತ್ಮಕ ಮನೋಭಾವ ಬೆಳೆಸುವ ಸಲುವಾಗಿ ೬೦ ಕ್ಕಿಂತ ಹೆಚ್ಚಿನ ಅಂಕಗಳಿಸಿದ ಮೇಲ್ಕಂಡ ವಿದ್ಯಾರ್ಥಿಗಳಿಗೆ ವಾರ್ಷಿಕ ಕ್ರಮವಾಗಿ ೭೫ ಮತ್ತು ೧೦೦ ರೂ.ಗಳಂತೆ ಪ್ರತಿಭಾ ವಿದ್ಯಾರ್ಥಿ ವೇತನವೂ ದೊರೆಯುತ್ತದೆ.

ನಿರ್ಮಲೀಕರಣ ವೃತ್ತಿಯಲ್ಲಿ ತೊಡಗಿರುವ ಜನರ ಶಾಲೆಗೆ ಹೋಗುವ ಮಕ್ಕಳಿಗಾಗಿ ಸರ್ಕಾರ ವರ್ಷದ ಹತ್ತು ತಿಂಗಳಿಗೆ ರೂ.೨೫ (ಒಂದ ರಿಂದ ಐದನೇ ತರಗತಿಯವರಿಗೆ), ರೂ. ೪೦ (ಆರರಿಂದ ಎಂಟನೇ ತರಗತಿಯವರಿಗೆ) ಹಾಗೂ ರೂ. ೫೦ (ಒಂಬತ್ತರಿಂದ ೧೦ನೇ ತರಗತಿಯವರಿಗೆ) ಸಾಮಾನ್ಯ ವಿದ್ಯಾರ್ಥಿ ವೇತನವನ್ನು ನೀಡುತ್ತದೆ.

ಪರಿಶಿಷ್ಟ ಜಾತಿ ಮತ್ತು ವರ್ಗದ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳೆರಡೂ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನವನ್ನು ನೀಡುತ್ತಾ ಬಂದಿದೆ. ಇದಲ್ಲದೆ ಉತ್ತಮ ದರ್ಜೆಯಲ್ಲಿ ತೇರ್ಗಡೆಯಾದಾಗ ರ್‍ಯಾಂಕ್ ವಿಜೇತರಿಗೆ ನಗದು ಬಹುಮಾನ ನೀಡುವುದು, ಅಧ್ಯಯನ ಪ್ರವಾಸ ವೆಚ್ಚ ನೀಡುವುದು, ಬುಕ್ ಬ್ಯಾಂಕ್ ಯೋಜನೆಯಡಿ ಅಗತ್ಯ ಪುಸ್ತಕಗಳ ಪೂರೈಕೆ, ಮಹಿಳೆಯರಿಗಾಗಿ ಉಚಿತ ಹೊಲಿಗೆ ತರಬೇತಿ, ಕಾನೂನು ಪದವೀಧರರಿಗೆ ವೃತ್ತಿಯನ್ನು ಆರಂಭಿಸಲು ತರಬೇತಿ ಅನುಕೂಲ ಹಾಗೂ ಕಾನೂನು ಪುಸ್ತಕಗಳನ್ನು ಖರೀದಿಸಲು ಧನ ಸಹಾಯ– ಇವೇ ಮುಂತಾದ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವ ಸಮಾಜ ಕಲ್ಯಾಣ ಇಲಾಖೆ, ಪರಿಶಿಷ್ಟ ಜಾತಿ ಪಂಗಡಗಳ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸುತ್ತಿದೆ (ಹೆಚ್ಚಿನ ವಿವರಗಳಿಗೆ ಅಧ್ಯಾಯ ೧೬ ನೋಡಿ).

## ವೃತ್ತಿ ಶಿಕ್ಷಣ

ಕೇಂದ್ರ ಸರ್ಕಾರದ ಮಾನವ ಸಂಪನ್ಮೂಲ ಇಲಾಖೆಯು ವೃತ್ತಿ ಶಿಕ್ಷಣದ ಮಹತ್ವವನ್ನರಿತು ಎಲ್ಲಾ ರಾಜ್ಯಗಳಲ್ಲಿಯೂ ಎರಡು ವರ್ಷದ ಪದವಿಪೂರ್ವ ಹಂತದಲ್ಲಿ ವೃತ್ತಿ ಶಿಕ್ಷಣ ಪ್ರಾರಂಭಿಸಬೇಕೆಂದು ಹೊರಡಿಸಿದ ಆಜ್ಞೆಯಂತೆ, ಕರ್ನಾಟಕ ರಾಜ್ಯದಲ್ಲಿ ನೂತನ ಶಿಕ್ಷಣ ನೀತಿಯಡಿ ೧೯೭೭–೭೮ ರಿಂದ ಪದವಿಪೂರ್ವ ಹಂತದಲ್ಲಿ ಈ ಶಿಕ್ಷಣ ಪ್ರಾರಂಭವಾಯಿತು. ಉನ್ನತ ಶಿಕ್ಷಣಕ್ಕೆ ಒದಗಿರುವ ಅಧಿಕ ಒತ್ತಡವನ್ನು ನಿವಾರಿಸುವುದು. ವಿದ್ಯಾರ್ಥಿಗಳು ಸ್ವಾವಲಂಬಿಗಳಾಗಿ ಸ್ವಯಂ ಉದ್ಯೋಗವನ್ನು ಕೈಗೊಳ್ಳಲು ಆತ್ಮವಿಶ್ವಾಸ ಮೂಡಿಸುವುದು, ಅವರಲ್ಲಿನ ಕುಶಲತೆ ಗುರುತಿಸಿ ಪರಿಣತಿ ಮೂಡಿಸುವುದು, ಹಾಗೂ ತಮ್ಮ ಬದುಕನ್ನು ತಾವೇ ರೂಪಿಸಿಕೊಂಡು ಬಾಳುವಂತೆ ಮಾಡುವುದೇ ಈ ಶಿಕ್ಷಣದ ಪ್ರಮುಖ ಧ್ಯೇಯೋದ್ದೇಶಗಳಾಗಿವೆ. ಇದಕ್ಕಾಗಿ ರಾಜಧಾನಿಯಲ್ಲಿ ಒಂದು ಪ್ರತ್ಯೇಕ ನಿರ್ದೇಶನಾಲಯ ಕಾರ್ಯನಿರ್ವಹಿಸುತ್ತಿದ್ದು, ಇದಕ್ಕೆ ಐ.ಎ.ಎಸ್ ಅಥವಾ ಕೆ.ಎ.ಎಸ್.ದರ್ಜೆಯ ಒಬ್ಬ ನಿರ್ದೇಶಕರು ಮುಖ್ಯಸ್ಥರಾಗಿರುತ್ತಾರೆ. ಅವರಿಗೆ ಸಹಾಯಕರಾಗಿ ಆಡಳಿತ ಹಾಗೂ ಶೈಕ್ಷಣಿಕ ವಿಷಯಗಳಿಗೆ ಇಬ್ಬರು ಪ್ರತ್ಯೇಕ ಸಹನಿರ್ದೇಶಕರು, ಇಬ್ಬರು ಉಪನಿರ್ದೇಶಕರು, ಮೂರು ಮಂದಿ ಸಹಾಯಕ ನಿರ್ದೇಶಕರು, ಒಬ್ಬ ಲೆಕ್ಕಾಧಿಕಾರಿ, ಇಬ್ಬರು ಪತ್ರಾಂಕಿತ ವ್ಯವಸ್ಥಾಪಕರು ಹಾಗೂ ೩೦ ಮಂದಿ ಇತರೆ ಸಿಬ್ಬಂದಿ ಇರುತ್ತಾರೆ. ಇವರಲ್ಲದೇ ಪ್ರತೀ ಜಿಲ್ಲೆಯಲ್ಲಿ ವೃತ್ತಿ ಶಿಕ್ಷಣ ಕಾರ್ಯಕ್ರಮಗಳ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಜಿಲ್ಲೆಯ ಪದವಿಪೂರ್ವ ಶಿಕ್ಷಣ ಉಪನಿರ್ದೇಶಕರಿಗೆ ೧೯೭೭ನೇ ಸಾಲಿನಿಂದ ವೃತ್ತಿ ಶಿಕ್ಷಣದ ಜವಾಬ್ದಾರಿಯನ್ನೂ ವಹಿಸಲಾಗಿದೆ. ಇವರು ವಿದ್ಯಾರ್ಥಿಗಳ ದಾಖಲಾತಿ ಅನುಮೋದನೆ, ಪರೀಕ್ಷಾ ನಿರ್ವಹಣೆ, ಕಚೇರಿಗಳ ತಪಾಸಣೆ ಹಾಗೂ ಶಿಕ್ಷಕರ ವೇತನ ಅನುದಾನ ಬಿಡುಗಡೆಯ ಜವಾಬ್ದಾರಿ ನಿರ್ವಹಿಸುವರು. ವೃತ್ತಿ ಶಿಕ್ಷಣ ನೀಡುವ ಕಾಲೇಜುಗಳಲ್ಲಿ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ ವರ್ಗದವರು ಅರೆಕಾಲಿಕ ಸಿಬ್ಬಂದಿಯಾಗಿದ್ದು, ವರ್ಷಕ್ಕೆ ಎಂಟು ತಿಂಗಳು ಸಂಭಾವನೆ ಪಡೆಯುವರು.

ಮಂಡ್ಯ ಜಿಲ್ಲೆಯಲ್ಲಿ ವೃತ್ತಿ ಶಿಕ್ಷಣ ೧೯೭೮–೭೯ನೇ ಶೈಕ್ಷಣಿಕ ವರ್ಷದಿಂದ ಪ್ರಾರಂಭಗೊಂಡಿತು. ಪ್ರಸ್ತುತ ಜಿಲ್ಲೆಯ ೩೪ ಕಾಲೇಜುಗಳಲ್ಲಿ ವೃತ್ತಿ ಶಿಕ್ಷಣಕ್ಕೆ ಸಂಬಂಧಿಸಿದ ೬೫ ವಿವಿಧ ವಿಷಯಗಳನ್ನು ಬೋಧಿಸಲಾಗುತ್ತಿದೆ. ಇವುಗಳಲ್ಲಿ ರೇಷ್ಮೆ, ತೋಟಗಾರಿಕೆ ಹಾಗೂ ಹೊಲಿಗೆ ಮತ್ತು ಕಸೂತಿ ವಿಷಯಗಳು ಜನಪ್ರಿಯವಾಗಿದ್ದು, ಇವು ಕ್ರಮವಾಗಿ ಜಿಲ್ಲೆಯ ಹದಿನಾರು, ಎಂಟು ಹಾಗೂ ಏಳು ಕಾಲೇಜುಗಳಲ್ಲಿ ಬೋಧಿಸಲ್ಪಡುತ್ತಿವೆ. ಇತರೆ ವಿಷಯಗಳಾದ ಹೈನುಗಾರಿಕೆ, ಮೀನುಗಾರಿಕೆ, ಕೋಳಿ ಸಾಕಣೆ, ಸಕ್ಕರೆ ತಾಂತ್ರಿಕತೆ, ಮುದ್ರಣ, ಮತ್ತು ಪುಸ್ತಕ ಬೈಂಡಿಂಗ್ ವಿಷಯಗಳನ್ನು ವಿವಿಧ ಕಾಲೇಜುಗಳಲ್ಲಿ ಬೋಧಿಸಲಾಗುತ್ತಿದೆ.

೧೯೯೩–೯೪ರಲ್ಲಿ ಕೈಗಾರಿಕೆ ಸಂಪರ್ಕ ಹೊಂದಿದ ಅತ್ಯುತ್ತಮ ವೃತ್ತಿ ಶಿಕ್ಷಣ ಸಂಸ್ಥೆ ಪ್ರಶಸ್ತಿ ಕೆ.ಎಂ.ದೊಡ್ಡಿಯ ಭಾರತಿ ಕಾಲೇಜಿಗೆ ದೊರೆತಿದೆ. ೧೯೯೫–೯೬ನೇ ಸಾಲಿನಲ್ಲಿ ವೃತ್ತಿ ಶಿಕ್ಷಣ ಇಲಾಖೆ ಜಿಲ್ಲೆಯಲ್ಲಿ ನಡೆಸಿದ ಸಮೀಕ್ಷೆಯಂತೆ

ಜಿಲ್ಲೆಯಾದ್ಯಂತ ಕೃಷಿ ಸಂಬಂಧಿತ ವೃತ್ತಿ ಶಿಕ್ಷಣದ ಅವಶ್ಯಕತೆ ಹೆಚ್ಚಾಗಿ ಕಂಡು ಬಂದಿದ್ದು, ಇದಕ್ಕಾಗಿ ಹೆಚ್ಚಿನ ಅರೆಕಾಲಿಕ ಉಪನ್ಯಾಸಕರನ್ನು ನೇಮಿಸಿಕೊಳ್ಳಲಾಗಿದೆ. ೧೯೯೭-೯೮ ನೇ ಸಾಲಿಗೆ ಒಟ್ಟು ೧,೪೭೧ ಮಂದಿ (೧,೧೩೦ ಗಂಡು, ೩೪೧ ಹೆಣ್ಣು) ೧೯೯೮-೯೯ ನೇ ಸಾಲಿಗೆ ಒಟ್ಟು ೧,೫೪೬(೧,೨೧೬ ಗಂಡು, ೩೩೦ ಹೆಣ್ಣು) ಹಾಗೂ ೧೯೯೯-೨೦೦೦ ಸಾಲಿಗೆ ಒಟ್ಟು ೧,೨೯೬ (೯೮೭ ಗಂಡು, ೩೧೪ ಹೆಣ್ಣು) ಮಕ್ಕಳು ಜಿಲ್ಲೆಯ ವಿವಿಧ ಕಾಲೇಜುಗಳಲ್ಲಿ ವೃತ್ತಿ ಶಿಕ್ಷಣ ಪಡೆಯುತ್ತಿದ್ದರು. ೨೦೦೦-೨೦೦೧ನೇ ಸಾಲಿಗೆ ಬೋಧಕ ಸಿಬ್ಬಂದಿ ಸಂಖ್ಯೆ ಸುಮಾರು ೨೬೦ ಆಗಿದ್ದಿತು.

ಜಿಲ್ಲೆಯಲ್ಲಿ ೨೦೦೧-೨೦೦೨ನೇ ಸಾಲಿಗೆ ವೃತ್ತಿ ಶಿಕ್ಷಣ ನೀಡಿದ ಕಾಲೇಜುಗಳ ಮತ್ತು ವಿಷಯಗಳ ವಿವರಗಳನ್ನು ವಿದ್ಯಾರ್ಥಿಗಳ ಸಂಖ್ಯೆಯೊಂದಿಗೆ ಈ ಮುಂದಿನ ಕೋಷ್ಟಕಗಳಲ್ಲಿ ನೀಡಲಾಗಿದೆ.

**ಕೋಷ್ಟಕ ೧೩.೧೩**

| ವಿಷಯ | ವಿಷಯ ಹೊಂದಿರುವ ಕಾಲೇಜುಗಳ ಸಂಖ್ಯೆ | ವಿದ್ಯಾರ್ಥಿ / ವಿದ್ಯಾರ್ಥಿನಿಯರ ಸಂಖ್ಯೆ | |
|---|---|---|---|
| | | ಮೊದಲ ವರ್ಷ | ದ್ವಿತೀಯ ವರ್ಷ |
| ರೇಷ್ಮೆ ಕೃಷಿ | ೧೬ | ೩೦೬ | ೨೪೪ |
| ಗೋಟಗಾರಿಕೆ | ೦೯ | ೨೦೭ | ೧೪೮ |
| ಹೊಲಿಗೆ ಕಸೂತಿ | ೦೭ | ೧೩೭ | ೭೮ |
| ಕೃಷಿ ಅರ್ಥಶಾಸ್ತ್ರ | ೦೬ | ೧೫೬ | – |
| ಹೈನುಗಾರಿಕೆ | ೦೪ | ೧೦೦ | ೪೮ |
| ಎಲೆಕ್ಟ್ರಿಕ್ ವೈರಿಂಗ್ | ೦೪ | ೧೦೬ | ೯೧ |
| ಪ್ರಿ ಸ್ಕೂಲ್ ಎಜುಕೇಷನ್ | ೦೩ | ೮೦ | ೬೪ |
| ಗ್ರಂಥಾಲಯ ವಿಜ್ಞಾನ | ೦೩ | ೭೧ | – |
| ಕೋಳಿ ಸಾಕಣೆ | ೦೨ | ೬೦ | ೪೪ |
| ಪ್ರಿಂಟಿಂಗ್/ ಬೈಂಡಿಂಗ್ | ೦೨ | ೪೪ | ೧೪ |
| ಸರ್ವೆಯಿಂಗ್ | ೦೧ | ೩೦ | ೨೪ |
| ಸಕ್ಕರೆ ತಂತ್ರಜ್ಞಾನ | ೦೧ | ೩೦ | – |
| ಸಿವಿಲ್ ಕನ್‌ಸ್ಟ್ರಕ್ಷನ್ | ೦೧ | ೩೦ | – |
| ಟಿ.ವಿ., ರೇಡಿಯೋ ರಿಪೇರಿ | ೦೧ | ೩೦ | ೨೪ |
| ಗಣಕಯಂತ್ರ ತಂತ್ರಜ್ಞಾನ | ೦೧ | ೩೦ | ೨೩ |
| ಸಹಕಾರ | ೦೧ | ೩೦ | ೨೧ |
| ಮೀನುಗಾರಿಕೆ | ೦೧ | ೨೧ | ೩೦ |
| ಲೆಕ್ಕ ಮತ್ತು ವೆಚ್ಚಶಾಸ್ತ್ರ | ೦೧ | ೧೬ | ೨೧ |

ಇದೇ ಸಾಲಿಗೆ ಈ ಎಲ್ಲಾ ಸಂಸ್ಥೆಗಳಿಂದ ಒಟ್ಟು ೩೬೮ ಮಂದಿ ಬೋಧಕ ಸಿಬ್ಬಂದಿ ಇದ್ದರು.

೧೯೯೭ ರಿಂದ ೨೦೦೨ರವರೆಗೆ ಜಿಲ್ಲೆಯ ವಿವಿಧ ಸಂಸ್ಥೆಗಳಲ್ಲಿ ನಡೆದ ವೃತ್ತಿಶಿಕ್ಷಣ ಪರೀಕ್ಷೆಗಳ ಫಲಿತಾಂಶದ ವಿವರ ಹೀಗಿದೆ.

**ಕೋಷ್ಟಕ ೧೩.೧೪**

**ಪ್ರಥಮ ವರ್ಷ**

| ಕ್ರ.ಸಂ | ವರ್ಷ | ಹಾಜರಾದವರು | ಉತ್ತೀರ್ಣರಾದವರು | ಶೇಕಡಾ |
|---|---|---|---|---|
| ೧ | ೧೯೯೭ ಏಪ್ರಿಲ್ | ೧೬೪೨ | ೮೩೩ | ೫೦.೭೩ |
| | ನವೆಂಬರ್ | ೫೨೦ | ೨೫೭ | ೪೯.೪೨ |
| ೨ | ೧೯೯೮ ಏಪ್ರಿಲ್ | ೧೫೫೮ | ೯೮೭ | ೬೩.೩೫ |
| | ನವೆಂಬರ | ೧೮೦೫ | ೧೪೨ | ೩೭.೬೭ |
| ೩ | ೧೯೯೯ ಏಪ್ರಿಲ್ | ೧೪೪೪ | ೭೩೫ | ೫೦.೯೦ |
| | ನವೆಂಬರ್ | ೩೮೩ | ೨೧೭ | ೫೬.೬೬ |
| ೪ | ೨೦೦೦ ಏಪ್ರಿಲ್ | ೧೧೭೨ | ೭೦೯ | ೬೦.೪೯ |
| | ನವೆಂಬರ್ | ೧೮೨ | ೭೨ | ೩೯.೫೬ |
| ೫ | ೨೦೦೧ ಏಪ್ರಿಲ್ | ೧೪೫೪ | ೯೦೩ | ೬೨.೧೦ |
| ೬ | ೨೦೦೨ ಏಪ್ರಿಲ್ | ೧೫೬೯ | ೧೦೫೯ | ೬೭.೫೦ |

**ದ್ವಿತೀಯ ವರ್ಷ**

| ಕ್ರ.ಸಂ | ವರ್ಷ | ಹಾಜರಾದವರು | ಉತ್ತೀರ್ಣರಾದವರು | ಶೇಕಡಾ |
|---|---|---|---|---|
| ೧ | ೧೯೯೭ ಏಪ್ರಿಲ್ | ೧೫೧೩ | ೧೦೪೯ | ೬೯.೩೩ |
| | ನವೆಂಬರ್ | ೩೩೪ | ೧೭೧ | ೫೧.೨೦ |
| ೨ | ೧೯೯೮ ಏಪ್ರಿಲ್ | ೧೧೫೧ | ೮೮೫ | ೭೬.೮೯ |
| | ನವೆಂಬರ | ೧೪೪೩ | ೬೨ | ೩೫.೬೩ |
| ೩ | ೧೯೯೯ ಏಪ್ರಿಲ್ | ೧೧೦೨ | ೬೪೭ | ೫೮.೭೧ |
| | ನವೆಂಬರ್ | ೨೮೦ | ೧೨೨ | ೪೩.೫೭ |
| ೪ | ೨೦೦೦ ಏಪ್ರಿಲ್ | ೧೦೧೪ | ೭೨೧ | ೭೧.೧೦ |
| | ನವೆಂಬರ್ | ೧೬೧ | ೫೭ | ೩೫.೪೦ |
| ೫ | ೨೦೦೧ ಏಪ್ರಿಲ್ | ೭೮೪ | ೫೦೩ | ೬೪.೧೬ |
| ೬ | ೨೦೦೨ ಏಪ್ರಿಲ್ | ೧೨೩೩ | ೯೩೪ | ೭೫.೭೦ |

ಸೂಚನೆ: ೨೦೦೧ರ ನಂತರ ನವೆಂಬರ್ ಪರೀಕ್ಷೆ ರದ್ದಾಗಿರುತ್ತದೆ.

**ಕುಶಲಕರ್ಮಿ ತರಬೇತಿ ಸಂಸ್ಥೆ, ನಾಗಮಂಗಲ**

ಈ ಕೈಗಾರಿಕಾ ಶಾಲೆಯು 'ಗ್ರಾಮೀಣ ಕುಶಲಕರ್ಮಿಗಳ ತರಬೇತಿ ಕೇಂದ್ರ' ಎಂಬ ಹೆಸರಿನಲ್ಲಿ ೨೯-೯-೧೯೫೬ ರಲ್ಲಿ ಪ್ರಾರಂಭವಾಯಿತು. ಅಂದಿನ ಕೇಂದ್ರ ಸಚಿವ ಚಂಗಲರಾಯರೆಡ್ಡಿಯವರು ಇದನ್ನು ಉದ್ಘಾಟಿಸಿದರು. ಇಲ್ಲಿ ಗ್ರಾಮೀಣ ಕುಶಲಕರ್ಮಿಗಳಿಗಾಗಿ ಲೋಹೇತರ, ಕಮ್ಮಾರಿಕೆ, ಮರಗೆಲಸ, ಹತ್ತಿ ಮತ್ತು ಉಣ್ಣೆ ನೇಯ್ಗೆ ವಿಭಾಗಗಳನ್ನು ತೆರೆಯಲಾಗಿದೆ. ಈ ಸಂಸ್ಥೆ ೧೯೬೦ರಲ್ಲಿ ಕೈಗಾರಿಕಾ ಹಾಗೂ ವಾಣಿಜ್ಯ ಇಲಾಖೆಯ ಆಡಳಿತಕ್ಕೊಳಪಟ್ಟು, ತನ್ನ ೪೦ ವರ್ಷಗಳ ಅರ್ಥಪೂರ್ಣ ಸೇವೆಯಲ್ಲಿ ೩೦೦೦ ಕ್ಕೂ ಹೆಚ್ಚಿನ ವಿದ್ಯಾರ್ಥಿಗಳಿಗೆ ತರಬೇತಿ ನೀಡಿರುತ್ತದೆ. ಸಂಸ್ಥೆಯ ಅಭಿವೃದ್ಧಿಯ ದೃಷ್ಟಿಯಿಂದ ವರ್ಷಂಪ್ರತಿ ಕೈಗಾರಿಕಾ ಸಪ್ತಾಹಗಳನ್ನು ಏರ್ಪಡಿಸಲಾಗುತ್ತದೆ. ಇವುಗಳಲ್ಲಿ ಸಂಸ್ಥೆಯ ವಿದ್ಯಾರ್ಥಿಗಳಿಂದ ತಯಾರಾದ ಶಿಲ್ಪಗಳು ಹಾಗೂ ಗೃಹೋಪಯೋಗಿ ವಸ್ತುಗಳ ಪ್ರದರ್ಶನ ಹಾಗೂ ಮಾರಾಟ ನಡೆಯುತ್ತದೆ. ಸಂಸ್ಥೆಯು ಜನಾನುರಾಗಿಯಾಗಿದ್ದು 'ಹಿತ್ತಾಳೆ ಕೇಂದ್ರ' ಎಂಬ ಪರ್ಯಾಯ ಹೆಸರನ್ನು ಪಡೆದಿರುತ್ತದೆ.

## ಕೃಷಿ ಶಿಕ್ಷಣ

**ಕೃಷಿ ಕಾಲೇಜು:** ಮಂಡ್ಯ ನಗರದಿಂದ ಸುಮಾರು ಹತ್ತು ಕಿಲೋಮೀಟರ್ ದೂರದಲ್ಲಿರುವ ವಿಶ್ವೇಶ್ವರಯ್ಯ ಕೆನಾಲ್ ಫಾರಂ(ವಿ.ಸಿ.ಫಾರಂ)ನಲ್ಲಿ ಶೈಕ್ಷಣಿಕ ಚಟುವಟಿಕೆಗಳು ೧೯೯೧ರಲ್ಲಿ ಪ್ರಾರಂಭವಾಯಿತು. ಈ ಸಂಸ್ಥೆಯಲ್ಲಿ ಉತ್ತಮವಾಗಿ ಯೋಜನೆಗೊಂಡಿರುವ ಕಾಲೇಜು ಕಟ್ಟಡ, ಹುಡುಗರ ಹಾಗೂ ಬೋಧಕ ಸಿಬ್ಬಂದಿಯ ಹಾಸ್ಟಲ್‌ಗಳು ಹಾಗೂ ಕ್ರೀಡಾಂಗಣಗಳಿವೆ. ಕೃಷಿ ವಿದ್ಯಾರ್ಥಿಗಳು ಪ್ರಾಯೋಗಿಕವಾಗಿ ತಳಿಗಳ ಬೆಳೆಗಳನ್ನು ತೆಗೆಯಲು ಅನುಕೂಲವಾಗುವಂತೆ ಹೊಲ ಗದ್ದೆಗಳನ್ನು ಮಾಡಲಾಗಿದೆ. ರೂರಲ್ ಅಗ್ರಿಕಲ್ಚರಲ್ ವರ್ಕ್ಸ್ ಎಕ್ಸ್‌ಪೀರಿಯನ್ಸ್ ಯೋಜನೆಯಡಿ ವಿದ್ಯಾರ್ಥಿಗಳು ಹಳ್ಳಿಗಳಿಗೆ ಹೋಗಿ ಅಲ್ಲಿನ ರೈತರೊಡಗೂಡಿ ಅಲ್ಲಿಯೇ ವಾಸ್ತವ್ಯ ಹೂಡಿ, ಕೃಷಿ ವಿಧಾನಗಳ ಸಮಸ್ಯೆಗಳನ್ನು ಖುದ್ದಾಗಿ ಅರಿತು, ತಮ್ಮ ಕಲಿಕೆಯನ್ನು ಉತ್ತಮಪಡಿಸಿಕೊಳ್ಳಲು ಅನುವು ಮಾಡಿಕೊಡಲಾಗಿದೆ. ಅಭಿವೃದ್ಧಿಶೀಲ ಕೃಷಿ ಇಲಾಖೆಗಳ ಅಧಿಕಾರಿಗಳಿಗಾಗಿ ಇಲ್ಲಿ ಹಲವಾರು ತರಬೇತಿ ಶಿಬಿರಗಳೂ ನಡೆಸಲ್ಪಟ್ಟಿವೆ. ರೈತರು ಹಾಗೂ ಕೃಷಿ ವಿದ್ಯಾರ್ಥಿಗಳ ಹಲವಾರು ಶೈಕ್ಷಣಿಕ ಚಟುವಟಿಕೆಗಳಿಗಾಗಿ ಪ್ರಮುಖ ಖಾದ್ಯ ಬೆಳೆಗಳ ಬಗ್ಗೆ ಸಂಶೋಧನಾತ್ಮಕ ಯೋಜನೆಗಳನ್ನು ಸಂಸ್ಥೆ ಹಮ್ಮಿಕೊಂಡಿದೆ.

ಸಂಸ್ಥೆಯಲ್ಲಿ ೨೭ ಮಂದಿ ಪರಿಣತ ಪ್ರಾಧ್ಯಾಪಕರು ಹಾಗೂ ಉಪಪ್ರಾಧ್ಯಾಪಕರು ಬೋಧಕರಾಗಿದ್ದು, ಅಗ್ರೋನಮಿ, (ಬೇಸಾಯ ಶಾಸ್ತ್ರ) ಅಗ್ರಿಕಲ್ಚರಲ್ ಎಂಟಮಾಲಜಿ (ಕೀಟಶಾಸ್ತ್ರ), ಪ್ಲಾಂಟ್ ಪ್ಯಾಥಾಲಜಿ (ಸಸ್ಯರೋಗಶಾಸ್ತ್ರ), ಅಗ್ರಿಕಲ್ಚರಲ್ ಮೈಕ್ರೊಬಯಾಲಜಿ (ಕೃಷಿ ಸೂಕ್ಷ್ಮಾಣು ಜೀವಿಶಾಸ್ತ್ರ), ಕ್ರಾಪ್ ಫಿಜಿಯಾಲಜಿ (ಸಸ್ಯ ಶರೀರ ಕ್ರಿಯಾಶಾಸ್ತ್ರ), ಅಗ್ರಿಕಲ್ಚರಲ್ ಇಂಜನೀಯರಿಂಗ್ (ಕೃಷಿ ತಾಂತ್ರಿಕತೆ), ಹಾರ್ಟಿಕಲ್ಚರ್ (ತೋಟಗಾರಿಕೆ), ಅಗ್ರಿಕಲ್ಚರಲ್ ಎಕನಾಮಿಕ್ಸ್ (ಕೃಷಿ ಅರ್ಥಶಾಸ್ತ್ರ), ಜೆನೆಟಿಕ್ಸ್ ಹಾಗೂ ಪ್ಲಾಂಟ್ ಬ್ರೀಡಿಂಗ್ (ಅನುವಂಶೀಯತೆ ಮತ್ತು ಸಸ್ಯತಳಿ ಅಭಿವೃದ್ಧಿಶಾಸ್ತ್ರ) ವಿಷಯಗಳಲ್ಲಿ ತರಬೇತಿ ನೀಡಲಾಗುತ್ತದೆ. ವರ್ಷಂಪ್ರತಿ ೫೦ ಮಂದಿಗೆ ಈ ಸಂಸ್ಥೆಯಲ್ಲಿ ಪ್ರವೇಶಾವಕಾಶವಿದ್ದು, ಈವರೆಗೆ ಒಟ್ಟು ೧೭೨ ಮಂದಿ ಪದವೀಧರರಾಗಿರುತ್ತಾರೆ. ಇವರಲ್ಲಿ ನಾಲ್ಕು ಮಂದಿ ಪ್ರತಿಭಾವಂತರು ಚಿನ್ನದ ಪದಕವನ್ನು ಗಳಿಸಿರುತ್ತಾರೆ. ನಾಲ್ಕುವರ್ಷಗಳ ಅವಧಿಯ ತರಬೇತಿಯಲ್ಲಿ ಮಾರ್ಚ್ ೨೦೦೦ ದ ವೇಳೆಗೆ ಒಟ್ಟು ೨೦೪ ಮಂದಿ ತರಬೇತಿ ಪಡೆಯುತ್ತಿದ್ದರು.

## ತಾಂತ್ರಿಕ ಶಿಕ್ಷಣ

ತಾಂತ್ರಿಕ ಶಿಕ್ಷಣ ಮೂರು ವಿವಿಧ ಸಂಸ್ಥೆಗಳಲ್ಲಿ ನೀಡಲ್ಪಡುತ್ತದೆ. ಎರಡನೇ ಪಿ.ಯು.ಸಿ. ತರಗತಿಯಲ್ಲಿ ಕನಿಷ್ಠ ಶೇ.೫೦ರಷ್ಟು ಅಂಕಗಳನ್ನು ಪಡೆದು ಅಭ್ಯರ್ಥಿಗಳು ಸಾಮಾನ್ಯ ಪ್ರವೇಶ ಪರೀಕ್ಷೆ ಪಾಸು ಮಾಡಿ ತಮ್ಮ ಇಚ್ಛೆಗನುಸಾರ ವಿಷಯಗಳನ್ನು ಆರಿಸಿಕೊಂಡು, ರಾಜ್ಯದ ವಿವಿಧ ಇಂಜನೀಯರಿಂಗ್ ಕಾಲೇಜುಗಳಿಗೆ ಸೇರಿ ನಾಲ್ಕು ವರ್ಷಗಳ (೮ ಸೆಮಿಸ್ಟರುಗಳ) ನಂತರ ಇಂಜನೀಯರಿಂಗ್ ಪದವಿ ಪಡೆಯಬಹುದು. ಸರ್ಕಾರಿ ಅಥವಾ ಖಾಸಗಿ ಪಾಲಿಟೆಕ್ನಿಕ್‌ಗಳಿಗೆ ಸೇರಿ ವಿವಿಧ ಇಂಜನೀಯರಿಂಗ್ ವಿಷಯಗಳಲ್ಲಿ ತಮ್ಮ ತಮ್ಮ ವೈಯಕ್ತಿಕ ಆಸಕ್ತಿಯನ್ನವಲಂಬಿಸಿ ಮೂರು ವರ್ಷದ ಡಿಪ್ಲೋಮೊ ಪದವಿ ಪಡೆಯಬಹುದು ಅಥವಾ ಎಸ್.ಎಸ್.ಎಲ್.ಸಿ. ಉತ್ತೀರ್ಣರಾದ ಮಕ್ಕಳು ಕೈಗಾರಿಕಾ ಶಿಕ್ಷಣ ಸಂಸ್ಥೆ (ಐ.ಟಿ.ಐ.) ಗಳಿಗೆ ಸೇರಿ, ಮೂರು ವರ್ಷದ ತಾಂತ್ರಿಕ ಶಿಕ್ಷಣ ಹೊಂದಿ, ಡಿಪ್ಲೋಮಾ ಪದವಿ ಪಡೆಯಬಹುದು. ಮೊದಲೆರಡು ರೀತಿಯ ಸಂಸ್ಥೆಗಳು ತಾಂತ್ರಿಕ ಶಿಕ್ಷಣ ಮಂಡಳಿಯ ಆಡಳಿತಕ್ಕೊಳಪಟ್ಟರೆ, ಮೂರನೇ ಮಾದರಿ ಸಂಸ್ಥೆಗಳು ಕೈಗಾರಿಕಾ ಹಾಗೂ ವಾಣಿಜ್ಯ ಇಲಾಖೆಯ ಆಡಳಿತದಲ್ಲಿ ಕಾರ್ಯನಿರ್ವಹಿಸುತ್ತವೆ.

ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಏಕೈಕ ತಾಂತ್ರಿಕ ಶಿಕ್ಷಣ ಮಹಾ ವಿದ್ಯಾಲಯವಾದ ಪಿ.ಇ.ಎಸ್. ಇಂಜನೀಯರಿಂಗ್ ಕಾಲೇಜು ಮಂಡ್ಯದಲ್ಲಿ ೧೯೬೨ರಲ್ಲಿ ಮೆಕ್ಯಾನಿಕಲ್ ಹಾಗೂ ಎಲೆಕ್ಟ್ರಿಕಲ್ ವಿಭಾಗಗಳೊಂದಿಗೆ ೧೮೦ ವಿದ್ಯಾರ್ಥಿಗಳನ್ನು ಹೊಂದಿ ಪ್ರಾರಂಭವಾಯಿತು. ೧೯೬೮ರಲ್ಲಿ ಈ ಸಂಸ್ಥೆ ಸರ್ಕಾರಿ ಅನುದಾನ ಪಡೆಯಿತು. ೧೯೭೦ರಲ್ಲಿ ಎಲೆಕ್ಟ್ರಾನಿಕ್ಸ್, ೧೯೮೦ರಲ್ಲಿ ಆಟೋಮೊಬೈಲ್ ಮತ್ತು ಕೈಗಾರಿಕೋತ್ಪತ್ತಿ, ೧೯೮೩ರಲ್ಲಿ ಕಂಪ್ಯೂಟರ್ ಸೈನ್ಸ್, ೧೯೮೭ರಲ್ಲಿ ಪರಿಸರ ತಂತ್ರಜ್ಞಾನ ಹಾಗೂ ೨೦೦೦ದಲ್ಲಿ ಇನ್‌ಫರ್ಮೇಷನ್ ಸೈನ್ಸ್ ವಿಭಾಗಗಳು ಸೇರ್ಪಡೆಯಾದವು. ಪ್ರಸ್ತುತ ವರ್ಷಂಪ್ರತಿ ೫೦೦ ಮಂದಿ ವಿದ್ಯಾರ್ಥಿಗಳಿಗೆ ಸಂಸ್ಥೆಯಲ್ಲಿ ಪ್ರವೇಶಾವಕಾಶವಿದೆ. ೧೯೯೯-೨೦೦೦ ವರ್ಷದವರೆಗೆ ಸಂಸ್ಥೆಯಿಂದ ೫,೧೩೨ ವಿದ್ಯಾರ್ಥಿ-ವಿದ್ಯಾರ್ಥಿನಿಯರು ಇಂಜನೀಯರಿಂಗ್ ಪದವಿ ಪಡೆದಿರುತ್ತಾರೆ.

೧೯೮೭ರಲ್ಲಿ ಇಲ್ಲಿ ತಂತ್ರಜ್ಞಾನ ವಿಷಯದಲ್ಲಿ ಸ್ನಾತಕೋತ್ತರ ಪದವಿ (ಎಂ.ಟೆಕ್) ಪ್ರಾರಂಭವಾಯಿತು. ಇದಕ್ಕೆ ಕೇಂದ್ರ ಸರ್ಕಾರದ ಮಾನವ ಸಂಪನ್ಮೂಲ ಇಲಾಖೆಯಿಂದ ಶೇ.೧೦೦ ರಷ್ಟು ಅನುದಾನ ದೊರೆತಿದೆ. ೧೯೯೨ರಲ್ಲಿ ಇಲ್ಲಿ ಎಂ.ಸಿ.ಎ. ಹಾಗೂ ೧೯೯೯ರಲ್ಲಿ ಕಂಪ್ಯೂಟರ್ ಇಂಟೆಗ್ರೇಟೆಡ್ ಮ್ಯಾನ್ಯುಫ್ಯಾಕ್ಚರಿಂಗ್ ಸ್ನಾತಕೋತ್ತರ ಪದವಿಯು ಪ್ರಾರಂಭವಾಗಿ, ಒಂದೊಂದರಲ್ಲಿಯೂ ತಲಾ ೧೩ ಮಂದಿಗೆ ಪ್ರವೇಶಾವಕಾಶವಿದೆ. ೧೯೯೯ರವರೆಗೆ ಇಲ್ಲಿಂದ ೨೨೧ ಮಂದಿ ಸ್ನಾತಕೋತ್ತರ ಪದವಿ ಪಡೆದಿರುತ್ತಾರೆ. ಸಂಸ್ಥೆಯ ವತಿಯಿಂದ ಮೂರು ಹಾಸ್ಟೆಲುಗಳು ನಡೆಸಲ್ಪಡುತ್ತಿದ್ದು ಇವುಗಳಲ್ಲಿ ಒಂದು ಇಂಜನೀಯರಿಂಗ್ ವಿದ್ಯಾರ್ಥಿನಿಯರಿಗೆ ಮಾತ್ರ ಪ್ರತ್ಯೇಕವಾಗಿದ್ದು, ಉಳಿದ ಎರಡು ವಿದ್ಯಾರ್ಥಿಗಳ ಹಾಸ್ಟೆಲುಗಳಾಗಿವೆ.

## ಪಾಲಿಟೆಕ್ನಿಕ್‌ಗಳು

ಜಿಲ್ಲೆಯ ಪ್ರಥಮ ಪಾಲಿಟೆಕ್ನಿಕ್ ಸಂಸ್ಥೆ ಕೃಷ್ಣರಾಜಪೇಟೆಯಲ್ಲಿ ೧೯೬೦ರಲ್ಲಿ ಸರ್ಕಾರದಿಂದ ಪ್ರಾರಂಭಿಸಲ್ಪಟ್ಟಿತು. ತದನಂತರ ಖಾಸಗಿಯಾಗಿ ೧೯೮೯ರಲ್ಲಿ ಕೆ.ಎಂ.ದೊಡ್ಡಿಯಲ್ಲಿ ಬಿ.ಇ.ಟಿ. ಪಾಲಿಟೆಕ್ನಿಕ್ ಹಾಗೂ ೧೯೯೭ರಲ್ಲಿ ಮೇಲುಕೋಟೆಯಲ್ಲಿ ಎಸ್.ಟಿ.ಎಫ್. ಪಾಲಿಟೆಕ್ನಿಕ್‌ಗಳು ಪ್ರಾರಂಭವಾದವು.

**ಐ.ಟಿ.ಐ.ಗಳು:** ಜಿಲ್ಲೆಯಲ್ಲಿ ಐದು ಸರ್ಕಾರಿ, ಎಂಟು ಖಾಸಗಿ ಐ.ಟಿ.ಐ.ಗಳು ಕಾರ್ಯನಿರ್ವಹಿಸುತ್ತಿದ್ದು, ಅವುಗಳ ಪಟ್ಟಿಯಲ್ಲಿ ಈ ಮುಂದೆ ನೀಡಲಾಗಿದೆ.

ಸರ್ಕಾರಿ ಐ.ಟಿ.ಐ.ಗಳು– ಮಂಡ್ಯ, ಮದ್ದೂರು, ಮಳವಳ್ಳಿ, ಪಾಂಡವಪುರ ಹಾಗೂ ಕೆ.ಎಂ.ದೊಡ್ಡಿ; ಖಾಸಗಿ ಐ.ಟಿ.ಐ.ಗಳು– ಆದಿಚುಂಚನಗಿರಿ ಐ.ಟಿ.ಐ., ಮೇಲುಕೋಟೆ, ಶಿವಾನಂದ ಸ್ವಾಮಿಜಿ ಐ.ಟಿ.ಐ, ಮೇಲುಕೋಟೆ, ನಾಲ್ವಡಿ ಕೃಷ್ಣರಾಜ ಒಡೆಯರ್ ಐ.ಟಿ.ಐ. ಮಂಡ್ಯ, ತಾವರೆಗೆರೆ ಐ.ಟಿ.ಐ. ಮಂಡ್ಯ, ಶ್ರೀರಂಗನಾಥ ಐ.ಟಿ.ಐ. ಬಾಬುರಾಯನಕೊಪ್ಪಲು, ಬಿ.ಎಸ್.ಎಸ್.ಐ.ಟಿ.ಐ. ಮಂಡ್ಯ, ಗಣೇಶ್ ಐ.ಟಿ.ಐ ಮಳವಳ್ಳಿ ಹಾಗೂ ಜ್ಞಾನಗಂಗಾ ಎಜುಕೇಷನ್ ಸೊಸೈಟಿ ಐ.ಟಿ.ಐ ಶಿವಪುರ.

ಮೇಲ್ಕಂಡ ಸಂಸ್ಥೆಗಳಲ್ಲಿ ಫಿಟ್ಟರ್, ಎಲೆಕ್ಟ್ರಾನಿಕ್, ಮೆಕ್ಯಾನಿಕ್, ಟೂಲ್ ಮತ್ತು ಡೈ ಮೇಕರ್, ಎಲೆಕ್ಟ್ರಿಷಿಯನ್, ಟರ್ನರ್, ಮುಂತಾದ ಹಲವಾರು ವಿಷಯಗಳಲ್ಲಿ ಡಿಪ್ಲೊಮಾ ಹೊಂದಿದ ವಿದ್ಯಾರ್ಥಿಗಳು ಉದ್ಯೋಗಕ್ಕಾಗಿ ವಿವಿಧ ಸಂಸ್ಥೆಗಳಿಗೆ ಸೇರಬಹುದಾಗಿದೆ.

## ಉನ್ನತ ಶಿಕ್ಷಣ

ಜಿಲ್ಲೆಯಲ್ಲಿ ಸ್ವಾತಂತ್ರ್ಯ ನಂತರ ಶಿಕ್ಷಣ ಪ್ರಗತಿ ಚುರುಕುಗೊಂಡಿತು. ಸರ್ಕಾರ, ಪುರಸಭೆ ಹಾಗೂ ತಾಲೂಕು ಮಂಡಳಿಗಳು ಪ್ರಾರಂಭಿಸಿದ ಪ್ರೌಢಶಾಲೆಗಳಿಂದ ಹೊರಬಿದ್ದ ವಿದ್ಯಾರ್ಥಿಗಳು ತಮ್ಮ ಉನ್ನತ ವ್ಯಾಸಂಗಕ್ಕಾಗಿ ನಗರ ಪ್ರದೇಶಗಳಾದ ಮೈಸೂರು, ಬೆಂಗಳೂರು ಹಾಗೂ ಹಾಸನಗಳಿಗೆ ಹೋಗಬೇಕಾದ ಅನಿವಾರ್ಯತೆ ಇದ್ದಿತು. ಅವರ ಉನ್ನತ ವ್ಯಾಸಂಗ ಸುಗಮಗೊಳಿಸಲು ಸರ್ಕಾರ ೧೯೪೮ರಲ್ಲಿ ಮಂಡ್ಯದಲ್ಲಿ ಇಂಟರ್‌ಮೀಡಿಯೇಟ್ ಕಾಲೇಜನ್ನು ಸ್ಥಾಪಿಸಿತು. ಆರಂಭದಲ್ಲಿ ವಿಜ್ಞಾನ ವಿಭಾಗ ಮಾತ್ರ ಹೊಂದಿದ್ದ ಈ ಸಂಸ್ಥೆಯಲ್ಲಿ ೮೪ ವಿದ್ಯಾರ್ಥಿಗಳಿದ್ದರು. ೧೯೫೩ರಲ್ಲಿ ಇಲ್ಲಿ ಕಲಾ ವಿಭಾಗ ಪ್ರಾರಂಭವಾದಾಗ, ವಿದ್ಯಾರ್ಥಿಗಳ ಸಂಖ್ಯೆ ಗಣನೀಯವಾಗಿ ಹೆಚ್ಚಿತು. ಇಂಟರ್ ಮೀಡಿಯೇಟ್‌ಗೆ ಬದಲಾಗಿ ಒಂದು ವರ್ಷದ ಪಿ.ಯು.ಸಿ. ಪ್ರಾರಂಭವಾದಾಗ, ಇಲ್ಲಿ ಭೌತಶಾಸ್ತ್ರ, ರಸಾಯನಶಾಸ್ತ್ರ ಹಾಗೂ ಜೀವಶಾಸ್ತ್ರ (ಪಿ.ಸಿ.ಬಿ.)ಗಳನ್ನು ಬೋಧನಾ ವಿಷಯಗಳಾಗಿ ಸೇರಿಸಲಾಯಿತು. ಇಲ್ಲಿ ೧೯೬೧ರಲ್ಲಿ ವಿದ್ಯಾರ್ಥಿಗಳ ಸಂಖ್ಯೆ ೨೫೫ ಆಗಿದ್ದಿತು. ಪಿ.ಯು.ಸಿ. ಶಿಕ್ಷಣದ ನಂತರದ ಹಂತಕ್ಕೆ ಹೋಗಲು ಪದವಿ ಶಿಕ್ಷಣ ಕಾಲೇಜಿನ ಅವಶ್ಯಕತೆ ಕಂಡಾಗ, ೧೯೬೨ರಲ್ಲಿ ಇದೇ ಕಾಲೇಜನ್ನು ಪ್ರಥಮ ದರ್ಜೆ ಕಾಲೇಜಾಗಿ ಮಾರ್ಪಡಿಸಲಾಯಿತು. ೧೯೬೬ರ ವೇಳೆಗೆ ಈ ಸಂಸ್ಥೆಯಲ್ಲಿ ೪೯೪ ವಿದ್ಯಾರ್ಥಿಗಳು ಪಿ.ಯು.ಸಿ.ಮಟ್ಟದಲ್ಲೂ, ೩೬೦ ಮಂದಿ ಪದವಿ ತರಗತಿಗಳಲ್ಲೂ ವ್ಯಾಸಂಗ ಮಾಡುತ್ತಿದ್ದರು. ೧೯೭೨ರಲ್ಲಿ ವಿದ್ಯಾರ್ಥಿನಿಯರ ಕಾಲೇಜು ವಿಭಜನೆಗೊಂಡು, ಸಂಸ್ಥೆಯಲ್ಲಿ ೨೦೦೦–೨೦೦೧ನೇ ಶೈಕ್ಷಣಿಕ ವರ್ಷಕ್ಕೆ ಒಟ್ಟು ವಿದ್ಯಾರ್ಥಿಗಳ ಸಂಖ್ಯೆ ೭೬೦ ಮತ್ತು ಬೋಧಕ ಸಿಬ್ಬಂದಿ ಸಂಖ್ಯೆ ೩೮ ಆಗಿದ್ದಿತು. ಇದೇ ಜಿಲ್ಲೆಯವರಾದ ಶತಾಯುಷಿ ಎ. ಎನ್. ಮೂರ್ತಿರಾಯರು ಸೇರಿದಂತೆ ಬಿ.ಸಿ. ವೆಸ್ಲಿ, ನಂಜುಂಡಯ್ಯ ಮುಂತಾದ ಹಲವಾರು ಗಣ್ಯರು ಈ ಸಂಸ್ಥೆಯ ಪ್ರಾಚಾರ್ಯರಾಗಿ ಸೇವೆ ಸಲ್ಲಿಸಿದ್ದಾರೆ.

ಇದೇ ಕಾಲಕ್ಕೆ ಜಿಲ್ಲೆಯ ಹಲವೆಡೆ ಪ್ರೌಢಶಾಲೆಗಳು ಪ್ರಾರಂಭವಾಗಿ, ಅವುಗಳಲ್ಲಿ ಹನ್ನೊಂದನೇ ತರಗತಿ (ಪಿ.ಯು.ಸಿ.ಗೆ ಸಮ) ತೆರೆಯಲ್ಪಟ್ಟ ಪರಿಣಾಮವಾಗಿ, ಪದವಿ ಕಾಲೇಜುಗಳ ಅವಶ್ಯಕತೆ ತೀವ್ರವಾಯಿತು.ಇದರಿಂದಾಗಿ ೧೯೬೭ರಲ್ಲಿ ಪೀಪಲ್ಸ್ ಎಜುಕೇಷನ್ ಸೊಸೈಟಿ (ಪಿಇಎಸ್) ಸಂಸ್ಥೆಯವರು ಮಂಡ್ಯದಲ್ಲಿ ಪ್ರಥಮ ಖಾಸಗಿ ಪದವಿ ಕಾಲೇಜನ್ನು ಸ್ಥಾಪಿಸಿದರು. ಗ್ರಾಮಾಂತರ ಪ್ರದೇಶಗಳಲ್ಲಿ ನೂತನ ಪ್ರೌಢಶಾಲೆಗಳು ಪ್ರಾರಂಭವಾದಂತೆ, ಉನ್ನತ ಶಿಕ್ಷಣ ನೀಡುವ ಧ್ಯೇಯದಿಂದ ೧೯೭೧ರಲ್ಲಿ ಮಳವಳ್ಳಿಯಲ್ಲಿ ಶಾಂತಿ ವಿಜ್ಞಾನ ಮತ್ತು ಕಲಾ ಪ್ರಥಮ ದರ್ಜೆ ಕಾಲೇಜು ಮತ್ತು ಕಾಳಮುದ್ದನ ದೊಡ್ಡಿಯಲ್ಲಿ ಭಾರತೀ ಪ್ರಥಮ ದರ್ಜೆ ಕಾಲೇಜುಗಳು ಪ್ರಾರಂಭಗೊಂಡವು. ಹೆಣ್ಣುಮಕ್ಕಳ ಶಿಕ್ಷಣವು ಕ್ಷಿಪ್ರ ಪ್ರಗತಿ ಹೊಂದಿ ಅಂದಿಗೆ ಅಸ್ತಿತ್ವದಲ್ಲಿದ್ದ ಸುಮಾರು ೭೦ ಪ್ರೌಢಶಾಲೆಗಳಿಂದ ಹೊರಬರುತ್ತಿದ್ದ ಮಕ್ಕಳಲ್ಲಿ ವಿದ್ಯಾರ್ಥಿನಿಯರ ಸಂಖ್ಯೆ ಅಧಿಕಗೊಂಡಿದುದರಿಂದ, ೧೯೭೨ರಲ್ಲಿ ಮಂಡ್ಯ ಸರ್ಕಾರಿ ಪ್ರಥಮ ದರ್ಜೆ

ಕಾಲೇಜನ್ನು ವಿಭಾಗಿಸಿ, ಪ್ರತ್ಯೇಕ ಮಹಿಳಾ ಕಾಲೇಜನ್ನು ಪ್ರಾರಂಭಿಸಲಾಯಿತು. ೨೦೦೦–೨೦೦೧ನೇ ಶೈಕ್ಷಣಿಕ ಸಾಲಿನಲ್ಲಿ ಜಿಲ್ಲೆಯಲ್ಲಿ ಒಟ್ಟು ೨೨ ಪ್ರಥಮದರ್ಜೆ ಕಾಲೇಜುಗಳಿದ್ದವು. ಇವುಗಳಲ್ಲಿ ಸರ್ಕಾರಿ ಆರು, ಖಾಸಗಿ ಅನುದಾನಿತ ಏಳು ಹಾಗೂ ಅನುದಾನ ರಹಿತ ಒಂಬತ್ತು ಸಂಸ್ಥೆಗಳು ಸೇರಿದ್ದವು. ಆರು ಸರ್ಕಾರಿ ಕಾಲೇಜುಗಳಲ್ಲಿ ಒಟ್ಟು ೩೬೫೬ ಹಾಗೂ ಐದು ಖಾಸಗಿ ಅನುದಾನಿತ ಕಾಲೇಜುಗಳಲ್ಲಿ ಒಟ್ಟು ೬,೪೮೭ ಮಂದಿ ವ್ಯಾಸಂಗ ಮಾಡುತ್ತಿದ್ದರು. ೨೦೦೧–೦೨ನೇ ಸಾಲಿಗೆ ಜಿಲ್ಲೆಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಸಂಖ್ಯೆಯಲ್ಲಿ ಯಾವುದೇ ಬದಲಾವಣೆ ಇಲ್ಲದೆ, ಸರ್ಕಾರಿ ಸಂಸ್ಥೆಗಳಲ್ಲಿ ಒಟ್ಟು ೨,೬೯೫ ಮಂದಿ, ಅನುದಾನಿತ ಕಾಲೇಜುಗಳಲ್ಲಿ ಒಟ್ಟು ೪,೫೩೨ ಮಂದಿ ವ್ಯಾಸಂಗ ಮಾಡುತ್ತಿದ್ದರು.

## ವೈದ್ಯಕೀಯ ಶಿಕ್ಷಣ

ಜಿಲ್ಲೆಯ ಏಕೈಕ ವೈದ್ಯಕೀಯ ಮಹಾವಿದ್ಯಾಲಯವು ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್‌ನ ವತಿಯಿಂದ ಬೆಳ್ಳೂರಿನಲ್ಲಿ ೧೯೮೬ರಲ್ಲಿ ಸ್ಥಾಪನೆಗೊಂಡಿತು. ಎಲ್ಲಾ ವೈದ್ಯಕೀಯ ವಿಷಯಗಳ ವಿಭಾಗಗಳನ್ನು ಹೊಂದಿರುವ ಈ ಸಂಸ್ಥೆ ಸಕಲ ಆಧುನಿಕ ಸಲಕರಣೆಗಳನ್ನು ಉಳ್ಳದ್ದಾಗಿದೆ. ಇಲ್ಲಿನ ಗ್ರಂಥಾಲಯದಲ್ಲಿ ೧೦,೦೦೦ಕ್ಕೂ ಹೆಚ್ಚಿನ ಮಹತ್ವಪೂರ್ಣ ವೈದ್ಯಕೀಯ ಗ್ರಂಥಗಳಿದ್ದು, ಇಲ್ಲಿಗೆ ೧೨೦ಕ್ಕೂ ಹೆಚ್ಚು ನಿಯತ ಕಾಲಿಕೆಗಳನ್ನು ತರಿಸಲಾಗುತ್ತದೆ. ವಿದ್ಯಾರ್ಥಿಗಳಿಗೆ ಹಾಗೂ ವಿದ್ಯಾರ್ಥಿನಿಯರಿಗೆ ಪ್ರತ್ಯೇಕ ಹಾಸ್ಟಲ್ ವ್ಯವಸ್ಥೆ ಇದೆ. ಸಂಸ್ಥೆಗೆ ಹೊಂದಿಕೊಂಡಿರುವ ಆದಿಚುಂಚನಗಿರಿ ಆಸ್ಪತ್ರೆ ಹಾಗೂ ಸಂಶೋಧನಾ ಕೇಂದ್ರದಲ್ಲಿ ವೈದ್ಯಕೀಯ ವಿದ್ಯಾರ್ಥಿಗಳು ತಮ್ಮ ಪ್ರಾಯೋಗಿಕ ಶಿಕ್ಷಣ ಮುಂದುವರೆಸುತ್ತಾರೆ. ಈ ಸಂಸ್ಥೆಯಲ್ಲಿ ನಾಲ್ಕೂವರೆ ವರ್ಷದ ಎಂ.ಬಿ.ಬಿ.ಎಸ್., ಮೂರು ವರ್ಷಗಳ ಅವಧಿಯ ವಿವಿಧ ವಿಷಯಗಳ ಸ್ನಾತಕೋತ್ತರ ಹಾಗೂ ಎರಡು ವರ್ಷಗಳ ಅವಧಿಯ ಡಿಪ್ಲೋಮಾ ತರಗತಿಗಳಲ್ಲಿ ೨೦೦೦–೨೦೦೧ನೇ ಸಾಲಿಗೆ ಒಟ್ಟು ೮೪೪ ವಿದ್ಯಾರ್ಥಿ/ವಿದ್ಯಾರ್ಥಿನಿಯರೂ ೨೨೪ ಮಂದಿ ಬೋಧಕ ಸಿಬ್ಬಂದಿಯೂ ಕಾರ್ಯನಿರ್ವಹಿಸುತ್ತಿದ್ದರು.

**ಆದಿಚುಂಚನಗಿರಿ ನರ್ಸಿಂಗ್ ಶಾಲೆ:** ಇದು ೧೯೯೦ರಲ್ಲಿ ಬಾಲಗಂಗಾಧರನಾಥ ನಗರದಲ್ಲಿ ಪ್ರಾರಂಭವಾಯಿತು. ವರ್ಷಂಪ್ರತಿ ಬಿ.ಎಸ್.ಎಂ. ತರಗತಿಗೆ ೮೦ ಮಂದಿಗೆ ಪ್ರವೇಶಾವಕಾಶವಿದೆ. ಈ ಸಂಸ್ಥೆ ೨೦೦೦–೦೧ನೇ ಸಾಲಿಗೆ ೨೪೦ ವಿದ್ಯಾರ್ಥಿ/ವಿದ್ಯಾರ್ಥಿನಿಯರನ್ನೂ, ಎಂಟು ಮಂದಿ ಬೋಧಕ ಸಿಬ್ಬಂದಿಯನ್ನೂ ಹೊಂದಿತ್ತು.

**ಆದಿಚುಂಚನಗಿರಿ ನರ್ಸಿಂಗ್ ಕಾಲೇಜು:** ಬಾಲಗಂಗಾಧರನಾಥ ನಗರದಲ್ಲಿ ೧೯೯೫ರಲ್ಲಿ ಪ್ರಾರಂಭವಾಗಿದ್ದು, ಇಲ್ಲಿ ನಾಲ್ಕು ವರ್ಷದ ಬಿ.ಎಸ್ಸಿ. ನರ್ಸಿಂಗ್ ಶಿಕ್ಷಣ ನೀಡಲಾಗುತ್ತದೆ. ೨೦೦೦–೨೦೦೧ನೇ ಸಾಲಿಗೆ ಇಲ್ಲಿ ೧೫೧ ಮಂದಿ ವಿದ್ಯಾರ್ಥಿ/ವಿದ್ಯಾರ್ಥಿನಿಯರು ಹಾಗೂ ಎಂಟು ಮಂದಿ ಬೋಧಕ ಸಿಬ್ಬಂದಿ ಕಾರ್ಯನಿರ್ವಹಿಸುತ್ತಿದ್ದರು.

**ಆದಿಚುಂಚನಗಿರಿ ಫಾರ್ಮಸಿ ಕಾಲೇಜು :** ಬಾಲಗಂಗಾಧರನಾಥ ನಗರದಲ್ಲಿ ೧೯೯೭ರಲ್ಲಿ ಪ್ರಾರಂಭವಾಗಿದ್ದು, ಡಿ.ಫಾರ್ಮ ಹಾಗೂ ಬಿ.ಫಾರ್ಮ ಶಿಕ್ಷಣ ನೀಡುವ ಸಂಸ್ಥೆಯಾಗಿದೆ. ೨೦೦೦–೦೧ನೇ ಸಾಲಿಗೆ ಡಿ. ಫಾರ್ಮದಲ್ಲಿ ೬೦ ಹಾಗೂ ಬಿ. ಫಾರ್ಮದಲ್ಲಿ ೨೫ ಮಂದಿ ವ್ಯಾಸಂಗ ಮಾಡುತ್ತಿದ್ದು, ಒಂಬತ್ತು ಮಂದಿ ಬೋಧಕ ಸಿಬ್ಬಂದಿ ಇದ್ದರು.

## ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆ

ಬೆಂಗಳೂರಿನಲ್ಲಿ ೧೯೦೯ರಲ್ಲಿ ಪ್ರಾರಂಭವಾದ ಸ್ಕೌಟ್ಸ್ ದಳದ ಮೂಲಕ ಕರ್ನಾಟಕದಲ್ಲಿ ಪ್ರಥಮವಾಗಿ ಸ್ಕೌಟಿಂಗ್ ಚಳವಳಿ ಪ್ರಾರಂಭವಾಯಿತು. ೧೯೧೬ ರಿಂದ ೧೯೧೮ರ ಅವಧಿಯಲ್ಲಿ ಮೈಸೂರು ಸಂಸ್ಥಾನದಲ್ಲಿ ಶ್ರೀಮನ್ಮಹಾರಾಜರ ಪೋಷಣೆಯಿಂದ ಯುವರಾಜರ ನಾಯಕತ್ವದಲ್ಲಿ 'ಬಾಯ್ ಸ್ಕೌಟ್ಸ್ ಆಫ್ ಮೈಸೂರ್' ಮತ್ತು ಶ್ರೀಮನ್ಮಹಾರಾಣಿಯವರ

ಪೋಷಣೆಯಿಂದ ಯುವರಾಣಿಯವರ ನಾಯಕತ್ವದಲ್ಲಿ 'ಗರ್ಲ್ ಗೈಡ್ಸ್ ಆಫ್ ಮೈಸೂರು' ಸಂಸ್ಥೆಗಳು ವ್ಯವಸ್ಥಿತವಾಗಿ ಪ್ರಾರಂಭಗೊಂಡವು. ಬೆಂಗಳೂರಿನಲ್ಲಿ ೧೯೫೦ರಲ್ಲಿ ಸ್ಕೌಟ್ಸ್ ಸಭೆ ನಡೆದ ಬಳಿಕ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆ ಅಸ್ತಿತ್ವಕ್ಕೆ ಬಂದು, ಹಿಂದಿನ ಬಾಯ್ ಸ್ಕೌಟ್ಸ್ ಹಾಗೂ ಗರ್ಲ್ಸ್ ಗೈಡ್ಸ್ ಇದರಲ್ಲಿಯೇ ವಿಲೀನಗೊಂಡವು.

ಸ್ಕೌಟ್ ಚಟುವಟಿಕೆಗಳಲ್ಲಿ ಮಂಡ್ಯಜಿಲ್ಲೆ ರಾಜ್ಯದ ಉತ್ಸಾಹಿ ಜಿಲ್ಲೆಗಳಲ್ಲಿ ಒಂದಾಗಿದೆ. ಇಲ್ಲಿ ಸ್ಕೌಟ್ಸ್ ಕೌನ್ಸಿಲ್ ೧೦-೮-೩೯ ರಲ್ಲಿ ರಚನೆಯಾಗಿ, ಎಲ್ಲಾ ತಾಲೂಕುಗಳಲ್ಲಿಯೂ ಸ್ಥಳೀಯ ಸಂಸ್ಥೆಗಳು ಪ್ರಾರಂಭಗೊಂಡವು. ಪ್ರಸ್ತುತ ಸ್ಕೌಟ್ ಕಟ್ಟಡದ ಶಂಕುಸ್ಥಾಪನೆ ೨೩-೧೨-೩೯ ರಂದು ನೆರವೇರಿ, ಕಟ್ಟಡ ೧೯೪೧ರಲ್ಲಿ ೨೫೦೦.೦೦ ರೂ. ವೆಚ್ಚದಲ್ಲಿ ನಿರ್ಮಾಣವಾಯಿತು. ಪ್ರಥಮ ಜಿಲ್ಲಾ ಸ್ಕೌಟ್ ಕಮೀಷನರಾಗಿ ಅಂದಿನ ಜಿಲ್ಲಾಧಿಕಾರಿ ರಾಘವೇಂದ್ರರಾವ್ ಅಧಿಕಾರ ವಹಿಸಿಕೊಂಡರು.

ಜಿಲ್ಲೆಯ ಸ್ಕೌಟ್ ಚಟುವಟಿಕೆಗಳು ೧೯೩೯ಕ್ಕಿಂತ ಮೊದಲು ಮೈಸೂರು ಸ್ಥಳೀಯ ಸ್ಕೌಟ್ ಕೌನ್ಸಿಲ್ ಸಂಸ್ಥೆಯ ಮುಖಾಂತರ ನಡೆಯಲ್ಪಡುತ್ತಿದ್ದವು. ರಾಜ್ಯ ಹಾಗೂ ರಾಷ್ಟ್ರದ ಕಾರ್ಯಕ್ರಮಗಳಲ್ಲಿಯೂ ಸಕ್ರಿಯವಾಗಿ ಪಾಲ್ಗೊಳುತ್ತಿದ್ದವು. ಪ್ರಾರಂಭದಲ್ಲಿ ೧೨ ಸ್ಕೌಟ್ ದಳಗಳು, ೧೦ ಕಬ್ ಪ್ಯಾಕ್‌ಗಳು ಹಾಗೂ ಎರಡು ರೋವರ್ ಕ್ರೂಗಳು ಮಂಡ್ಯದಲ್ಲಿ ಇದ್ದವು. ಎಲ್ಲಾ ತಾಲೂಕು ಕೇಂದ್ರಗಳಲ್ಲಿಯೂ ಸ್ಥಳೀಯ ಸ್ಕೌಟ್ ಸಂಸ್ಥೆಗಳು ತೆರೆಯಲ್ಪಟ್ಟು, ಸ್ಕೌಟ್‌ಗಳ ಸಂಖ್ಯೆ ೬೦೦ಕ್ಕೂ, ಕಬ್‌ಗಳ ಸಂಖ್ಯೆ ೪೦೦ ಕ್ಕೂ ಏರಿತು. ೧೯೫೦ಕ್ಕಿಂತ ಮುಂಚೆ ಗೈಡ್ಸ್ ಸಂಸ್ಥೆ ಅಸ್ತಿತ್ವಕ್ಕೆ ಬಂದಿತು. ಅಂದಿನಿಂದ ಜಿಲ್ಲಾ ಸ್ಕೌಟ್ಸ್ ಮತ್ತು ಗೈಡ್ಸ್ ಕೌನ್ಸಿಲ್ ಅಸ್ತಿತ್ವಕ್ಕೆ ಬಂದು, ಸ್ಕೌಟ್ಸ್ ಮತ್ತು ಗೈಡ್ಸ್ ಚಟುವಟಿಕೆಗಳು ಒಟ್ಟಿಗೆ ನಡೆಯಲು ಪ್ರಾರಂಭವಾಯಿತು.

ಪ್ರತೀ ತಾಲೂಕಿನ ಸ್ಥಳೀಯ ಘಟಕಗಳು ಆಯಾಯ ತಾಲೂಕು ಕೇಂದ್ರಗಳಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್ ಚಟುವಟಿಕೆಗಳನ್ನು ವಾರ್ಷಿಕ ಕಾರ್ಯಕ್ರಮದ ಪ್ರಕಾರ ಪ್ರತೀ ವರ್ಷ ನಡೆಸುತ್ತಾ ಬರುತ್ತಿವೆ. ಎಲ್ಲಾ ತಾಲೂಕು ಕೇಂದ್ರಗಳಲ್ಲಿ ಜನವರಿ ತಿಂಗಳಲ್ಲಿ ಸ್ಥಳೀಯ ಸ್ಕೌಟ್ಸ್ ಮತ್ತು ಗೈಡ್ಸ್ ಮೇಳ ನಡೆಯುತ್ತದೆ. ಇದಲ್ಲದೆ ಪ್ರತೀ ತಾಲೂಕಿನಲ್ಲಿ ಮಕ್ಕಳಿಗೆ (ಸ್ಕೌಟ್ಸ್ ಅಂಡ್ ಗೈಡ್ಸ್) ಪ್ಯಾಟ್ರೋಲ್ ಲೀಡರ್ ಕೋರ್ಸ್, ಕಬ್ ಮತ್ತು ಬುಲ್‌ಬುಲ್‌ಗಳಿಗೆ ಸಿಕ್ಸರ್ ಕೋರ್ಸ್ ನಡೆಯುತ್ತದೆ. ಅದೇ ರೀತಿ ಸ್ಕೌಟ್ಸ್, ಗೈಡ್ಸ್, ಕಬ್ಸ್ ಮತ್ತು ಬುಲ್ ಬುಲ್ ಗಳಿಗೆ ಬ್ಯಾಡ್ಜ್ ವರ್ಕ್ ಕೋರ್ಸ್ ಸಹ ನಡೆಯುತ್ತದೆ. ರೋವರ್ಸ್‌ಗಳು ಹಿರಿಯ ಸ್ಕೌಟ್ಸ್‌ಗಳು ಮತ್ತು ಗೈಡ್ಸ್‌ಗಳು ಸಮುದಾಯ ಸೇವಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಸೇವೆ ಸಲ್ಲಿಸುತ್ತಾರೆ. ಪ್ರತೀ ವರ್ಷವೂ ಜಿಲ್ಲಾ ಕೇಂದ್ರದಲ್ಲಿ ಫೆಬ್ರವರಿ ಮಾಹೆಯಂದು ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥಾಪಕರ ದಿನಾಚರಣೆಯ ಅಂಗವಾಗಿ ಜಿಲ್ಲಾ ರ‍್ಯಾಲಿ ನಡೆಯುತ್ತದೆ. ಆ ದಿನ ಜಿಲ್ಲೆಯ ಸ್ಕೌಟ್ಸ್, ಗೈಡ್ಸ್, ಕಬ್ ಮತ್ತು ಬುಲ್‌ಬುಲ್‌ಗಳೂ, ರೋವರ್ಸ್, ಸ್ಕೌಟರ್ಸ್ ಮತ್ತು ಗೈಡರ್ಸ್‌ಗಳೂ ಮತ್ತು ಸಂಸ್ಥೆಯ ಪದಾಧಿಕಾರಿಗಳು ಹಾಗೂ ಸ್ಕೌಟ್ಸ್ ಮತ್ತು ಗೈಡ್ಸ್ ಚಟುವಟಿಕೆಯ ಬಗ್ಗೆ ಹಿತಾಸಕ್ತಿವುಳ್ಳ ಸಾರ್ವಜನಿಕರೂ ಈ ಮೇಳದಲ್ಲಿ ಭಾಗವಹಿಸುತ್ತಾ ಬಂದಿದ್ದಾರೆ. ನವೆಂಬರ್ ಮಾಹೆಯ ಮೊದಲನೇ ವಾರವನ್ನು ಸ್ಕೌಟ್ಸ್ ಮತ್ತು ಗೈಡ್ಸ್ ಸಪ್ತಾಹ ಎಂದು ಆಚರಿಸಲಾಗುತ್ತದೆ.

ಇದುವರೆಗೆ ಕರ್ನಾಟಕ ರಾಜ್ಯದಲ್ಲಿ ೨೩ ರಾಜ್ಯ ಮಟ್ಟದ ಸ್ಕೌಟ್ಸ್ ಮತ್ತು ಗೈಡ್ಸ್ ಜಾಂಬೂರಿಗಳು ನಡೆದಿವೆ. ಈ ಎಲ್ಲಾ ಜಾಂಬೂರಿಗಳಲ್ಲೂ ಹಾಗೂ ರಾಷ್ಟ್ರೀಯ ಜಾಂಬೂರಿಗಳಲ್ಲಿಯೂ ಮಂಡ್ಯ ಜಿಲ್ಲೆಯ ಸ್ಕೌಟ್ಸ್ ಮತ್ತು ಗೈಡ್ಸ್‌ಗಳು ಭಾಗವಹಿಸಿ ಉತ್ತಮ ಪ್ರದರ್ಶನ ನೀಡಿರುತ್ತಾರೆ.

**ನ್ಯಾಷನಲ್ ಕೆಡೆಟ್ ಕೋರ್(ಎನ್.ಸಿ.ಸಿ.)**

ಮಂಡ್ಯದಲ್ಲಿ ೧೯೭೪ರಲ್ಲಿ ಮೂರನೇ ಇಂಜನೀಯರಿಂಗ್ ಕಂಪೆನಿ ಎನ್.ಸಿ.ಸಿ. ಎಂಬ ದಳದ ಪ್ರಾರಂಭದೊಂದಿಗೆ ಜಿಲ್ಲೆಯ ಎನ್.ಸಿ.ಸಿ. ಚಟುವಟಿಕೆ ಪ್ರಾರಂಭವಾಯಿತು. ೧೯೭೬ರಲ್ಲಿ ಈ ಸಂಸ್ಥೆ ಪುನರ್ ಸಂಘಟನೆಗೊಂಡು ಆಡಳಿತ ಮತ್ತು ತರಬೇತಿ ಸುಗಮಗೊಳ್ಳಲು ೧೪ನೇ ಕರ್ನಾಟಕ ಬೆಟಾಲಿಯನ್‌ಗೆ ಸೇರ್ಪಡೆಯಾಯಿತು. ಪ್ರತೀ ಕಾಲೇಜಿನಿಂದ ೧೫೦ ವಿದ್ಯಾರ್ಥಿಗಳಿಗೆ ಸೀನಿಯರ್ ವಿಭಾಗಕ್ಕೆ ಹಾಗೂ ಪ್ರತೀ ಪ್ರೌಢಶಾಲೆಯಿಂದ ೧೦೦ ವಿದ್ಯಾರ್ಥಿಗಳಿಗೆ ಜೂನಿಯರ್ ವಿಭಾಗಕ್ಕೆ ವರ್ಷಂಪ್ರತಿ ಪ್ರವೇಶಾವಕಾಶವಿರುತ್ತದೆ. ಪ್ರೌಢಶಾಲಾ ಮಟ್ಟದಲ್ಲಿ ಎರಡು ವರ್ಷ ಹಾಗೂ ಕಾಲೇಜು ಮಟ್ಟದಲ್ಲಿ ಮೂರರಿಂದ ನಾಲ್ಕು ವರ್ಷ ಕೆಡೆಟ್‌ಗಳಾಗಿ ವಿದ್ಯಾರ್ಥಿಗಳು ಸೇವೆ ಸಲ್ಲಿಸಬಹುದು. ಆಯಾಯ ಸಂಸ್ಥೆಯ ಬೋಧಕ ಸಿಬ್ಬಂದಿಯ ಪೈಕಿ ಅರ್ಹ ವ್ಯಕ್ತಿಯನ್ನು ಎನ್.ಸಿ.ಸಿ ಅಧಿಕಾರಿಯಾಗಿ ಆಯ್ಕೆ ಮಾಡಿ, ಅವರಿಗೆ ಪ್ರೀ–ಕಮೀಷನ್ ತರಬೇತಿ ನೀಡಿ, ಅಸೋಸಿಯೇಟ್ ಎನ್.ಸಿ.ಸಿ ಅಧಿಕಾರಿಯಾಗಿ ನೇಮಿಸಲಾಗುವುದು.

ವಾರ್ಷಿಕ ಶಿಬಿರಗಳಲ್ಲಿ ಪಾಲ್ಗೊಂಡ ವಿದ್ಯಾರ್ಥಿಗಳು ಪ್ರೌಢಶಾಲಾ ಮಟ್ಟದಲ್ಲಿ 'ಎ' ಪ್ರಶಸ್ತಿ ಪತ್ರದ ಪರೀಕ್ಷೆಯಲ್ಲಿ, ಕಾಲೇಜು ಮಟ್ಟದಲ್ಲಿ 'ಬಿ' ಹಾಗೂ 'ಸಿ' ಪರೀಕ್ಷೆಗಳಲ್ಲಿ ತೇರ್ಗಡೆಹೊಂದಿ, ಉನ್ನತ ಶಿಕ್ಷಣದಲ್ಲಿ ಹಾಗೂ ಕೆಲವು ನಿಗದಿತ ಸರ್ಕಾರಿ ಸೇವೆಗಳಲ್ಲಿ ಮೀಸಲಾತಿ ಸೌಲಭ್ಯ ಪಡೆಯಬಹುದು. ಮುಂದಿನ ಕೋಷ್ಟಕದಲ್ಲಿ ಜಿಲ್ಲೆಯ ವಿವಿಧ ವಿದ್ಯಾಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಎನ್.ಸಿ.ಸಿ. ದಳಗಳ ವಿವರಗಳನ್ನು ನೀಡಲಾಗಿದೆ.

**ಕೋಷ್ಟಕ ೧೩.೧೫**

| ಕ್ರ.ಸಂ | ಸಂಸ್ಥೆಯ ಹೆಸರು | ಅಧಿಕಾರಿಗಳ ಸಂಖ್ಯೆ | ಕೆಡೆಟ್‌ಗಳ ಸಂಖ್ಯೆ |
|---|---|---|---|
| | **ಸೀನಿಯರ್ ದಳ** | | |
| ೧ | ಪಿ.ಇ.ಎಸ್. ವಿಜ್ಞಾನ ಕಾಲೇಜು, ಮಂಡ್ಯ | ೧ | ೧೫೦ |
| ೨ | ಸರ್ಕಾರಿ ಬಾಲಕರ ಕಾಲೇಜು, ಮಂಡ್ಯ | ೧ | ೧೫೦ |
| ೩ | ಶಾಂತಿ ಕಲಾ, ವಿಜ್ಞಾನ ಹಾಗೂ ವಾಣಿಜ್ಯ ಕಾಲೇಜು, ಮಳವಳ್ಳಿ | ೧ | ೧೫೦ |
| ೪ | ವಿಜಯ ಪ್ರಥಮ ದರ್ಜೆ ಕಾಲೇಜು, ಪಾಂಡವಪುರ, | ೧ | ೧೫೦ |
| | **ಜೂನಿಯರ್ ದಳ** | | |
| ೧ | ಸರ್ಕಾರಿ ಪದವಿಪೂರ್ವ ಕಾಲೇಜು, ಕೃಷ್ಣರಾಜಪೇಟೆ | ೧ | ೧೦೦ |
| ೨ | ಸರ್ಕಾರಿ ಪದವಿಪೂರ್ವ ಕಾಲೇಜು, ಮಂಡ್ಯ | ೧ | ೧೦೦ |
| ೩ | ಸರ್ಕಾರಿ ಪದವಿಪೂರ್ವ ಕಾಲೇಜು, ಮದ್ದೂರು | ೧ | ೧೦೦ |
| ೪ | ಶ್ರೀ ಆಂಜನೇಯಸ್ವಾಮಿ ಪ್ರೌಢಶಾಲೆ, ಎಲಿಯೂರು | ೧ | ೧೦೦ |
| ೫ | ಜೆ.ಎನ್.ವಿ. ಶಾಲೆ, ಗುಡ್ಡ | ೧ | ೧೦೦ |

## ಶಿಕ್ಷಣ ಕ್ಷೇತ್ರದಲ್ಲಿ ಖಾಸಗಿ ಸಂಸ್ಥೆಗಳು

ಜಿಲ್ಲೆಯ ಶೈಕ್ಷಣಿಕ ಕ್ಷೇತ್ರದಲ್ಲಿ ಸರ್ಕಾರಿ ಸಂಸ್ಥೆಗಳಷ್ಟೇ ಪ್ರಮುಖ ಪಾತ್ರವನ್ನು ಖಾಸಗಿ ಸಂಸ್ಥೆಗಳೂ ವಹಿಸಿವೆ. ಪೂರ್ವ ಪ್ರಾಥಮಿಕ ಹಂತದಿಂದ ಮೊದಲುಗೊಂಡು ಉನ್ನತ ಮಟ್ಟದ ತಾಂತ್ರಿಕ ಹಾಗೂ ವೈದ್ಯಕೀಯ

ಶಿಕ್ಷಣಗಳನ್ನೊಳಗೊಂಡ ಅನೇಕ ಶಾಲಾ ಕಾಲೇಜುಗಳನ್ನು ಖಾಸಗಿ ಸಂಸ್ಥೆಗಳು ನಡೆಸುತ್ತಿವೆ. ಅಂತಹ ಪ್ರಮುಖ ಸಂಸ್ಥೆಗಳ ವಿವರಗಳನ್ನು ಈ ಮುಂದೆ ನೀಡಲಾಗಿದೆ.

**ವಿದ್ಯಾ ಪ್ರಚಾರ ಸಂಘ, ಪಾಂಡವಪುರ:** ಈ ಸಂಸ್ಥೆ ೧೯೪೭ರಲ್ಲಿ ಪಾಂಡವಪುರ ಪುರಸಭಾ ಕಚೇರಿಯ ಕೊಠಡಿಯೊಂದರಲ್ಲಿ ಪ್ರೌಢಶಾಲೆಯನ್ನು ಆರಂಭಿಸಿತು. ನಂತರ ೧೯೬೮ರಲ್ಲಿ ಬಾಡಿಗೆ ಕಟ್ಟಡದಲ್ಲಿ ಇದರೊಡನೆ ಪಿ.ಯು.ಸಿ. ತರಗತಿಗಳನ್ನೂ ಪ್ರಾರಂಭಿಸಲಾಯಿತು. ಪ್ರಸ್ತುತ ಸಂಸ್ಥೆ ಪ್ರಥಮ ದರ್ಜೆ ಕಾಲೇಜನ್ನೂ ಕಂಪ್ಯೂಟರ್ ಅಕಾಡೆಮಿಯನ್ನೂ ನಡೆಸುತ್ತಿದೆ. ೨೦೦೦–೨೦೦೧ನೇ ವರ್ಷಕ್ಕೆ ಈ ಸಂಸ್ಥೆಯ ಪ್ರೌಢಶಾಲೆ ಮತ್ತು ಕಾಲೇಜುಗಳಲ್ಲಿ ಒಟ್ಟು ೧,೬೮೮ ವಿದ್ಯಾರ್ಥಿ/ವಿದ್ಯಾರ್ಥಿನಿಯರು ವ್ಯಾಸಂಗ ಮಾಡುತ್ತಿದ್ದರು. ಬೋಧಕ ಸಿಬ್ಬಂದಿ ಸಂಖ್ಯೆ ೫೯ ಆಗಿದ್ದಿತು.

**ಎಮ್.ಎಚ್.ಚನ್ನೇಗೌಡ ವಿದ್ಯಾ ಸಂಸ್ಥೆ, ಮದ್ದೂರು:** ೧೯೬೫ರಲ್ಲಿಅಸ್ತಿತ್ವಕ್ಕೆ ಬಂದಿತು. ಇದೇ ವರ್ಷ ಈ ಸಂಸ್ಥೆಯುವತಿಯಿಂದ ಜವಹರ್ ಪ್ರೌಢಶಾಲೆ ಪ್ರಾರಂಭವಾಯಿತು. ೧೯೬೯ರಲ್ಲಿ ಕಸ್ತೂರ್ ಬಾ ಉನ್ನತ ಪ್ರಾಥಮಿಕ ಶಾಲೆ ಮತ್ತು ೧೯೭೧ರಲ್ಲಿ ಕಿರಿಯ ಕಾಲೇಜುಗಳು ಸ್ಥಾಪನೆಯಾದವು, ಎಚ್.ಕೆ.ವೀರಣ್ಣಗೌಡ ಪ್ರಥಮದರ್ಜೆ ಕಾಲೇಜು ೧೯೭೮ರಲ್ಲಿ ಪ್ರಾರಂಭವಾಗಿ ಇಲ್ಲಿ ಪ್ರಸ್ತುತ ರೇಷ್ಮೆ, ಕೃಷಿ, ಸಕ್ಕರೆ ಸಂಸ್ಕರಣೆ ಮುಂತಾದ ವೃತ್ತಿ ಶಿಕ್ಷಣ ವಿಷಯಗಳೂ ಬೋಧಿಸಲ್ಪಡುತ್ತಿವೆ. ಇದಲ್ಲದೆ ಶಿಶುವಿಹಾರ, ಮಹಿಳಾಸಮಾಜ, ಬಾಲಿಕಾ ಪ್ರೌಢಶಾಲೆಗಳನ್ನೂ ಸಂಸ್ಥೆ ನಡೆಸುತ್ತಿದ್ದು, ೨೦೦೦–೨೦೦೧ ವರ್ಷಕ್ಕೆ ಇದರ ಶಾಲಾ ಕಾಲೇಜುಗಳ ಒಟ್ಟು ವಿದ್ಯಾರ್ಥಿ/ವಿದ್ಯಾರ್ಥಿನಿಯರ ಸಂಖ್ಯೆ ೧೨೦೦ ಕ್ಕೂ ಮೇಲ್ಪಟ್ಟಿದ್ದು, ಬೋಧಕ ಸಿಬ್ಬಂದಿ ಸಂಖ್ಯೆ ಸುಮಾರು ೮೫ ಆಗಿದ್ದಿತು.

**ಶಾಂತಿ ಶಿಕ್ಷಣ ಸಂಸ್ಥೆ (ಮಳವಳ್ಳಿ):** ಮಳವಳ್ಳಿ ತಾಲೂಕಿನ ಜನತೆಗೆ ಶೈಕ್ಷಣಿಕ ಸವಲತ್ತುಗಳನ್ನು ಒದಗಿಸುವ ಸಲುವಾಗಿ ೧೯೭೦ರ ಜೂನ್ ತಿಂಗಳಿನಲ್ಲಿ ಕೆ.ಎನ್.ನಾಗೇಗೌಡರ ಮಾರ್ಗದರ್ಶನದಲ್ಲಿ ಕಲಾ, ವಿಜ್ಞಾನ, ಮತ್ತು ವಾಣಿಜ್ಯ ಕಾಲೇಜು ೧೦೦ ಮಂದಿ ವಿದ್ಯಾರ್ಥಿಗಳೊಂದಿಗೆ ಪ್ರಾರಂಭವಾಯಿತು. ಮೂರು ದಶಕಗಳ ಪ್ರಗತಿಯಲ್ಲಿ ಪ್ರಸ್ತುತ ಕಾಲೇಜಿನ ಒಟ್ಟು ವಿದ್ಯಾರ್ಥಿ ವಿದ್ಯಾರ್ಥಿನಿಯರ ಸಂಖ್ಯೆ ೧೫೦೦ ರಷ್ಟಿದೆ. ಬೋಧಕ ಸಿಬ್ಬಂದಿ ಸಂಖ್ಯೆ ೩೭ ಆಗಿರುತ್ತದೆ. ಸುಮಾರು ೨೦ ಸಾವಿರಕ್ಕೂ ಹೆಚ್ಚಿನ ಗ್ರಂಥಗಳ ಗ್ರಂಥಾಲಯುವನ್ನೂ, ಉತ್ತಮ ಎಸ್.ಸಿ.ಸಿ ಘಟಕವನ್ನೂ, ಸ್ವಂತ ಕಟ್ಟಡವನ್ನೂ ಹೊಂದಿರುವ ಈ ಸಂಸ್ಥೆ ೧೯೯೬ರಲ್ಲಿ ತನ್ನ ಬೆಳ್ಳಿಹಬ್ಬವನ್ನು ಆಚರಿಸಿದೆ.

**ಭಾರತಿ ಎಜುಕೇಷನ್ ಟ್ರಸ್ಟ್, ಭಾರತೀ ನಗರ:** ಮೇಲ್ಕಂಡ ಟ್ರಸ್ಟಿನ ವತಿಯಿಂದ ಜಿಲ್ಲೆಯ ಕಾಳಮುದ್ದನದೊಡ್ಡಿ(ಇಂದಿನ ಭಾರತೀ ನಗರ)ಯಲ್ಲಿ ಭಾರತಿ ಕಾಲೇಜು ೧೯೭೦ರಲ್ಲಿ ಜಿ. ಮಾದೇಗೌಡರಿಂದ ಸ್ಥಾಪಿಸಲ್ಪಟ್ಟಿತು. ಕರ್ನಾಟಕ ಸರ್ಕಾರದಿಂದ ಮಾನ್ಯತೆ ಪಡೆದಿರುವ ಈ ಸಂಸ್ಥೆ ಮೈಸೂರು ವಿಶ್ವವಿದ್ಯಾಲಯದ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿದೆ. ಸುಮಾರು ನಲವತ್ತು ಎಕರೆ ಪ್ರದೇಶದಲ್ಲಿ ತನ್ನದೇ ಆದ ಕಟ್ಟಡಗಳನ್ನೂ ೨೫,೦೦೦ ಪುಸ್ತಕಗಳುಳ್ಳ ಉತ್ತಮ ಗ್ರಂಥಾಲಯ ಸೌಲಭ್ಯವನ್ನೂ ಸಂಸ್ಥೆ ಹೊಂದಿದೆ. ಎರಡು ವರ್ಷದ ಪಿ.ಯು.ಸಿ.; ವೃತ್ತಿ ಶಿಕ್ಷಣ ; ಕಲೆ, ವಾಣಿಜ್ಯ ಮತ್ತು ವಿಜ್ಞಾನದ ಮೂರು ವರ್ಷಗಳ ಪದವಿ ಶಿಕ್ಷಣ ; ಹೆಣ್ಣು ಮತ್ತು ಗಂಡು ಮಕ್ಕಳಿಗಾಗಿ ಪ್ರತ್ಯೇಕ ಹಾಸ್ಟೆಲ್ ವ್ಯವಸ್ಥೆ ಹಾಗೂ ಕ್ರೀಡಾಂಗಣ ಮುಂತಾದ ಪ್ರಮುಖ ಶೈಕ್ಷಣಿಕ ಸೌಲಭ್ಯಗಳನ್ನೂ ಸಂಸ್ಥೆ ನೀಡುತ್ತಿದೆ.

ಇದಲ್ಲದೆ, ಭಾರತೀ ನಗರದಲ್ಲಿ ೧೯೬೨ರಲ್ಲಿ ಪ್ರಾರಂಭವಾದ ಭಾರತೀ ಪ್ರೌಢಶಾಲೆ, ಅದೇ ವರ್ಷ ಪ್ರಾರಂಭಗೊಂಡ ಭಾರತೀ ವಿದ್ಯಾರ್ಥಿನಿಲಯ, ೧೯೬೫ರಲ್ಲಿ ಆರಂಭವಾದ ಭಾರತೀ ಮಲ್ಟಿಪರ್ಪಸ್ ಕೋ– ಆಪರೇಟಿವ್ ಸೊಸೈಟಿ, ಭಾರತೀ ಕಾಲೇಜ್ ಆಫ್ ಫಾರ್ಮಸಿ, ಬಿ.ಇ.ಟಿ. ಪಾಲಿಟೆಕ್ನಿಕ್, ಭಾರತೀ ನರ್ಸರಿ ಹಾಗೂ ಹೈಯರ್ ಪ್ರೈಮರಿ ಶಾಲೆ, ಉದ್ಯೋಗಸ್ಥ ಮಹಿಳೆಯರಿಗಾಗಿ ಹಾಸ್ಟಲ್ ಹಾಗೂ ಸಿಬ್ಬಂದಿ ವರ್ಗದವರ ಹಾಸ್ಟಲುಗಳನ್ನೂ

ಸಂಸ್ಥೆ ನಡೆಸುತ್ತಿದೆ. ಕಿರುಗಾವಲಿನಲ್ಲಿ ಒಂದು ಪ್ರಥಮ ದರ್ಜೆ ಕಾಲೇಜು, ಹಾಗೂ ಹನುಮಂತನಗರದಲ್ಲಿ ಒಂದು ವಸತಿ ಸಹಿತ ಭಾರತೀ ಸಂಯುಕ್ತ ಪದವಿಪೂರ್ವ ಕಾಲೇಜನ್ನೂ ಸಂಸ್ಥೆ ನಡೆಸುತ್ತಿದೆ.

## ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್

ಬಹಳ ಹಿಂದಿನಿಂದಲೂ ಹಲವಾರು ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಿರುವ ಆದಿಚುಂಚನಗಿರಿ ಮಠ ೧೯೭೪ರಲ್ಲಿ ಜಿಲ್ಲೆಯ ಬೆಳ್ಳೂರಿನಲ್ಲಿ ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್ ಅನ್ನು ಸ್ಥಾಪಿಸಿತು. ರಾಜ್ಯದ ಎಲ್ಲೆಡೆ ಸುಮಾರು ೯೨ ಸಂಸ್ಥೆಗಳನ್ನೂ, ತಮಿಳುನಾಡಿನಲ್ಲಿ ಒಂದು ಸಂಸ್ಥೆಯನ್ನೂ, ಹೊಂದಿರುವ ಈ ಟ್ರಸ್ಟಿನಡಿ ೨೦೦೧–೨೦೦೨ರಲ್ಲಿ ಕಾರ್ಯೋನ್ಮುಖವಾಗಿದ್ದ ವಿವಿಧ ಶಿಕ್ಷಣ ಸಂಸ್ಥೆಗಳ ಪಟ್ಟಿಯನ್ನು ಈ ಮುಂದೆ ನೀಡಲಾಗಿದೆ.

**ಕೋಷ್ಟಕ ೧೩.೧೬**

| ಸಂಸ್ಥೆಯ ಹೆಸರು | ಪ್ರಾರಂಭಿಕ ವರ್ಷ | ಸಂಸ್ಥೆ ಸಲ್ಲಿಸುತ್ತಿರುವ ಶೈಕ್ಷಣಿಕ ಸೇವೆ ಹಾಗೂ ಹೊಂದಿರುವ ಸವಲತ್ತುಗಳು |
|---|---|---|
| ೧ | ೨ | ೩ |
| ಗುರುಕುಲ ಮಾಧ್ಯಮಿಕ ಶಾಲೆ, ಆದಿಚುಂಚನಗಿರಿ | ೧೯೪೭ | ಬೋಧಕರು –೧೨<br>ವಿದ್ಯಾರ್ಥಿ–ವಿದ್ಯಾರ್ಥಿನಿಯರ ಸಂಖ್ಯೆ–೫೭೫ |
| ಕಾಲಭೈರವೇಶ್ವರ ಸಂಸ್ಕೃತ ವೇದಾಗಮ ಕಾಲೇಜು, ಆದಿಚುಂಚನಗಿರಿ. | ೧೯೬೮ | ಪದವಿ ಹಾಗೂ ಸ್ನಾತಕೋತ್ತರ ಕೋರ್ಸುಗಳು ೬,೫೦೦ ಪುಸ್ತಕಗಳ ಗ್ರಂಥಾಲಯ, ಈವರೆಗೆ ಸುಮಾರು ೧೦,೦೦೦ ವಿದ್ಯಾರ್ಥಿಗಳಿಗೆ ವಿದ್ಯಾದಾನ |
| ಗಂಗಾಧರೇಶ್ವರ ಸಂಯುಕ್ತ ಪದವಿಪೂರ್ವ ಕಾಲೇಜು, ಆದಿಚುಂಚನಗಿರಿ. | ೧೯೬೨ | ಪಿ.ಯು.ಸಿ. ಶಿಕ್ಷಣ ಉಚಿತ ಊಟ, ವಸತಿ, ಬಟ್ಟೆ, ವಿದ್ಯಾರ್ಥಿನಿಲಯಗಳು<br>ಬೋಧಕರು –೧೮<br>ವಿದ್ಯಾರ್ಥಿ–ವಿದ್ಯಾರ್ಥಿನಿಯರ ಸಂಖ್ಯೆ–೯೦೦ |
| ವಿವೇಕಾನಂದ ಪ್ರೌಢಶಾಲೆ, ಮಳವಳ್ಳಿ | ೧೯೭೫ | ಬೋಧಕರು –೦೯<br>ವಿದ್ಯಾರ್ಥಿ–ವಿದ್ಯಾರ್ಥಿನಿಯರ ಸಂಖ್ಯೆ–೩೪೫ |
| ಆದಿಚುಂಚನಗಿರಿ ಕಲಾ ಹಾಗೂ ವಾಣಿಜ್ಯ ಕಾಲೇಜು, ನಾಗಮಂಗಲ | ೧೯೮೦ | ಬೋಧಕರು –೨೦<br>ವಿದ್ಯಾರ್ಥಿ–ವಿದ್ಯಾರ್ಥಿನಿಯರ ಸಂಖ್ಯೆ–೭೨೫ |
| ಆದಿಚುಂಚನಗಿರಿ ವಾಣಿಜ್ಯ ವಿದ್ಯಾಶಾಲೆ, ನಾಗಮಂಗಲ | ೧೯೮೫ | ಬೋಧಕರು –೨೫<br>ವಿದ್ಯಾರ್ಥಿ–ವಿದ್ಯಾರ್ಥಿನಿಯರ ಸಂಖ್ಯೆ–೧೨೭೪ |
| ಭಕ್ತನಾಥಸ್ವಾಮಿ ಪ್ರೌಢಶಾಲೆ | | ಬೋಧಕರು –೨೩<br>ವಿದ್ಯಾರ್ಥಿ–ವಿದ್ಯಾರ್ಥಿನಿಯರ ಸಂಖ್ಯೆ–೬೦೦ |
| ರಾಮಾನಂದ ಸ್ವಾಮಿ ಪ್ರೌಢಶಾಲೆ, ಬ್ರಹ್ಮದೇವರಹಳ್ಳಿ | ೧೯೯೦ | ಬೋಧಕರು –೦೭<br>ವಿದ್ಯಾರ್ಥಿ–ವಿದ್ಯಾರ್ಥಿನಿಯರ ಸಂಖ್ಯೆ–೨೯೫ |
| ಬಸವೇಶ್ವರ ಪ್ರೌಢಶಾಲೆ, ಕೃಷ್ಣರಾಜಪೇಟೆ | ೧೯೯೧ | ಬೋಧಕರು –೦೬<br>ವಿದ್ಯಾರ್ಥಿ–ವಿದ್ಯಾರ್ಥಿನಿಯರ ಸಂಖ್ಯೆ–೨೦೦ |
| ಗಣೇಶನಾಥ ಸ್ವಾಮಿ ಪ್ರೌಢಶಾಲೆ, ತಾವರಕೆರೆ, | ೧೯೯೪ | ಬೋಧಕರು –೦೮<br>ವಿದ್ಯಾರ್ಥಿ–ವಿದ್ಯಾರ್ಥಿನಿಯರ ಸಂಖ್ಯೆ–೨೯೫ |
| ಆದಿಚುಂಚನಗಿರಿ ಕೈಗಾರಿಕಾ ಕೇಂದ್ರ, ಮೇಲುಕೋಟೆ | ೧೯೯೫ | ಬೋಧಕರು –೧೦<br>ವಿದ್ಯಾರ್ಥಿ–ವಿದ್ಯಾರ್ಥಿನಿಯರ ಸಂಖ್ಯೆ–೧೫೦ |
| ಆದಿಶಕ್ತಿ ಪ್ರೌಢಶಾಲೆ, ಹುಲಿಕೆರೆ | ೧೯೯೧ | ಬೋಧಕರು –೦೬<br>ವಿದ್ಯಾರ್ಥಿ–ವಿದ್ಯಾರ್ಥಿನಿಯರ ಸಂಖ್ಯೆ–೨೮೧ |

| ೧ | ೨ | ೩ |
|---|---|---|
| ಬಸವೇಶ್ವರ ಪ್ರೌಢಶಾಲೆ, ಕದಲೂರು (ಮದ್ದೂರು ತಾ.) | ೧೯೯೨ | ಬೋಧಕರು ೦೯<br>ವಿದ್ಯಾರ್ಥಿ-ವಿದ್ಯಾರ್ಥಿನಿಯರ ಸಂಖ್ಯೆ-೨೨೦ |
| ಭಕ್ತನಾಥ ಸ್ವಾಮಿ ಸಂಯುಕ್ತ ಪದವಿಪೂರ್ವ ಕಾಲೇಜು | ೧೯೯೮ | ಬೋಧಕರು -೦೪<br>ವಿದ್ಯಾರ್ಥಿ-ವಿದ್ಯಾರ್ಥಿನಿಯರ ಸಂಖ್ಯೆ-೧೩೮ |
| ಆದಿಚುಂಚನಗಿರಿ ಪ್ರೌಢಶಾಲೆ, ಅನಗೋಳ<br>ಕೃಷ್ಣರಾಜಪೇಟೆ ತಾ: | ೧೯೯೮ | ಬೋಧಕರು -೧೦<br>ವಿದ್ಯಾರ್ಥಿ-ವಿದ್ಯಾರ್ಥಿನಿಯರ ಸಂಖ್ಯೆ-೩೯೨ |
| ಎಂ.ಲಿಂಗಯ್ಯ ಸಂಯುಕ್ತ ಪದವಿಪೂರ್ವ ಕಾಲೇಜು,<br>ಕೃಷ್ಣರಾಜಪೇಟೆ | ೨೦೦೦ | ಬೋಧಕರು-೨೧<br>ವಿದ್ಯಾರ್ಥಿ-ವಿದ್ಯಾರ್ಥಿನಿಯರ ಸಂಖ್ಯೆ-೩೬೩ |
| ಕಲ್ಯಾಣ ವೆಂಕಟರಮಣಸ್ವಾಮಿ ಸಂಯುಕ್ತ<br>ಪದವಿಪೂರ್ವ ಕಾಲೇಜು, ಹೇಮಗಿರಿ<br>ಕೃಷ್ಣರಾಜಪೇಟೆ ತಾ: | ೨೦೦೦ | ವಿದ್ಯಾರ್ಥಿಗಳು -೪೮೭, ಬೋಧಕ ವರ್ಗ-೧<br>(ಪ್ರೌಢಶಾಲೆ) ವಿದ್ಯಾರ್ಥಿಗಳು-೧೦೯, ಬೋಧಕ ವರ್ಗ-೦೬<br>(ಜೂನಿಯರ್ ಕಾಲೇಜು) ವಿದ್ಯಾರ್ಥಿಗಳು-೧೧೫, ಬೋಧಕ<br>ವರ್ಗ-೦೬ (ಮಾಧ್ಯಮಿಕ ಶಾಲೆ) ವಿದ್ಯಾರ್ಥಿಗಳು-೨೦೫,<br>- ಬೋಧಕ ವರ್ಗ-೦೩ (ಸಂಸ್ಕೃತ ಪಾಠಶಾಲೆ) |
| ಆದಿಚುಂಚನಗಿರಿ ದೈಹಿಕ ಶಿಕ್ಷಣ ಕಾಲೇಜು | | ಬೋಧಕರು -೦೬<br>ವಿದ್ಯಾರ್ಥಿ-ವಿದ್ಯಾರ್ಥಿನಿಯರ ಸಂಖ್ಯೆ-೬೦ |
| ಕಾವೇರಿ ಪ್ರೌಢಶಾಲೆ, ಶ್ರೀರಂಗಪಟ್ಟಣ | | ಬೋಧಕರು -೨೮<br>ವಿದ್ಯಾರ್ಥಿ-ವಿದ್ಯಾರ್ಥಿನಿಯರ ಸಂಖ್ಯೆ-೧೦೩೦ |
| ವಿಶ್ವಮಾನವ ವಿದ್ಯಾಸಂಸ್ಥೆ ಕೊಮ್ಮೇನಹಳ್ಳಿ,<br>ಮಂಡ್ಯ ತಾ: | | ಬೋಧಕರು -೩೫<br>ವಿದ್ಯಾರ್ಥಿ-ವಿದ್ಯಾರ್ಥಿನಿಯರ ಸಂಖ್ಯೆ-೧೪೪೧<br>(ವಿವಿಧ ಹಂತಗಳಲ್ಲಿ) |

**ಸಂಸ್ಕೃತ ಸಂಶೋಧನಾ ಆಕಾಡೆಮಿ, ಮೇಲುಕೋಟೆ**

ಮೇಲುಕೋಟೆಯು ಶ್ರೀ ರಾಮಾನುಜಾಚಾರ್ಯರ ಕಾಲದಿಂದ ಸಂಸ್ಕೃತ ಶಿಕ್ಷಣದ ಉನ್ನತ ಕೇಂದ್ರವಾಗಿತ್ತು. ನಂತರದಲ್ಲಿ ಹಲವಾರು ರಾಜಮನೆತನಗಳ, ವಿದ್ವಾಂಸರ, ಪಂಡಿತೋತ್ತಮರ ಆಶ್ರಯ, ಉದಾತ್ತತೆಗಳಿಂದಾಗಿ, ಈ ಕೇಂದ್ರ ಏಕಪ್ರಕಾರವಾಗಿ ವೇದ, ವೇದಾಂತ, ಆಗಮಾದಿಗಳ ಆಧ್ಯಯನ ಹಾಗೂ ಆಧ್ಯಾಪನ ಕೇಂದ್ರವಾಗಿ, ವಿಶ್ವದಾದ್ಯಂತ ತನ್ನ ವಿದ್ಯಾರ್ಥಿಗಳನ್ನು ಹೊಂದಿದೆ. ಇಲ್ಲಿ ದಕ್ಷಿಣ ಭಾರತದಲ್ಲಿಯೇ ಪ್ರಥಮವಾದ, ೧೮೫೩ರಲ್ಲಿ ಸ್ಥಾಪನೆಗೊಂಡ ವೇದ ವೇದಾಂತ ಬೋಧಿನಿ ಸಂಸ್ಕೃತ ಮಹಾಪಾಠಶಾಲೆ ವೇದಾವೇದಾಂತ ಅಧ್ಯಯನದ ಮೂಲಕೇಂದ್ರವಾಗಿ ಇಂದಿಗೂ ಕಾರ್ಯೋನ್ಮುಖವಾಗಿದೆ.

ಮೇಲುಕೋಟೆಯ ಶೈಕ್ಷಣಿಕ ಮತ್ತು ಸೈದ್ಧಾಂತಿಕ ಮಹತ್ವವನ್ನರಿತ ಕರ್ನಾಟಕ ಸರ್ಕಾರ ಉನ್ನತ ಮಟ್ಟದ ಸಮಿತಿಯ ಶಿಫಾರಸ್ಸಿನಂತೆ ೧೯೭೬ರಲ್ಲಿ ಇಲ್ಲಿ ಸಂಸ್ಕೃತ ಸಂಶೋಧನೆಗಾಗಿ ಅಕಾಡೆಮಿಯೊಂದನ್ನು ಸ್ಥಾಪಿಸಿತು. ಪ್ರಾಚೀನ ಗುರುಕುಲ ಮಾದರಿಯ ಪರಿಸರ ಹೊಂದಿರುವ ಈ ಸ್ಥಳದಲ್ಲಿ ಸಂಸ್ಕೃತ ಭಾಷೆ, ಸಾಹಿತ್ಯ ಹಾಗೂ ತತ್ಸಂಬಂಧಿತ ಎಲ್ಲಾ ವಿಷಯಗಳಲ್ಲಿಯೂ ಸಂಶೋಧನೆ ನಡೆಯುತ್ತಿದೆ. ಇಲ್ಲಿ ವಿಜ್ಞಾನ, ಹಾಗೂ ಶಾಸ್ತ್ರಗಳ ತುಲನಾತ್ಮಕ ಆಧ್ಯಯನ ನಡೆಯುತ್ತದೆ. ಅಕಾಡೆಮಿಯು ಸಂಶೋಧನೆ, ಪ್ರಕಟಣೆ, ಶೈಕ್ಷಣಿಕ ಕಾರ್ಯಕ್ರಮ, ಉತ್ತಮ ಗ್ರಂಥಾಲಯ ನಿರ್ವಹಣೆ, ಸಂಶೋಧನೆಗೆ ಪೂರಕವಾದ ಅಪರೂಪದ ಪ್ರಾಚೀನ ವಸ್ತು ಸಂಗ್ರಹಾಲಯದ ನಿರ್ವಹಣೆಯೇ ಅಲ್ಲದೆ, ಅಪರೂಪದ ಸಸ್ಯಗಳ ಒಂದು ಸುಂದರ ಉದ್ಯಾನವನ್ನೂ ಹೊಂದಿದೆ. ಇಲ್ಲಿ ಸಂಶೋಧನೆ ಮಾಡಲು ಆಗಮಿಸುವ ದೇಶೀಯ ಮತ್ತು ವಿದೇಶೀಯ ಸಂಶೋಧಕರಿಗಾಗಿ ಎಲ್ಲಾ ಅನುಕೂಲಗಳನ್ನು ಹೊಂದಿರುವ ವಸತಿನಿಲಯಗಳೂ ಇವೆ.

ಪ್ರಸ್ತುತ 'ಸಂಸ್ಕೃತ ಸಂಶೋಧನಾ ಸಂಸತ್' ಎಂಬ ನಾಮಾಂಕಿತ ಹೊಂದಿರುವ ಈ ಸ್ವಾಯತ್ತ ಸಂಸ್ಥೆ ಆಡಳಿತ ಮಂಡಳಿಯ ಮಾರ್ಗದರ್ಶನದಲ್ಲಿ ನಡೆಯುತ್ತಿದೆ. ಭಾರತ ಸರ್ಕಾರ ಈ ಸಂಸ್ಥೆಯನ್ನು ವೈಜ್ಞಾನಿಕ ಮತ್ತು ಕೈಗಾರಿಕಾ ಸಂಶೋಧನಾ ಸಂಸ್ಥೆ ಎಂದು ಪರಿಗಣಿಸಿದೆ. ಸ್ವಾಭಾವಿಕ ಭಾಷಾ ಸಂಸ್ಕರಣ (NLP) ಕ್ಷೇತ್ರದಲ್ಲಿ ಗಣಕಯಂತ್ರದ ಮೂಲಕ ಸಂಶೋಧನೆ ನಡೆಸಿ ಸುಮಾರು ೨೦ ತಂತ್ರಾಂಶಗಳನ್ನು (ಸಾಫ್ಟ್‌ವೇರ್) ಸಂಸ್ಥೆ ಸಿದ್ಧಪಡಿಸಿದೆ. ಸಂಸ್ಕೃತ ಭಾಷಾಸಕ್ತರಿಗೆ 'ಸಂಸ್ಕೃತ ವಿನೋದ' ಹಾಗೂ ಉನ್ನತ ಕಲಿಕೆಗೆ 'ಅಮರಕೋಶ ಆಧ್ಯಾಪಿಕಾ' ತಂತ್ರಾಂಶಗಳನ್ನೂ ಸಿದ್ಧಪಡಿಸಿದೆ. ಸಂಶೋಧನಾಸಕ್ತರಾದ ಹಲವಾರು ವಿದ್ವಾಂಸರು ಇಲ್ಲಿ ಪ್ರಮುಖವಾದ ಯೋಜನೆಗಳನ್ನು ಹಮ್ಮಿಕೊಂಡು ಕಾರ್ಯೋನ್ಮುಖರಾಗಿದ್ದಾರೆ. ವಿಶಿಷ್ಟಾದ್ವೈತಕ್ಕೆ ಸಂಬಂಧಿಸಿದ ೧೧ ರಿಂದ ೧೮ನೇ ಶತಮಾನದ ಅವಧಿಯ ಸುಮಾರು ೨೦೦ ಗ್ರಂಥಗಳ ಪುನರ್ವಿಮರ್ಶೆ, ರಾಮಾನುಜ ಗ್ರಂಥಮಾಲೆಯ ಹಾಗೂ ಹದಿನಾಲ್ಕು ಪ್ರಮುಖ ಉಪನಿಷತ್ತುಗಳ ವಿಮರ್ಶಾತ್ಮಕ ಆವೃತ್ತಿಗಳ ಪ್ರಕಟಣೆ, ದ್ವೈತಾದ್ವೈತಗಳ ಗ್ರಂಥಸೂಚಿಗಳ ಪ್ರಕಟಣೆ, ತಿರುವಾಯ್‌ಮೊಳಿ ಮತ್ತು ಈಡುಗಳ ಕನ್ನಡ ಆವತರಣಿಕೆ, ಇವೇ ಮುಂತಾದ ರಚನಾತ್ಮಕ ಕಾರ್ಯಕ್ರಮಗಳನ್ನು ಅಕಾಡೆಮಿ ಹಮ್ಮಿಕೊಂಡಿದೆ.

ತನ್ನೆಲ್ಲ ಕಾರ್ಯಕ್ರಮಗಳನ್ನು ಆಧುನೀಕರಣಗೊಳಿಸುವ ದೃಷ್ಟಿಯಿಂದ ಸಂಸ್ಥೆ ಬೋಧ, ಶೇಯುಶಿ, ಪ್ರಾಜ, ಚೇತನ, ಪಾಣಿನಿ ಹಾಗೂ ಜನನಿ ಮುಂತಾದ ಸಾಫ್ಟವೇರ್‌ಗಳನ್ನು ಸೃಷ್ಟಿಸಿಕೊಂಡು, ಸಂಶೋಧನ ಕಾರ್ಯವನ್ನು ಚುರುಕುಗೊಳಿಸಿದೆ, ಹಾಗೂ ಡಿ.ಟಿ.ಪಿ. ಹಾಗೂ ರೋಟಾ ಆಫ್‌ಸೆಟ್ ಮುದ್ರಣ ಘಟಕಗಳನ್ನು ಹೊಂದಿ, ಪ್ರಕಟಣಾ ಕ್ಷೇತ್ರದಲ್ಲಿ ಸ್ವಾವಲಂಬಿಯಾಗಿದೆ. ಅಕಾಡೆಮಿಯ ಚಟುವಟಿಕೆಗಳು ಇಂಗ್ಲಿಷ್, ಕನ್ನಡ ಮತ್ತು ಸಂಸ್ಕೃತಗಳಲ್ಲಿ ಪ್ರಕಟವಾಗುವ ತ್ರೈಮಾಸಿಕವಾದ 'ನ್ಯೂಸ್ ಲೆಟರ್' ಮೂಲಕ ಸುಮಾರು ೬೦೦೦ ಜನರನ್ನು ತಲುಪುತ್ತಿವೆ. 'ತತ್ವದೀಪ' ವೆಂಬ ಅರ್ಧವಾರ್ಷಿಕ ಸಂಚಿಕೆಯನ್ನೂ ಅಕಾಡೆಮಿ ಹೊರತರುತ್ತಿದೆ.

### ಸ್ನಾತಕೋತ್ತರ ಕೇಂದ್ರ, ಮಂಡ್ಯ

ಮೈಸೂರು ವಿಶ್ವವಿದ್ಯಾಲಯಕ್ಕೆ ಸೇರಿದ ಸ್ನಾತಕೋತ್ತರ ಕೇಂದ್ರ ೧೯೭೨ರ ಅಕ್ಟೋಬರ್ ತಿಂಗಳಿನಲ್ಲಿ ವಿಶ್ವಮಾನವ ಕ್ಷೇತ್ರದಲ್ಲಿ ಪ್ರಾರಂಭವಾಯಿತು. ಪ್ರಸ್ತುತ (೧೯೭೬ ರಿಂದ) ತೂಬಿನಕೆರೆಯಲ್ಲಿ ತನ್ನ ಸ್ವಂತ ಕಟ್ಟಡದಲ್ಲಿ ಕಾರ್ಯನಿರ್ವಹಿಸಿತ್ತಿರುವ ಈ ಸಂಸ್ಥೆಯಲ್ಲಿ ಕನ್ನಡ, ಇಂಗ್ಲಿಷ್ ಹಾಗೂ ಅರ್ಥಶಾಸ್ತ್ರ ವಿಷಯಗಳಲ್ಲಿ ಎಂ.ಎ, ಪದವಿಯನ್ನು, ಸಕ್ಕರೆ ತಂತ್ರಜ್ಞಾನ ಮತ್ತು ಪಾಲಿಮರ್ ವಿಜ್ಞಾನದಲ್ಲಿ ಎಂ.ಎಸ್ಸಿ. ಪದವಿಯನ್ನೂ ನೀಡಲಾಗುತ್ತಿದೆ. ಒಬ್ಬ ನಿರ್ದೇಶಕರ ಆಡಳಿತದಲ್ಲಿ ಇಲ್ಲಿ ೧೨೦ ವಿದ್ಯಾರ್ಥಿ ವಿದ್ಯಾರ್ಥಿನಿಯರು, ೧೫ ಮಂದಿ ವಿವಿಧ ವಿಷಯಗಳ ಪರಿಣತರ ಮಾರ್ಗದರ್ಶನದಲ್ಲಿ ೨೦೦೦–೦೧ನೇ ಸಾಲಿನಲ್ಲಿ ವ್ಯಾಸಂಗ ಮಾಡುತ್ತಿದ್ದರು. ವಿದ್ಯಾರ್ಥಿ ಹಾಗೂ ವಿದ್ಯಾರ್ಥಿನಿಯರಿಗೆ ಪ್ರತ್ಯೇಕ ಹಾಸ್ಟೆಲ್ ವ್ಯವಸ್ಥೆಯೊಂದಿಗೆ ಹಿಂದುಳಿದ ವರ್ಗದವರಿಗಾಗಿಯೇ ಒಂದು ವಸತಿನಿಲಯ ಇಲ್ಲಿ ಕಾರ್ಯನಿರ್ವಹಿಸುತ್ತಿದೆ.

## ಗ್ರಂಥಾಲಯಗಳು

ಜಿಲ್ಲಾ ಕೇಂದ್ರ ಸ್ಥಳವಾದ ಮಂಡ್ಯದಲ್ಲಿ ೧೯೪೦ ರಲ್ಲಿಯೇ ೮೦೦೦ ಗ್ರಂಥಗಳನ್ನು ಹೊಂದಿದ್ದ ಸಾರ್ವಜನಿಕ ಗ್ರಂಥಾಲಯವೊಂದು ಸ್ಥಾಪನೆಗೊಂಡಿದ್ದು, ಸಮಿತಿಯೊಂದರ ಮೂಲಕ ಅದರ ಆಡಳಿತ ನಡೆಯುತ್ತಿತ್ತೆಂದು ತಿಳಿದುಬರುತ್ತದೆ. ಇದೇ ಕಾಲಕ್ಕೆ ,ಮಂಡ್ಯದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಒಂದು ಖಾಸಗಿ ಗ್ರಂಥಾಲಯ ಸುಮಾರು ೬೦೦೦ ಪುಸ್ತಕಗಳನ್ನು (೧೨೫ ಉರ್ದು ಪುಸ್ತಕ ಸೇರಿ) ಹೊಂದಿದ್ದು, ಸರ್ಕಾರದಿಂದ ೫೦೦.೦೦ ರೂ.ಗಳ ವಾರ್ಷಿಕ ಅನುದಾನ ಪಡೆಯುತ್ತಿದ್ದಿತು. ಆದರೆ ಇದಕ್ಕಿಂತ ಮೊದಲೇ ಮೇಲುಕೋಟೆಯಲ್ಲಿ ೧೯೩೫ರಲ್ಲಿ ಸುಮರು ೫೦೦೦ ವಿವಿಧ ಭಾಷೆಗಳ ಗ್ರಂಥಗಳನ್ನು ಹೊಂದಿದ್ದ ಸಾರ್ವಜನಿಕ ಗ್ರಂಥಾಲಯವೊಂದಿದ್ದಿತೆಂದೂ, ಇದು ೧೫ ಜನರ

ಸಮಿತಿಯ ನಿರ್ವಹಣೆಗೆ ಒಳಪಟ್ಟಿತ್ತೆಂದೂ, ಇದರಲ್ಲಿ ಕನ್ನಡವೇ ಅಲ್ಲದೇ ಆಂಗ್ಲ, ತಮಿಳು ಹಾಗೂ ಹಿಂದಿ ಭಾಷೆಗಳ ಪುಸ್ತಕಗಳು ಲಭ್ಯವಿದ್ದುವೆಂದೂ ತಿಳಿದುಬರುತ್ತದೆ. ಈ ಗ್ರಂಥಾಲಯ ೧೯೬೫ರ ವೇಳೆಗೆ ಹೊಂದಿದ್ದ ಪುಸ್ತಕಗಳ ಸಂಖ್ಯೆ ಸುಮಾರು ೪೬೦೦ ಆಗಿದ್ದು, ಇದಕ್ಕೆ ಸರ್ಕಾರದ ಹಾಗೂ ಮೇಲುಕೋಟೆ ಪಟ್ಟಣ ಮುನಿಸಿಪಾಲಿಟಿಗಳ ಅನುದಾನ ದೊರೆಯುತ್ತಿದ್ದಿತೆಂದೂ ತಿಳಿದುಬರುತ್ತದೆ.

೧೯೬೫ರಲ್ಲಿ ಜಾರಿಯಾದ ಸಾರ್ವಜನಿಕ ಗ್ರಂಥಾಲಯ ಕಾಯ್ದೆಗಳ ಉಪ ವಿಧಿಗಳನ್ವಯ ಮಂಡ್ಯನಗರದಲ್ಲಿ ೨-೮-೧೯೭೫ರಂದು ಜಿಲ್ಲಾ ಕೇಂದ್ರ ಗ್ರಂಥಾಲಯ ಸ್ಥಾಪನೆಯಾಯಿತು. ತದನಂತರ ತಾಲೂಕು ಗ್ರಂಥಾಲಯಗಳಲ್ಲಿ ಗ್ರಂಥಾಲಯ ಶಾಖೆಗಳು, ಸೇವಾ ಕೇಂದ್ರಗಳು ಹಾಗೂ ಗ್ರಂಥ ವಿತರಣಾ ಕೇಂದ್ರಗಳು ಸರ್ಕಾರದ ಯೋಜನೆಯಂತೆ ಪ್ರಾರಂಭಗೊಂಡು ನಗರ ಹಾಗೂ ಗ್ರಾಮೀಣ ಪ್ರದೇಶಗಳ ಮಂದಿಗೆ ಓದುವ ಅವಕಾಶ ಒದಗಿಸಿಕೊಟ್ಟಿವೆ. ೧೯೭೮ರ ಅಂತ್ಯಕ್ಕೆ ಮಳವಳ್ಳಿ, ಮದ್ದೂರು, ನಾಗಮಂಗಲ, ಕೃಷ್ಣರಾಜಪೇಟೆ, ಪಾಂಡವಪುರ ಹಾಗೂ ಶ್ರೀರಂಗಪಟ್ಟಣಗಳಲ್ಲಿ ಗ್ರಂಥಾಲಯಗಳನ್ನು ಪ್ರಾರಂಭಿಸಲಾಯಿತು.

ಗ್ರಾಮೀಣ ಗ್ರಂಥಾಲಯ ಯೋಜನೆ ೧೯೮೫ರಲ್ಲಿ ಅಸ್ತಿತ್ವಕ್ಕೆ ಬಂದಿತು. ಇದರಂತೆ ಮಂಡಲಕ್ಕೊಂದರಂತೆ ಗ್ರಂಥಾಲಯಗಳು ಪ್ರಾರಂಭಗೊಂಡು, ಪ್ರಸ್ತುತ (೨೦೦೦-೦೧) ೯೯ ಗ್ರಾಮ ಪಂಚಾಯಿತಿ ಗ್ರಂಥಾಲಯಗಳು ಜಿಲ್ಲೆಯಾದ್ಯಂತ ಕಾರ್ಯನಿರ್ವಹಿಸುತ್ತಿವೆ. ಎಲ್ಲಾ ಗ್ರಂಥಾಲಯಗಳಲ್ಲಿ ಉಚಿತ ಓದುವ ವ್ಯವಸ್ಥೆ ಮಾಡಲಾಗಿದ್ದು ದಿನಪತ್ರಿಕೆಗಳು, ನಿಯತಕಾಲಿಕೆಗಳು, ರಾಜ್ಯಪತ್ರಗಳು, ಎಂಪ್ಲಾಯ್ಮೆಂಟ್ ನ್ಯೂಸ್ ತರಹದ ಪತ್ರಿಕೆಗಳು, ಸಾಮಾನ್ಯ ಜ್ಞಾನದ ಪುಸ್ತಕಗಳು, ಹಾಗೂ ಇತರೆ ಶೈಕ್ಷಣಿಕ ಸಾಮಗ್ರಿಗಳನ್ನು ಒದಗಿಸಲಾಗಿದೆ. ಹಲವೆಡೆ ಪರಾಮರ್ಶನ ವಿಭಾಗಗಳನ್ನೂ ತೆರೆಯಲಾಗಿದೆ.

## ಕ್ರೀಡೆ

ಕೃಷಿ, ರಾಜಕೀಯ ಹಾಗೂ ಸಾಹಿತ್ಯ ಕ್ಷೇತ್ರಗಳಲ್ಲಿ ರಾಜ್ಯಕ್ಕೆ ಮಹತ್ತರ ಕಾಣಿಕೆ ನೀಡಿರುವ ಮಂಡ್ಯ ಜಿಲ್ಲೆ ಕ್ರೀಡಾ ಕ್ಷೇತ್ರದಲ್ಲಿಯೂ ಹಿಂದೆ ಬಿದ್ದಿಲ್ಲ. ಪ್ರಾಚೀನ ಕಾಲದ ಹಲವಾರು ಜಾನಪದ ಆಟಗಳು ಜಿಲ್ಲೆಯಲ್ಲಿ ಪ್ರಚಲಿತವಿವೆ. ಏತನ್ಮಧ್ಯೆ ಕೆಲವು ಹೊಸ ಆಟಗಳೂ ಹುಟ್ಟಿಕೊಂಡಿವೆ. ಆದಿಮಾನವ ತನ್ನ ಹೊಟ್ಟೆ ಪಾಡಿಗಾಗಿ ನಡೆಸುತ್ತಿದ್ದ ಬೇಟೆ, ಮುಂದೆ ಒಂದು ಕ್ರೀಡೆಯಾಗಿ ಬೆಳೆದುದನ್ನು ನೋಡಿದರೆ, ಇಂದಿನ ಹಲವಾರು ಆಟಗಳ ಮೂಲ ಎಷ್ಟು ಹಿಂದಿನದೆಂದು ಊಹಿಸಬಹುದಾಗಿದೆ. ಸಂಸ್ಕೃತಿ ರೂಪುಗೊಂಡಂದಿನಿಂದಲೇ ಕ್ರೀಡೆಗಳೂ ಪ್ರಾರಂಭಾಯಿತೆನ್ನಬಹುದು. ರಾಮಾಯಣ, ಮಹಾಭಾರತಗಳಲ್ಲಿ ಪಗಡೆಯಂತಹ ಹಲವು ಗೃಹ ಕ್ರೀಡೆಗಳ ಉಲ್ಲೇಖವಿದ್ದು, ಚಿಣ್ಣೆ-ದಾಂಡು, ಮಲ್ಲಯುದ್ಧ, ಜಲಯುದ್ಧ, ದೃಷ್ಟಿಯುದ್ಧ, ಗದಾಯುದ್ಧ, ಕತ್ತಿ ವರಸೆ, ಹಾಗೂ ಕುದುರೆ ಸವಾರಿಗಳಂತಹ ಎಲ್ಲವೂ ಕ್ರೀಡೆಗಳ ಪರಿಧಿಯೊಳಕ್ಕೇ ಸೇರುತ್ತವೆ. ಇವಲ್ಲದೆ ಪುರಾಣ ಹಾಗೂ ಪ್ರಾಚೀನ ಕಾವ್ಯಗಳಲ್ಲಿ ಉಲ್ಲೇಖಿಸಿರುವ ಕುದುರೆ ಸವಾರಿ, ಬೇಟೆ, ಧನುರ್ವಿದ್ಯೆ, ಈಜು, ಕತ್ತಿವರಸೆ, ಅಂಗಸಾಧನೆ, ವ್ಯಾಯಾಮಗಳನ್ನು ಕ್ರೀಡೆಗಳೆಂದೇ ಪರಿಗಣಿಸಬಹುದು.

ಹಿಂದಿನ ಕಾಲದ ದೃಷ್ಟಿಯುದ್ಧವು ಕಾಲಕ್ರಮದಲ್ಲಿ ರೆಪ್ಪೆ ಬಡಿದಾಟದ ಹೆಸರಿನಲ್ಲಿ ಮುಂದುವರೆದು, ಜನಪ್ರಿಯ ಗೃಹ ಕ್ರೀಡೆಯಾಯಿತು. ಜಿಲ್ಲೆಯ ಎಲ್ಲೆಡೆ ಪ್ರಚಲಿತವಿದ್ದ ಈ ಆಟಕ್ಕೆ ಇಬ್ಬರ ಅವಶ್ಯಕತೆ ಇದ್ದು, ಟಾಸ್ ಸೋತವರು ರೆಪ್ಪೆಬಡಿಯದೇ ಗೆದ್ದವರನ್ನೇ ದೃಷ್ಟಿಸಿ ನೋಡಬೇಕು. ಪ್ರತಿಸ್ಪರ್ಧಿ ತನ್ನ ತೋರುಬೆರಳು ಅಥವಾ ಕಡ್ಡಿಯನ್ನು ಕಣ್ಣಿನ ಹತ್ತಿರ ತೆಗೆದುಕೊಂಡು ಬಂದಾಗಲೂ ರೆಪ್ಪೆ ಬಡಿಯದಿದ್ದರೆ ಗೆದ್ದಂತೆ. ಹಬ್ಬ ಹರಿದಿನಗಳಂದು ಧಾರ್ಮಿಕ ಸಮಾರಂಭಗಳಂದು ಅಥವಾ ವಿವಾಹ ಮಹೋತ್ಸವಗಳಂದು, ಅನೇಕ ಬಗೆಯ ಆಟಗಳನ್ನೂ, ವಿನೋದಗಳನ್ನೂ

ಏರ್ಪಡಿಸುತ್ತಿದ್ದರು. ಮದುವೆ ದಿನ ವಧು–ವರರ ಮಧ್ಯೆ ಆಡಿಸುವ ಹೂ ಚೆಂಡಾಟ, ನೀರಿನ ಪಾತ್ರೆಯಲ್ಲಿ ಉಂಗುರ ಹುಡುಕಾಟಗಳೂ ಕ್ರೀಡೆಗಳೇ ಆಗಿದ್ದವು. ಗ್ರಾಮದೇವತೆ ಹಬ್ಬಗಳಲ್ಲಿ ಆಡಿಸುವ ಹುಲಿ ವೇಷದ ಕುಣಿತವು ಪ್ರಮುಖ ಮನರಂಜನೆಯು ಕಾರ್ಯಕ್ರಮವಾಗಿದ್ದಿತು. ಪ್ರಮುಖ ಹಬ್ಬಗಳಂದು ಆಡಿಸುವ ಕೋಲಾಟ, ಇನ್ನೂ ರೂಢಿಯಲ್ಲಿದೆ. ಯುಗಾದಿ ಹಬ್ಬದ ಪ್ರಯುಕ್ತ ಆಡುವ ಆಟಗಳೆಂದರೆ ಚೌಕಾಬಾರ, ಪಗಡೆ, ಅಳಗುಳಿಮನೆ, ಹುಲಿ ಕುರಿಯಾಟ, ಇತ್ಯಾದಿ. ಗ್ರಾಮದೇವತೆ ಹಬ್ಬಗಳಲ್ಲಿ ಕೋಳಿ ಕಾಳಗ, ಗೂಳಿ ಕಾಳಗ, ಕೆಸರಿನ ಓಟ, ಮುಂತಾದ ಸ್ಪರ್ಧಾತ್ಮಕ ಆಟಗಳನ್ನೂ ಆಡಿಸುತ್ತಾರೆ.

ಜಿಲ್ಲೆಯ ಸ್ಥಳೀಯ ಕ್ರೀಡೆಗಳಲ್ಲಿ ತಾಲೂಕಿನಿಂದ ತಾಲೂಕಿಗೆ ಹೆಚ್ಚಿನ ವ್ಯತ್ಯಾಸ ಕಂಡು ಬರುವುದಿಲ್ಲ. ಲಿಂಗ, ವಯಸ್ಸುಗಳ ಭೇದದಿಂದ ಆಟಗಳನ್ನು ಈ ರೀತಿ ವಿಂಗಡಿಸಬಹುದು.

**ಹೆಣ್ಣು ಮಕ್ಕಳ ಆಟಗಳು:** ಕುಂಟೆಬಿಲ್ಲೆ, ಆಣೆಕಲ್ಲಾಟ, ಕಂಬದಾಟ, ಹಗ್ಗದಾಟ, ಬಳೇಗಾಜಾಟ, ಕುಂಟಾಟ, ಗಿರಿಗಿಟ್ಲೆ, ಅಚ್ಚಚ್ಚು–ಬೆಲ್ಲದಚ್ಚು, ಕುಕ್ಕರ ಬಸವಿ ಹಾಗೂ ಜೂಟಾಟ.

**ಗಂಡು ಮಕ್ಕಳ ಆಟಗಳು:** ಲಗೋರಿ, ಮರಕೋತಿ, ಗುಲ್ಬೋರಿಯೋ, ಐಸ್ ಪೈಸ್, ಚಿನ್ನಿದಾಂಡು, ಬುಗುರಿ, ಗೋಲಿ, ಹುಂಜ–ಹ್ಯಾಟೆ, ಕಳ್ಳ–ಪೋಲೀಸ್ ಹಾಗೂ ಮೈಸೂರು ಚೆಂಡು.

**ದೊಡ್ಡವರ ಆಟಗಳು;** ಪಗಡೆ, ಚದುರಂಗ, ಇಸ್ಪೀಟ್, ಅಟ್ಟಗುಳಿ, ಚೌಕಾಬಾರ, ಹಾವು–ಏಣಿ ಆಟ, ಕುರಿಯಾಟ, ಇತ್ಯಾದಿ.

**ಮಕ್ಕಳ ಆಟಗಳು:** ಕುಂತಿ–ನಿಂತಿ, ಕಣ್ಣುಕಟ್ಟಾಟ, ಹಸು–ಹುಲಿ, ಸರಾಫ್ ಆಟ, ಮನೆಯಾಟ, ಗೊಂಬೆಯಾಟ, ಇತ್ಯಾದಿ.

ಇವಲ್ಲದೆ ಹದಿವಯಸ್ಕರ ಸಾಹಸದ ಆಟಗಳಾದ ದೊಣ್ಣೆವರಸೆ, ಕತ್ತಿ ವರಸೆ, ಕುಸ್ತಿ, ಬಿಲ್ಲುಬಾಣ, ಮುಂತಾದವೂ ಆಡಲ್ಪಡುತ್ತವೆ.

ಮೇಲಿನ ಆಟಗಳಲ್ಲಿ ಹಲವು ಇಬ್ಬರನ್ನು ಮತ್ತೆ ಹಲವು ನಾಲ್ವರನ್ನು ಹಾಗೂ ಇನ್ನೂ ಕೆಲವು ಗುಂಪುಗಳನ್ನೂ ಒಳಗೊಂಡಿರುತ್ತವೆ. ಹಲವಾರು ಆಟಗಳನ್ನು ಆಡುವಾಗ ಹಾಡುಗಳನ್ನೂ ಹೇಳುವುದುಂಟು. ಕೋಲಾಟದಲ್ಲಿ ಜಡೆ ಕೋಲಾಟ, ಉಯ್ಯಾಲೆ ಕೋಲಾಟ, ಇತ್ಯಾದಿ ವಿಧಗಳಿದ್ದು, ಸಾಮಾನ್ಯವಾಗಿ ಇವುಗಳನ್ನು ಹಾಡುಗಳ ಸಮೇತವೇ ಆಡುತ್ತಾರೆ. ಈ ಸರಳ ಸುಂದರ ಹಾಡು ಮತ್ತು ಗೀತೆಗಳನ್ನು ಆಟಗಾರರಿಗೆ ಹಾಗೂ ಮಕ್ಕಳಿಗೆ ಬಾಯಿಪಾಠ ಮಾಡಿಸುವ ಶೈಕ್ಷಣಿಕ ಉದ್ದೇಶವನ್ನೂ ಇಲ್ಲಿ ಕಾಣಬಹುದಾಗಿದೆ.

### ಜನಪದ ಆಟಗಳ ಮೂಲ

ಜನಪದ ಆಟಗಳ ಹುಟ್ಟಿನ ಬಗ್ಗೆ ವ್ಯಾಖ್ಯಾನಿಸುವುದು ಕಷ್ಟದ ಕೆಲಸ. ಇವು ಬಹುಶಃ ಹಿರಿಯರಿಂದ ಮಕ್ಕಳಿಗೆ ಬಂದಿರಬಹುದು. ಸಾಮಾನ್ಯವಾಗಿ ಜನಪದರಲ್ಲಿ ಅವಿಭಕ್ತ ಕುಟುಂಬಗಳಿದ್ದು, ಹತ್ತಾರು ಮಕ್ಕಳೂ ಹತ್ತಾರು ಹಿರಿಯರೂ, ಅವುಗಳಲ್ಲಿ ಇರುತ್ತಿದ್ದರು. ಆ ಕಾಲಕ್ಕೆ ಶಾಲೆಗಳ ಸಂಖ್ಯೆ ಕಡಿಮೆ ಇದ್ದು, ಇದ್ದ ಶಾಲೆಗಳಿಗೂ ಹೆಚ್ಚು ಜನ ಹೋಗುತ್ತಿರಲಿಲ್ಲ. ದಿನದ ಹೆಚ್ಚು ಕಾಲವನ್ನು ಮಕ್ಕಳು ಮನೆಗಳಲ್ಲಿಯೇ ಕಳೆಯುತ್ತಿದ್ದುದರಿಂದ ಅವರ ಕಾಲ ವ್ಯಥಾ ಹರಣವಾಗುವ ಬದಲು ಪದ್ಯ ಗೀತೆಗಳನ್ನೊಳಗೊಂಡ ಜನಪದ ಆಟಗಳನ್ನು ಹಿರಿಯರು ಹೇಳಿಕೊಡುತ್ತಿದ್ದರು. ಕೆಲವು ಆಟಗಳನ್ನು ಹಿರಿಯರೇ ರೂಪಿಸಿಕೊಂಡಿದ್ದಿರಲೂಬಹುದು.

ಈ ಜನಪದ ಆಟಗಳ ಮುಖ್ಯ ಅನುಕೂಲವೆಂದರೆ, ಇವುಗಳನ್ನು ಆಡಲು ಯಾವುದೇ ಖರ್ಚುವೆಚ್ಚಗಳಿಲ್ಲ. ಉಪಕರಣಗಳ ಅವಶ್ಯಕತೆ ಇಲ್ಲ. ಸಮಾಜದ ಎಲ್ಲ ಸ್ತರಗಳವರೂ ಇವುಗಳನ್ನು ಆಡಬಹುದು. ನಾಗರಿಕ ಕ್ರೀಡೆಗಳಲ್ಲಿರುವಂತೆ ಹಣ ಕೊಟ್ಟು ಸಲಕರಣೆಗಳನ್ನು ಕೊಳ್ಳಬೇಕಿಲ್ಲ.

**ಜನಪದ ಮನರಂಜನೆ**

ಮಂಡ್ಯ ಜಿಲ್ಲೆ ಜನಪದ ಕಲೆ ಹಾಗೂ ಮನರಂಜನಾ ಕಾರ್ಯಕ್ರಮಗಳ ತವರೂರು. ಜಿಲ್ಲೆಯ ಎಲ್ಲೆಡೆ ಕೋಲಾಟ, ರಂಗದ ಕುಣಿತ, ಮಾರಿ ಕುಣಿತ, ಗುಡ್ಡದ ಕುಣಿತ, ಲಿಂಗದ ಬೀರರ ಕುಣಿತ, ಖಡ್ಗ ಕುಣಿತ, ವೀರ ಮಕ್ಕಳ ಕುಣಿತ, ನಂದೀ ಧ್ವಜ ಕುಣಿತ, ಹನ್ನೆರಡು ಸೆರಗಿನ ನೃತ್ಯ, ಪಂಜಿನ ಕುಣಿತ, ಪಟ ಕುಣಿತ, ವೀರಗಾಸೆ, ಸೋಮನ ಕುಣಿತ, ಬೀಸು ಕಂಸಾಳೆ ಕುಣಿತ, ಒನಕೆ ನೃತ್ಯ, ಪೂಜಾ ಕುಣಿತ, ಕತ್ತಿ ಪವಾಡ, ಹುಲಿ ವೇಷ, ಪಾಳೇಗಾರ ನೃತ್ಯ, ಹಲಗೆ ನೃತ್ಯ, ನೀಲಗಾರರ ಮೇಳ, ಕಂಸಾಳೆ ಮೇಳ, ಹೆಳವರ ಮೇಳ, ಬುರ್ರ ಕಥೆ (ಆಂಧ್ರದವರ ಮಾದರಿ), ದೊಂಬಿದಾಸರ ಮೇಳ ಮುಂತಾದ ವೃತ್ತಿಗಾಯಕ ಹಾಗೂ ಇತರ ರಂಗಕಲೆಗಳಿಗೆ ಸಂಬಂಧಿಸಿದ ಮನರಂಜನಾ ವೈವಿಧ್ಯಗಳು ಪ್ರಚಲಿತವಿವೆ. ಇವಲ್ಲದೆ, ಕೀಲು ಕುದುರೆ ಕುಣಿತ, ಕರಡಿ ಕುಣಿತ, ಬಿಜಲಿ ವರಸೆ, ಬೆಂಕಿ ಭರಾಟೆ, ಗಾರುಡಿ ಗೊಂಬೆ ಹಾಗೂ ಮರಗಾಲು ಕಲಾವಿದರೂ ಕಾಣಸಿಗುತ್ತಾರೆ. ರಾಜ್ಯದ ಹಲವೆಡೆ ನಶಿಸಿಹೋಗುತ್ತಿರುವ ಮನರಂಜನಾ ಕಲೆಗಳಾದ ತೊಗಲು ಗೊಂಬೆಯಾಟ, ಸೂತ್ರದ ಗೊಂಬೆಯಾಟ, ಹಾಗೂ ಯಕ್ಷಗಾನ ಬಯಲಾಟಗಳು ಜಿಲ್ಲೆಯಲ್ಲಿ ಇಂದಿಗೂ ಪ್ರಚಲಿತವಿವೆ.

ಹಲವಾರು ನಾಗರಿಕ ಕ್ರೀಡೆಗಳ ಮೂಲ ಈ ಜನಪದ ಕ್ರೀಡೆಗಳೇ ಎಂಬುದನ್ನು ಅಲ್ಲಗಳೆಯುವಂತಿಲ್ಲದಿದ್ದರೂ, ನಾಗರಿಕ ಕ್ರೀಡೆಗಳು ಹೆಚ್ಚು ಜನಪ್ರಿಯಗೊಳ್ಳುತ್ತಿದ್ದು, ಜನಪದಕ್ರೀಡೆಗಳು ಮರೆಯಾಗುತ್ತಿರುವುದನ್ನು ನಾವಿಂದು ಕಾಣಬಹುದಾಗಿದೆ. ಜಿಲ್ಲೆಯಲ್ಲಿ ಜನಪ್ರಿಯವಾಗಿರುವ ಅಂತಹ ಹಲವು ಮನರಂಜನಾ ಪ್ರಕಾರಗಳನ್ನು ಈ ಮುಂದೆ ವಿವರಿಸಲಾಗಿದೆ.

ಸುಮಾರು ೧೮-೨೦ ಅಡಿ ಉದ್ದದ ಬಿದಿರಿನ ಗಳುವಿಗೆ ಬಣ್ಣದ ಬಟ್ಟೆ ಸುತ್ತಿ, ಅದರ ಸುತ್ತ ರೇಷ್ಮೆ ಜಾಲರಿಗಳನ್ನು ಸುತ್ತಿ, ತುದಿಗೆ ಬಣ್ಣದ ಕುಚ್ಚು ಕಟ್ಟಿ, ಅಲಂಕರಿಸಿದ ಲಾಂಛನಕ್ಕೆ ಪಟ ಎನ್ನುತ್ತಾರೆ. ಇದನ್ನು ಬಟ್ಟೆಯ ಸಹಾಯದಿಂದ ದೇಹಕ್ಕೆ ಸಿಕ್ಕಿಸಿಕೊಂಡು ತಮಟೆ ಮತ್ತು ನಗಾರಿಯ ತಾಳಕ್ಕೆ ತಕ್ಕಂತೆ ಕುಣಿಯುವುದನ್ನೇ ಪಟದ ಕುಣಿತ ಎನ್ನುತ್ತಾರೆ. ಗ್ರಾಮದೇವತೆಗಳ ಹಬ್ಬ ಹಾಗೂ ಜಾತ್ರೆಗಳ ಸಂದರ್ಭದಲ್ಲಿ ಪಟ ಕುಣಿತದ ಕಲಾವಿದರು ವಿಶಿಷ್ಟ ವೇಷ ಧರಿಸಿ, ಒಂಟಿ ಸಾಲು, ಎದುರು ಬದುರು ಸಾಲು ಅಥವಾ ವೃತ್ತಾಕಾರದಲ್ಲಿ ಹೆಜ್ಜೆ ಹಾಕುತ್ತಾರೆ. ನಾಗಮಂಗಲ ತಾಲೂಕಿನ ಭೈರಸಂದ್ರ, ಎಲೆಕೊಪ್ಪ, ಕರಿಜೀರಹಳ್ಳಿ, ಕಂಬದ ಹಳ್ಳಿ, ಕಳ್ಳಿಗುಂದಿ ಅಲ್ಲದೆ, ಮಳವಳ್ಳಿ, ಶ್ರೀರಂಗಪಟ್ಟಣ ಹಾಗೂ ಪಾಂಡವಪುರ ತಾಲೂಕುಗಳ ಹಲವು ಹಳ್ಳಿಗಳಲ್ಲಿಯೂ ಈ ಕಲೆ ಪ್ರಚಲಿತವಿದೆ.

ಮಂಡ್ಯ ಜಿಲ್ಲೆಯಲ್ಲಿ ಕಂಡುಬರುವ ಮತ್ತೊಂದು ಜನಪ್ರಿಯ ಮನರಂಜನೆ ನಂದಿಧ್ವಜ ಕುಣಿತ. ಮಾರಿಹಬ್ಬ ಅಥವಾ ಕೊಂಡದಹಬ್ಬಗಳಂದು ಜಿಲ್ಲೆಯ ಹಲವೆಡೆ ಆಚರಿಸಲ್ಪಡುವ ಈ ಕುಣಿತದಲ್ಲಿ ಚಕ್ರಾದಿ ಬಳೆ ವಾದ್ಯದ ತಾಳಕ್ಕೆ ನಿರ್ದಿಷ್ಟವೇಷವಿಲ್ಲದೆ ನರ್ತಕರು ನೃತ್ಯ ಮಾಡುತ್ತಾರೆ. ಪಂಜಿನ ಕುಣಿತ ಜಿಲ್ಲೆಯ ಜನಪ್ರಿಯ ಕಲೆ. ತ್ರಿಶೂಲಾಕಾರದ ಕಬ್ಬಿಣದ ಸರಳಿಗೆ ಬಟ್ಟೆ ಸುತ್ತಿ. ಹರಳೆಣ್ಣೆ ಅಥವಾ ಹಿಪ್ಪೆ ಎಣ್ಣೆಯಿಂದ ಅದನ್ನು ನೆನೆಸಿ ಪಂಜನ್ನು ಮಾಡಲಾಗುತ್ತದೆ. ಕಲಾವಿದರು ಕಾಲಿಗೆ ಗೆಜ್ಜೆ ಕಟ್ಟಿ ಇಂತಹ ಪಂಜನ್ನು ಹಿಡಿದು ತಿರುಪತಿ ವೆಂಕಟರಮಣದ ಹೆಸರಿನಲ್ಲಿ ದೀವಟಿಗೆ ಸೇವೆ ಮಾಡುತ್ತಾರೆ. ಇವರ ಕುಣಿತಕ್ಕೆ ಹಲಗೆ ಸೇವೆ ಇರುತ್ತದೆ.

ಧಾರ್ಮಿಕ ಹಿನ್ನೆಲೆಯ ಸೋಮನ ಕುಣಿತ ಶಕ್ತಿ ದೇವತೆಗಳಿಗೆ ಸಂಬಂಧಿಸಿದ ನೃತ್ಯ. ಸೋಮ ಒಂದು ಮರದ ಮುಖವಾಡ. ಇದನ್ನು ಕಲಾವಿದರು ಧರಿಸಿ, ವಿಶೇಷವಾಗಿ ಸೀರೆ ಉಡುಪನ್ನು ಕಟ್ಟಿಕೊಂಡು, ಕೈಯಲ್ಲಿ ಬೆತ್ತ ಹಿಡಿದು, ತಮಟೆ ಹಾಗೂ ಕೋಲುಗಳ ಹಿನ್ನೆಲೆಯಲ್ಲಿ ಚಾವಟಿ ಹಿಡಿದ ಪೂಜಾರಿಯ ಸುತ್ತ ನರ್ತಿಸುತ್ತಾರೆ. ಈ ಕಲಾವಿದರು ಹಲವು ಧಾರ್ಮಿಕ ಕಟ್ಟುಪಾಡುಗಳಿಗೆ ಒಳಗಾಗಿರುತ್ತಾರೆ.

ಗ್ರಾಮದೇವತೆಯ ಉತ್ಸವ ಮೂರ್ತಿಯನ್ನು ಬಿದಿರಿನ ತಳಿಗೆ ಕಟ್ಟಿ ಹೊತ್ತು ಕುಣಿಯುವ ಪೂಜಾ ಕುಣಿತ ಸಾಮಾನ್ಯವಾಗಿ ಜಿಲ್ಲೆಯ ಎಲ್ಲೆಡೆ ಪ್ರಚಲಿತವಿದೆ. ಹಲವು ಕಸರತ್ತು ಮತ್ತು ಚಮತ್ಕಾರಗಳನ್ನು ಈ ಕಲಾವಿದರು ಪ್ರದರ್ಶಿಸುತ್ತಾರೆ. ಮಳವಳ್ಳಿ, ಮದ್ದೂರು, ಕೃಷ್ಣರಾಜಪೇಟೆ, ನಾಗಮಂಗಲ ಹಾಗೂ ಶ್ರೀರಂಗಪಟ್ಟಣ ತಾಲೂಕುಗಳ ಹಳ್ಳಿಗಳಲ್ಲಿ ಪೂಜಾ ಕುಣಿತ ಜನಪ್ರಿಯ ಕಲೆಯಾಗಿದೆ.

ಆರು ಅಡಿ ಎತ್ತರದ ಒನಕೆಗೆ ಎರಡು ಬದಿ ಲೋಹದ ಅಣಸು (ಬಳೆ) ಹಾಕಿ ಪೂರ್ವಾಭ್ಯಾಸದಿಂದ ತಲೆಯ ಮೇಲೆ ಕೂರಿಸಿಕೊಂಡು, ಅದಕ್ಕೆ ಅರಿಶಿನ, ಕುಂಕುಮ ಹಾಗೂ ಹೂಗಳಿಂದ ಅಲಂಕಾರ ಮಾಡಿ, ಅದರ ಮೇಲೆ ದೀಪವಿಟ್ಟು, ಆ ದೀಪ ಆರದಂತೆ ಕುಣಿಯುವ ನೃತ್ಯವೇ ಒನಕೆ ಕುಣಿತ.

ಜಿಲ್ಲೆಯ ಮಳವಳ್ಳಿ ತಾಲೂಕಿನ ತಳಗವಾದಿ ಗ್ರಾಮದಲ್ಲಿ ಮಾತ್ರ ಕಾಣಸಿಗುವ ಕಲೆ ಹನ್ನೆರಡು ಸೆರಗಿನ ಕುಣಿತ. ಇದನ್ನು ಗ್ರಾಮದೇವತೆ ಉಮಾಮಹೇಶ್ವರಿ ಹಬ್ಬದಲ್ಲಿ ಆಚರಿಸಲಾಗುತ್ತದೆ. ಅಲಂಕೃತವಾದ ಹೊಂಬಾಳೆ ಹೊತ್ತ ವ್ಯಕ್ತಿಯ ಸುತ್ತಲೂ ಹನ್ನೆರಡು ಜನ ಬಣ್ಣದ ಪಟ್ಟೆ (ಸೆರಗು)ಯನ್ನು ಗುಡ್ಡನ ಸೊಂಟಕ್ಕೆ ಕಟ್ಟಿ, ಮತ್ತೊಂದು ತುದಿಯನ್ನು ಬಲಗೈಲಿ ಹಿಡಿದು ವೃತ್ತಾಕಾರದಲ್ಲಿ ತಿರುಗುತ್ತಾ, ತಮಟೆ ವಾದ್ಯಕ್ಕೆ ಕುಣಿಯುತ್ತಾರೆ.

ಜಿಲ್ಲೆಯಾದ್ಯಂತ ಕಂಡು ಬರುವ ಕೋಲಾಟ ನೃತ್ಯವು, ಸಂಗೀತ ಹಾಗೂ ಸಾಹಿತ್ಯಗಳ ಸಮಾಗಮ. ವರ್ಣರಂಜಿತವಾದ ಉಡುಗೆ, ತೊಡುಗೆ ತೊಟ್ಟಿರುವ ಕೋಲಾಟದ ಕಲಾವಿದರು ಸಾಮಾನ್ಯವಾಗಿ ದೇವರ ಉತ್ಸವ, ಜಾತ್ರೆ, ಮದುವೆಯಂತಹ ಸಮಾರಂಭಗಳು, ಬೇಸಿಗೆಯ ಬೆಳದಿಂಗಳ ರಾತ್ರಿಗಳಲ್ಲಿ ಒಂದೆಡೆ ಸೇರಿ, ತಂಡಗಳಲ್ಲಿ ಸ್ಪರ್ಧೆ ನಡೆಸುತ್ತಾರೆ. ಇದನ್ನು ಕಲಿಯಲು ಯಾವುದೇ ಶಿಕ್ಷಣದ ಅವಶ್ಯಕತೆ ಇಲ್ಲದಿರುವುದರಿಂದ ಇದು ಜನಾನುರಾಗಿ ಕ್ರೀಡೆಯಾಗಿದೆ. ಇದರ ಹಾಡುಗಳು ಧಾರ್ಮಿಕ, ಐತಿಹಾಸಿಕ ಹಾಗೂ ಸಾಮಾಜಿಕ ಘಟನೆಗಳನ್ನು ವಸ್ತುವಾಗಿರಿಸಿಕೊಂಡಿರುತ್ತವೆ.

ರಂಗ ಕುಣಿತ ಅಥವಾ ಸುಗ್ಗಿಯ ಕುಣಿತವು ಗ್ರಾಮದೇವತೆಯ ಹಬ್ಬದಲ್ಲಿ ದೇವಸ್ಥಾನದ ಮುಂಭಾಗದ ಬಯಲಿನಲ್ಲಿ ನಡೆಯುತ್ತದೆ. ಸಾಮಾನ್ಯ ಉಡುಗೆ ತೊಡುಗೆ ಹೊಂದಿದ ನೃತ್ಯಕಲಾವಿದರು ಗ್ರಾಮದೇವತೆಗೆ ಸಂಬಂಧಿಸಿದ ಪದಗಳನ್ನು ತಾಳಕ್ಕೆ ಸರಿಯಾಗಿ ಹಾಡುತ್ತಾ ರಂಗದ ಸುತ್ತ ಕುಣಿಯುತ್ತಾರೆ.

ಜಿಲ್ಲೆಯ ಸಬ್ಬನಕುಪ್ಪೆ ಗ್ರಾಮ, ಹಾಗೂ ಕಿರಂಗೂರುಗಳಲ್ಲಿ ದೇವರ ತೇರಮುಂದೆ ಓಕುಳಿ ಮತ್ತು ಕೋಲಾಟಗಳನ್ನಾಡುತ್ತಾರೆ. ರಾಮನವಮಿ ಸಂದರ್ಭದಲ್ಲಿ ರಾಮಪಟ್ಟಾಭಿಷೇಕದ ದಿನ ಮನೆಗಳ ಮುಂದೆ ಓಕಳಿ ನೀರನ್ನು ತುಂಬಿರುತ್ತಾರೆ. ತೇರಿನ ಮುಂದೆ ಕುಣಿಯುತ್ತಾ ಸಾಗುವ ಹಳ್ಳಿಯ ಮಕ್ಕಳ ಗುಂಪು ಈ ನೀರನ್ನು ತಮ್ಮ ತಲೆಯ ಮೇಲೆ ಸುರಿದುಕೊಂಡು ಮುಂದೆ ಸಾಗುತ್ತಾರೆ.

ಜಿಲ್ಲೆಯ ಮತ್ತೊಂದು ಜನಪ್ರಿಯ ಕ್ರೀಡೆ ದೊಣ್ಣೆವರಸೆ. ಆರ್ಥಿಕವಾಗಿ ಹೊರೆಯಾಗದ ಇದನ್ನು ಯಾವ ಯುವಕ ಬೇಕಾದರೂ ಕಲಿಯಬಹುದಾಗಿದ್ದು, ಇದರ ಸಾಧನ ಸಾಮಗ್ರಿ, ಪ್ರಕೃತಿದತ್ತವಾದ ಬಿದಿರಿನ ದೊಣ್ಣೆ ಮಾತ್ರ. ಆತ್ಮರಕ್ಷಣೆಗೆ ಸುಲಭೋಪಾಯವಾದ ಈ ಕ್ರೀಡೆ ಇಡೀ ದೇಹಕ್ಕೆ ವ್ಯಾಯಾಮ ನೀಡುವುದರಿಂದಲೇ ಹೆಚ್ಚು ಹೆಚ್ಚು

ಯುವಕರು ಇದನ್ನು ಕಲಿಯುತ್ತಾರೆ. ಚಾಕಚಕ್ಯತೆಯಿಂದ ದೊಣ್ಣೆವರಸೆ ನಡೆಸಿದರೆ ಒಬ್ಬನೇ ವ್ಯಕ್ತಿ ಹಲವಾರು ಜನರನ್ನು ಒಟ್ಟಿಗೇ ಎದುರಿಸಬಹುದಾಗಿದ್ದರಿಂದ ಇದು ಆತ್ಮಸ್ಥೈರ್ಯವನ್ನೂ ನೀಡುವ ಕ್ರೀಡೆಯಾಗಿದೆ. ಇದಲ್ಲದೆ, ಕತ್ತಿವರಸೆ, ಬಿಜಲಿವರಸೆ ಮತ್ತು ಬೆಂಕಿಭರಾಟೆಗಳೂ ಜಿಲ್ಲೆಯ ಹಲವೆಡೆ ಪ್ರಚಲಿತವಿವೆ.

## ಜಿಲ್ಲೆಯ ಕ್ರೀಡಾ ಪ್ರತಿಭೆ

ಜಿಲ್ಲೆಯ ಕ್ರೀಡಾಪಟುಗಳು ತಮ್ಮ ಸ್ವಂತ ಪ್ರತಿಭೆ ಹಾಗೂ ವೈಯಕ್ತಿಕ ಶಕ್ತಿ ಸಾಮರ್ಥ್ಯಗಳಿಂದ ಮಂಡ್ಯ ಜಿಲ್ಲೆಗೆ ದೇಶದ ಕ್ರೀಡಾ ಭೂಪಟದಲ್ಲಿ ಒಂದು ಉತ್ತಮ ಸ್ಥಾನ ಕಲ್ಪಿಸಿದ್ದಾರೆ. ಇವರಲ್ಲಿ ಮೊದಲಿಗರೆಂದರೆ ಆದಿಚುಂಚನಗಿರಿ ಇಂಜಿನಿಯರಿಂಗ್ ಕಾಲೇಜಿನ ಪ್ರಿನ್ಸಿಪಾಲರಾಗಿದ್ದ ಅಥ್ಲೀಟ್ ಎಸ್. ಟಿ. ನಾಗರಾಜ್. ಇವರು ೧೯೫೨ ಹಾಗೂ ೧೯೫೭ರಲ್ಲಿ ಅಖಿಲ ಭಾರತ ಮಟ್ಟದ ಕ್ರೀಡಾಕೂಟದಲ್ಲಿ ಭಾಗವಹಿಸಿ ಬೆಳ್ಳಿ ಪದಕ ಪಡೆದಿದ್ದರು. ವೇಗದ ನಡಿಗೆ ಪಂದ್ಯದಲ್ಲಿ ಇವರ ದಾಖಲೆ ಚಿರಸ್ಥಾಯಿಯಾಗಿದೆ. ನಾಗಮಂಗಲದ ಎಸ್. ರಾಮೇಗೌಡರು ಇದೇ ಕ್ರೀಡಾಕೂಟದಲ್ಲಿ ೧೫೦೦ ಮೀಟರ್ ನಡಿಗೆ ಸ್ಪರ್ಧೆಯಲ್ಲಿ ಪ್ರಶಸ್ತಿಗಳಿಸಿದ್ದರು. ಮೇಲ್ಕಂಡ ಇಬ್ಬರೂ ಸಿಯೋಲ್‌ನಲ್ಲಿ ನಡೆದ ಅಂತರ ರಾಷ್ಟ್ರೀಯ ಒಲಿಂಪಿಕ್ಸ್‌ನಲ್ಲಿ ಪ್ರಶಸ್ತಿ ವಿಜೇತರಾಗಿರುತ್ತಾರೆ. ಅಖಿಲ ಭಾರತ ಒಲಿಂಪಿಕ್ಸ್ ಪ್ರಶಸ್ತಿ ವಿಜೇತ ಆರ್. ಸ್ವಾಮಿಯವರೂ ಉಲ್ಲೇಖನೀಯ ಕ್ರೀಡಾಪಟು.

ವಾಲಿಬಾಲ್ ಕ್ರೀಡೆ ಜಿಲ್ಲೆಯ ಮತ್ತೊಂದು ಪ್ರಮುಖ ಕ್ರೀಡೆಯಾಗಿದೆ. ಈ ಆಟದ ಪ್ರಮುಖ ವ್ಯಕ್ತಿಯಾದ ತಮ್ಮಣ್ಣಗೌಡ ರಾಷ್ಟ್ರೀಯ ವಾಲಿಬಾಲ್ ತಂಡದಲ್ಲಿ ಕರ್ನಾಟಕವನ್ನು ಪ್ರತಿನಿಧಿಸಿ ಅನೇಕ ಬಾರಿ ಭಾಗವಹಿಸಿದ್ದಾರೆ. ಇದೇ ಜಿಲ್ಲೆಯವರಾದ ಎಂ.ಚಂದ್ರಕುಮಾರ್ ಉತ್ತಮ ವಾಲಿಬಾಲ್ ಪಟುವಾಗಿದ್ದು, ರಾಷ್ಟ್ರ ಮಟ್ಟದ ಖ್ಯಾತಿ ಗಳಿಸಿದ್ದಾರಲ್ಲದೇ, ಅಖಿಲ ಭಾರತ ವಾಲಿಬಾಲ್ ಆಯ್ಕೆ ಸಮಿತಿಯ ಸದಸ್ಯರಾಗಿದ್ದಾರೆ. ಮತ್ತೊಬ್ಬ ವಾಲಿಬಾಲ್ ಪ್ರೇಮಿ ಹಾಗೂ ರಾಷ್ಟ್ರ ಮಟ್ಟದ ಖ್ಯಾತಿವೆತ್ತ ಪಟು ಎಂ.ಎಸ್.ಮಾದೇಗೌಡರು ಇದೇ ಜಿಲ್ಲೆಯವರು. ಇವರಲ್ಲದೇ ನಾಗಮಂಗಲದ ಬೆಟ್ಟೇಗೌಡ, ಲಕ್ಷ್ಮೀಕಾಂತ, ಬಿ.ಕೆ. ಸಿದ್ಧಲಿಂಗಯ್ಯ, ವೈ.ಎನ್.ಬಾಬು, ಮಹದೇವ ಪ್ರಸಾದ್, ಹನಕೆರೆ ಮರಿಗೌಡ, ರವಿಶಂಕರೇಗೌಡ, ಇವರೆಲ್ಲ ವಾಲಿಬಾಲ್ ಪಟುಗಳಾಗಿರುತ್ತಾರೆ.

ಕಬ್ಬಡ್ಡಿ ಸಹ ಮತ್ತೊಂದು ಜನಪ್ರಿಯ ಕ್ರೀಡೆ. ಮಂಡ್ಯದ ಕಬಡ್ಡಿ ತಂಡ ಸಾಕಷ್ಟು ಖ್ಯಾತಿವೆತ್ತಿದೆ. ಚಾಮುಂಡೇಶ್ವರಿ ಸಕ್ಕರೆ ಕಾರ್ಖಾನೆಯ ಚೆನ್ನಯ್ಯ ಹಲವಾರು ಬಾರಿ ರಾಜ್ಯ ತಂಡದ ನಾಯಕರಾಗಿದ್ದಾರೆ. ಮತ್ತೊಬ್ಬ ಜನಪ್ರಿಯ ಕಬಡ್ಡಿ ಪಟು ಕೃಷ್ಣರಾವ್ ಉತ್ತಮ ನೃತ್ಯ ಕಲಾವಿದರೂ ಆಗಿರುತ್ತಾರೆ. ಇವರ ಪ್ರತಿಭೆಯಿಂದಲೇ ಮಂಡ್ಯ ಜಿಲ್ಲೆ ಅಂಕೋಲಾದಲ್ಲಿ ನಡೆದ ರಾಷ್ಟ್ರಮಟ್ಟದ ಪಂದ್ಯದಲ್ಲಿ ಜಯಗಳಿಸಿತು. ಶಾಸಕ ಎಂ.ಎಸ್. ಆತ್ಮಾನಂದ ಸಹ ಖ್ಯಾತಿವೆತ್ತ ಕಬಡ್ಡಿ ಪಟು. ವಕೀಲರಾದ ಜಗದೀಶ್ ಚಂದ್ರ ಕರ್ನಾಟಕ ರಾಜ್ಯ ತಂಡಕ್ಕೆ ಜಿಲ್ಲೆಯಿಂದ ಆಯ್ಕೆಯಾದ ಪ್ರಥಮ ಕಬಡ್ಡಿಪಟು. ಇವರಲ್ಲದೇ ಎಚ್.ಎಸ್.ಸಿದ್ಧಯ್ಯ ಹಾಗೂ ಹಿಟ್ಟನಹಳ್ಳಿಯ ಎಚ್.ವೀರಣ್ಣಗೌಡರು ರಾಷ್ಟ್ರಮಟ್ಟದ ಕ್ರೀಡಾಪಟುಗಳಾಗಿರುತ್ತಾರೆ. ಪಣಕನಹಳ್ಳಿ ಸೋಮಶೇಖರ್ ಸ್ವತಃ ಉತ್ತಮ ಕಬಡ್ಡಿ ಪಟುವಾಗಿದ್ದು, ಮಂಡ್ಯದಲ್ಲಿ ಅನೇಕ ರಾಷ್ಟ್ರಮಟ್ಟದ ಕ್ರೀಡಾ ಪಂದ್ಯಾವಳಿಗಳನ್ನು ನಡೆಸಿದ್ದಾರೆ. ಇವರ ಮಾರ್ಗದರ್ಶನದಲ್ಲಿ ೧೯೮೬ರಲ್ಲಿ ಮಂಡ್ಯದಲ್ಲಿ ರಾಷ್ಟ್ರೀಯ ಮಹಿಳಾ ಕಬಡ್ಡಿ ಪಂದ್ಯಾವಳಿ ಏರ್ಪಾಡಾಗಿದ್ದಿತು.

ಕಬಡ್ಡಿಯ ನಂತರದ ಜನಪ್ರಿಯ ಆಟವೆಂದರೆ ಫುಟ್‌ಬಾಲ್. ಮಂಡ್ಯ ನಗರದವರಾದ ನಾಗೇಗೌಡ ರಾಷ್ಟ್ರೀಯ ತಂಡದ ಆಟಗಾರರಾಗಿದ್ದರೆ, ಮಲ್ಲಿಗೆರೆಯ ಮಾದಪ್ಪ, ಸಿದ್ಧಯ್ಯ ಹಾಗೂ ಚಂದ್ರು ಕಲಕತ್ತಾದಲ್ಲಿ ನಡೆದ ರಾಷ್ಟ್ರೀಯ ಫುಟ್‌ಬಾಲ್ ಪಂದ್ಯದಲ್ಲಿ ಚಿನ್ನದ ಪದಕ ಪಡೆದಿರುತ್ತಾರೆ. ಬ್ರಹ್ಮಾನಂದ ಹಾಗೂ ವೆಂಕಟ ಅವರೂ ಖ್ಯಾತ ಫುಟ್‌ಬಾಲ್ ಆಟಗಾರರಾಗಿದ್ದು, ಅಖಿಲ ಭಾರತ ಸಂತೋಷ ಟ್ರೋಫಿ ಪಂದ್ಯಾವಳಿಯಲ್ಲಿ ಭಾಗವಹಿಸಿರುತ್ತಾರೆ.

ಜಿಲ್ಲೆಯ ಜನಸಾಮಾನ್ಯರ ಮತ್ತೊಂದು ಜನಪ್ರಿಯ ಕ್ರೀಡೆ ಕುಸ್ತಿ. ಶಾರೀರಿಕ ಸಂಪತ್ತನ್ನು ವೈಜ್ಞಾನಿಕವಾಗಿ ಬೆಳೆಸಿಕೊಂಡು ಅದನ್ನು ನಿಯಮಬದ್ಧವಾಗಿ ಉಪಯೋಗಿಸಿ ಎದುರಾಳಿಯನ್ನು ಸೋಲಿಸುವ ಸಾಮರ್ಥ್ಯವೇ ಕುಸ್ತಿ. ಚುರುಕುತನ, ಶಿಸ್ತು, ಸಹನೆ ಹಾಗೂ ಸಕಾಲಿಕ ನಿರ್ಧಾರ ಈ ಆಟವನ್ನು ರೂಪಿಸುತ್ತವೆ. ಜಿಲ್ಲೆಯ ಗಂಜಾಂ ಕುಸ್ತಿಪಟುಗಳಿಗೆ ಪ್ರಸಿದ್ಧಿಯಾದ ಸ್ಥಳ. ಇಲ್ಲಿನ ರಾಜೇಗೌಡ ಮತ್ತು ಶ್ರೀ ಕಂಠೇಗೌಡ ಉತ್ತಮ ಕುಸ್ತಿಪಟುಗಳು. ಅಲ್ಲದೇ ಪಾಂಡವಪುರ ತಾಲೂಕಿನ ಸೀತಾಪುರದ ಶ್ರೀನಿವಾಸ ಗೌಡ ಹಾಗೂ ರಾಮಶೆಟ್ಟಿ, ಹಳೇಬೂದನೂರಿನ ಉಮೇಶ್, ಹರೀಶ್, ಮತ್ತು ಚನ್ನೇಗೌಡ ರಾಷ್ಟ್ರಮಟ್ಟದ ಜೂನಿಯರ್ ಕುಸ್ತಿ ಸ್ಪರ್ಧೆಯಲ್ಲಿ ಭಾಗವಹಿಸಿದ್ದರು.

### ಕ್ರೀಡಾರಂಗಕ್ಕೆ ಮೇಲುಕೋಟೆಯ ಕೊಡುಗೆ

ಮೇಲುಕೋಟೆಯ ನಿವಾಸಿಗಳು ಸ್ವಾಭಾವಿಕವಾಗಿ ಹಾಗೂ ನೈಸರ್ಗಿಕವಾಗಿ ಕಷ್ಟಜೀವಿಗಳಾಗಿದ್ದರು. ಪ್ರತೀ ದಿನ ತಮ್ಮ ಊರಿನಿಂದ ಬೆಟ್ಟವಿಳಿದು ಬೆಟ್ಟದ ಬುಡದಲ್ಲಿನ ಕೆರೆಯಲ್ಲಿ ಈಜಾಡಿ, ಅಹ್ನಿಕಗಳನ್ನು ಮುಗಿಸಿಕೊಂಡು ಪುನಃ ಬೆಟ್ಟಹತ್ತಿ ತಮ್ಮ ದೈನಂದಿನ ಚಟುವಟಿಕೆಗಳಲ್ಲಿ ತೊಡಗಬೇಕಾಗಿದ್ದುದರಿಂದ ಈ ದೈಹಿಕ ಕಾಯಕ ಅನಿವಾರ್ಯವಾಗಿತ್ತು. ಈ ಶತಮಾನದ ಆದಿಯಲ್ಲಿ ನೌಕರಿಯನ್ನರಸಿ ಇಲ್ಲಿಂದ ಬೆಂಗಳೂರು, ಮೈಸೂರು ಹಾಗೂ ಮದರಾಸುಗಳಿಗೆ ವಲಸೆ ಹೋದ ಈ ಮಂದಿ ತಮ್ಮ ದೈಹಿಕ ಚಟುವಟಿಕೆಗಳಿಗೆ ಟೆನ್ನಿಸ್, ವಾಲಿಬಾಲ್, ಬಾಸ್ಕೆಟ್‌ಬಾಲ್, ಹಾಕಿ ಮುಂತಾದ ವಿವಿಧ ಕ್ರೀಡೆಗಳನ್ನು ಆಯ್ಕೆ ಮಾಡಿಕೊಂಡು ರಾಜ್ಯ ಹಾಗೂ ರಾಷ್ಟ್ರ ಮಟ್ಟದಲ್ಲಿ ಖ್ಯಾತರಾದರು. ಅವರಲ್ಲಿ ಪ್ರಮುಖರ ಪರಿಚಯವನ್ನು ಮುಂದೆ ಮಾಡಿಕೊಡಲಾಗಿದೆ.

೧. ಎಸ್.ಎ. ಶ್ರೀನಿವಾಸನ್ ಅವರು ರಾಜ್ಯ ಕ್ರಿಕೆಟ್ ಸಂಸ್ಥೆಯ ಅಧ್ಯಕ್ಷರಾಗಿದ್ದು, ಅವರ ಸ್ಮರಣಾರ್ಥ ಇಂದಿಗೂ ಸ್ಪರ್ಧೆ ನಡೆಯುತ್ತದೆ.

೨. ಡಿ. ಎಸ್. ಮೂರ್ತಿ ಭಾರತೀಯ ಹಾಕಿ ತಂಡದ ಮ್ಯಾನೇಜರಾಗಿ ಸೇವೆ ಸಲ್ಲಿಸಿರುತ್ತಾರೆ. ಪ್ರಸ್ತುತ ಅವರು ಕರ್ನಾಟಕ ಹಾಕಿ ಸಂಸ್ಥೆಯ ಅಧ್ಯಕ್ಷರೂ, ಭಾರತೀಯ ಹಾಕಿ ಒಕ್ಕೂಟದ ಹಾಗೂ ಕರ್ನಾಟಕ ಒಲಿಂಪಿಕ್ ಸಂಸ್ಥೆ ಉಪಾಧ್ಯಕ್ಷರೂ ಆಗಿರುತ್ತಾರೆ.

೩. ಎಂ.ಎ. ಸೀತಾ, ಎಂ.ಎ. ಶಕುಂತಲಾ ಹಾಗೂ ಎಂ.ಎ.ತಂಗಾ ಇವರು ಬಾಸ್ಕೆಟ್‌ಬಾಲ್ ಸ್ಪರ್ಧೆಯಲ್ಲಿ ರಾಜ್ಯವನ್ನು ಪ್ರತಿನಿಧಿಸಿದ್ದಾರೆ. ಇವರು ೧೯೬೦ರ ದಶಕದವರೆಗೆ ವೈ.ಎಂ.ಸಿ.ಎ. ಸಂಸ್ಥೆಯ ಪ್ರಮುಖ ಸದಸ್ಯರಾಗಿದ್ದರು. ಶಕುಂತಲಾ ಅವರು ಸರಕಾರಿ ದೈಹಿಕ ಶಿಕ್ಷಣ ಕಾಲೇಜಿನ ಪ್ರಿನ್ಸಿಪಾಲರಾಗಿ ನಿವೃತ್ತರಾದರು.

೪. ಎಂ.ಕೆ. ಶ್ರೀರಂಗಮ್ಮ ಅವರು ೧೯೬೦ರ ದಶಕದವರೆಗೆ ಬಾಸ್ಕೆಟ್‌ಬಾಲ್ ಆಟದಲ್ಲಿ ಮೈಸೂರು ವಿಶ್ವವಿದ್ಯಾಲಯವನ್ನು ಪ್ರತಿನಿಧಿಸಿದರು.

೫. ವಿಶ್ವದ ಹಲವೆಡೆ ಖ್ಯಾತರಾಗಿರುವ ಐ.ಎ.ಚಾರ್, ಅವರು ಭಾರತದ ಕ್ರೀಡಾ ಜಗತ್ತಿನಲ್ಲಿ ಪ್ರತ್ಯೇಕ ಸ್ಥಾನಗಳಿಸಿದ್ದಾರೆ. ಕ್ರೀಡಾ ವೈದ್ಯಕೀಯದಲ್ಲಿ ಹಾಗೂ ಅಂಗವಿಕಲ ಮಕ್ಕಳಿಗೆ ಮನೋರಂಜನೆ ನೀಡುವಲ್ಲಿ ಪ್ರಾವೀಣ್ಯತೆ ಪಡೆದಿರುತ್ತಾರೆ. ಕ್ರೀಡೆ ಹಾಗೂ ಶೈಕ್ಷಣಿಕ ಮನಃಶಾಸ್ತ್ರ ವಿಷಯಗಳಲ್ಲಿ ಭಾರತದಲ್ಲೇ ಅಲ್ಲದೇ ಡೆನ್ಮಾರ್ಕ್. ಬೆಲ್ಜಿಯಂ, ಹಾಲೆಂಡ್, ಸ್ಕಾಟ್‌ಲೆಂಡ್, ಹಾಗೂ ಇಂಗ್ಲೆಂಡ್‌ಗಳಲ್ಲಿಯೂ ಬೋಧನಾನುಭವ ಪಡೆದಿರುತ್ತಾರೆ.

೬. ಎಂ.ಎ. ಶ್ರೀನಿವಾಸನ್ (ಸೇತು)ಅವರು ೧೯೬೦ನೇ ದಶಕದಲ್ಲಿ ಉತ್ತಮ ವಾಲಿಬಾಲ್ ಪಟುವಾಗಿದ್ದು, ಮೈಸೂರು ವಿಶ್ವವಿದ್ಯಾಲಯವನ್ನು ಪ್ರತಿನಿಧಿಸಿದ್ದರು.

೭. ಹಾಕಿ ಆಟದ ಖ್ಯಾತ ಆಟಗಾರ ಎಂ.ಎ. ಚೆಲ್ಲು ೧೯೫೦ನೇ ದಶಕದಲ್ಲಿ ರಾಜ್ಯವನ್ನು ಪ್ರತಿನಿಧಿಸಿದ್ದರು.

೮. ವೈ.ಎಂ.ಎಂ.ಎ. (Young Men Mandya Association) ಸದಸ್ಯ ಎಂ.ಸಿ. ಶ್ರೀನಿವಾಸನ್, ಎಂ.ಎ.ದ್ವಾರಕಿ ಎಂ.ಎ.ಶ್ರೀನಾಥ, ಎನ್.ಎಸ್.ಶ್ರೀನಿವಾಸನ್, ಎಂ.ಜಿ. ರಾಮಾನುಜಂ, ಎಂ.ಎ.ಪಾರ್ಥಸಾರಥಿ ಇವರು ಮೈಸೂರು ರಾಜ್ಯ ಹಾಗೂ ವಿಶ್ವವಿದ್ಯಾಲಯದ ಉತ್ತಮ ಬಾಸ್ಕೆಟ್‌ಬಾಲ್ ಪಟುಗಳಾಗಿದ್ದರು.

೯. ರಾಷ್ಟ್ರಮಟ್ಟದಲ್ಲಿ ಖ್ಯಾತಿ ಹೊಂದಿದ ಬಾಸ್ಕೆಟ್‌ಬಾಲ್ ಪಟು ಎಸ್. ನರಸಿಂಹರಾಜನ್ ಮೈಸೂರು ವಿಶ್ವವಿದ್ಯಾಲಯ,ಹಾಗೂ ರಾಜ್ಯಗಳನ್ನು ರಾಷ್ಟ್ರಮಟ್ಟದಲ್ಲಿ ಪ್ರತಿನಿಧಿಸಿದ್ದೇ ಅಲ್ಲದೇ ಭಾರತೀಯ ರೈಲ್ವೆ ಬಾಸ್ಕೆಟ್‌ಬಾಲ್ ತಂಡಕ್ಕೆ ಪ್ರಥಮ ರಾಷ್ಟ್ರೀಯ ಚಾಂಪಿಯನ್‌ಷಿಪ್ ದೊರಕಿಸಿಕೊಟ್ಟರು. ತಮ್ಮ ಕ್ರೀಡಾ ಸಾಮರ್ಥ್ಯದಿಂದ ರಾಷ್ಟ್ರೀಯ ಬ್ಯಾಸ್ಕೆಟ್‌ಬಾಲ್ ಭೂಪಟದಲ್ಲಿ ರಾಜ್ಯಕ್ಕೆ ಚಿರಸ್ಥಾಯಿಯಾದ ಸ್ಥಾನಗಳಿಸಿಕೊಟ್ಟರು. ೧೯೬೦ರ ದಶಕದವರೆವಿಗೂ ಖ್ಯಾತವಾಗಿದ್ದ ಯಂಗ್ ಮೆನ್ ಮಂಡ್ಯ ಆಸೋಸಿಯೇಷನ್ನಿನ ರೂವಾರಿಯಾಗಿದ್ದರು.

೧೦. ಎಂ.ಎ.ಕೃಷ್ಣಸ್ವಾಮಿಯವರು ರಾಜ್ಯದ ಖ್ಯಾತ ಟೇಬಲ್ ಟೆನ್ನಿಸ್ ಪಟು. ೧೯೮೦ರ ದಶಕದವರೆಗೆ ಇವರು ಮೈಸೂರು ರಾಜ್ಯ ಹಾಗೂ ವಿಶ್ವವಿದ್ಯಾಲಯಗಳನ್ನು ಸತತವಾಗಿ ಪ್ರತಿನಿಧಿಸಿದರು.

೧೯೯೭ರಲ್ಲಿ ನಡೆದ ನ್ಯಾಷನಲ್ ಗೇಮ್ಸ್‌ನಲ್ಲಿ ಕಿವುಡರ ವಿಭಾಗದಲ್ಲಿ ರಾಷ್ಟ್ರೀಯ ಛಾಂಪಿಯನ್‌ಷಿಪ್ ಪಡೆದ ರಜನಿ, ಇದೇ ವರ್ಷ ಕೋಪನ್ ಹೆಗನ್ ನಲ್ಲಿ ನಡೆದ ೧೮ನೇ ವಿಶ್ವ ಆಟೋಟ ಸ್ಪರ್ಧೆಯಲ್ಲಿ ಕಿವುಡರ ವಿಭಾಗದಲ್ಲಿ ಭಾರತದನ್ನು ಪ್ರತಿನಿಧಿಸಿ, ಚಿನ್ನದ ಪದಕಗಳಿಸಿದರು. ಇವರು ಕರ್ನಾಟಕದಿಂದ ಭಾರತವನ್ನು ಪ್ರತಿನಿಧಿಸಿ, ರಾಷ್ಟ್ರೀಯ ಛಾಂಪಿಯನ್ ಆದ ಪ್ರಪ್ರಥಮ ಮಹಿಳೆ. ಇದೇ ರೀತಿ ಉತ್ತಮ ಹಾಕಿ ಆಟಗಾರ ಎಂ.ರಾಮು, ಕ್ರಿಕೆಟ್ ಪಟು, ಎಂ.ಎ.ರಾಮಕೃಷ್ಣ ರಾಜ್ಯ ಮಟ್ಟದ ಬ್ಯಾಟ್‌ಮಿಂಟನ್ ಆಟಗಾರ್ತಿ ಭಾರತಿ ಖ್ಯಾತನಾಮರು.

## ಜಿಲ್ಲಾ ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ

ಈ ಇಲಾಖೆ ಜಿಲ್ಲಾ ಪಂಚಾಯತಿಯ ಆಡಳಿತ ವ್ಯಾಪ್ತಿಗೊಳಪಟ್ಟಿದ್ದು, ಗ್ರಾಮಾಂತರ ಪ್ರದೇಶದಲ್ಲಿ ಕ್ರೀಡೆ ಮತ್ತು ಸಾಂಸ್ಕೃತಿಕ ಚಟುವಟಿಕೆಗಳನ್ನು ನಡೆಸಲು ಯುವಜನರನ್ನು ಸಂಘಟಿಸಿ, ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಇವರ ಸೇವೆಯನ್ನು ಅಳವಡಿಸಿ, ರಚನಾತ್ಮಕ ಗ್ರಾಮಾಭಿವೃದ್ಧಿ ಕಾರ್ಯಗಳಲ್ಲಿ ತೊಡಗಿಸಿಕೊಳ್ಳಲು ಅನುವಾಗುವಂತೆ ಯೋಜನೆಗಳನ್ನು ರೂಪಿಸಿ, ಕಾರ್ಯಗತಗೊಳಿಸುತ್ತಿದೆ. ಈ ಯೋಜನೆಗಳಲ್ಲಿ ಯುವ ಸಂಘಗಳ ಸ್ಥಾಪನೆ, ಕ್ರೀಡಾ ಕಾರ್ಯಕ್ರಮಗಳು, ಸಾಂಸ್ಕೃತಿ ಕಾರ್ಯಕ್ರಮಗಳು, ಯುವಜನ ತರಬೇತಿ ಕಾರ್ಯಕ್ರಮಗಳು, ಸ್ವಯಂ ಉದ್ಯೋಗದ ಬಗ್ಗೆ ಯುವ ಪ್ರೇರಣಾ ತರಬೇತಿ ಶಿಬಿರಗಳು ಹಾಗೂ ಸಾಹಸ ಶಿಬಿರಗಳು ಸೇರಿರುತ್ತವೆ.

೧೯೯೩–೯೪ನೇ ಸಾಲಿನಿಂದ ಮಂಡ್ಯ ನಗರದಲ್ಲಿ ಜಿಲ್ಲಾ ಪಂಚಾಯತ್ ವತಿಯಿಂದ ಇಲಾಖೆಯ ಮುಖಾಂತರ ಕ್ರೀಡಾ ನಿಲಯ ನಡೆಯುತ್ತಿದ್ದು, ಅಥ್ಲೆಟಿಕ್ಸ್ ಮತ್ತು ಫುಟ್‌ಬಾಲ್ ವಿಭಾಗಗಳಲ್ಲಿ ವಿದ್ಯಾರ್ಥಿಗಳಿಗೆ ನುರಿತ ತರಬೇತುದಾರರಿಂದ ವೈಜ್ಞಾನಿಕ ರೀತಿಯಲ್ಲಿ ಪ್ರತೀ ಬೆಳಗ್ಗೆ ಹಾಗೂ ಸಂಜೆ ತರಬೇತಿ ನೀಡಲಾಗುತ್ತಿದೆ. ಇವರ ಶೈಕ್ಷಣಿಕ ಅಭಿವೃದ್ಧಿಗೆ ಇವರನ್ನು ನಗರದ ವಿವಿಧ ಪ್ರೌಢಶಾಲೆಗಳಿಗೂ ಸೇರಿಸಲಾಗಿದೆ.

ಮಂಡ್ಯದ ಸರ್.ಎಂ.ವಿ. ಕ್ರೀಡಾಂಗಣದ ಆವರಣದಲ್ಲಿ ಒಂದು ಮಲ್ಟಿ ಜಿಮ್ ಪ್ರಾರಂಭಗೊಂಡಿದ್ದು, ಇದರಲ್ಲಿ ೧೬ ಸ್ಟೇಷನ್‌ಗಳ ಮಲ್ಟಿಜಿಮ್ ಉಪಕರಣಗಳು ಹಾಗೂ ಎರಡು ವಾಲಿಬಾಲ್ ಕೋರ್ಟುಗಳನ್ನು ನಿರ್ಮಿಸಲಾಗಿದೆ.

ಬೇಸಿಗೆ ತರಬೇತಿ ಶಿಬಿರ, ಕ್ರೀಡಾ ಶಾಲೆ/ವಿಭಾಗಕ್ಕೆ ಆಯ್ಕೆ ಶಿಬಿರ, ದಸರಾ ಕ್ರೀಡಾ ಕೂಟ, ಗ್ರಾಮಾಂತರ ಕ್ರೀಡಾಕೂಟ, ಮಹಿಳಾ ಕ್ರೀಡಾಕೂಟ, ಯುವಜನ ಮೇಳ, ಇತ್ಯಾದಿ ಕಾರ್ಯಕ್ರಮಗಳನ್ನು ಇಲಾಖೆ ಹಮ್ಮಿಕೊಂಡಿದೆ.

**ಕ್ರೀಡಾಂಗಣಗಳು:** ಮಂಡ್ಯದಲ್ಲಿರುವ ಸರ್. ಎಂ.ವಿ.ಕ್ರೀಡಾಂಗಣ ಪ್ರಸ್ತುತ ಕಾರ್ಯಗತವಾಗಿದ್ದು, ೧೦,೦೦೦ ಮಂದಿ ಕೂಡುವ ಸೌಕರ್ಯ ಹೊಂದಿದೆ. ಮದ್ದೂರಿನಲ್ಲಿ ಒಂದು ಒಳಾಂಗಣ ಕ್ರೀಡಾಂಗಣ ಸ್ಥಾಪಿತವಾಗಿದೆ. ಕೃಷ್ಣರಾಜಪೇಟೆಯಲ್ಲಿ ಒಂದು ಕ್ರೀಡಾಂಗಣ ರಚಿತವಾಗಿದೆ, ಹಾಗೂ ಶ್ರೀರಂಗಪಟ್ಟಣದ ಕ್ರೀಡಾಂಗಣ ಮುಕ್ತಾಯ ಹಂತದಲ್ಲಿದೆ.

**ಪ್ರಶಸ್ತಿಗಳು:** ಗ್ರಾಮೀಣ ಪ್ರತಿಭೆಯನ್ನು ಗುರುತಿಸಿ, ಅದನ್ನು ಬೆಳಕಿಗೆ ತರವ ಉದ್ದೇಶದಿಂದ ಕ್ರೀಡಾ ಇಲಾಖೆ, ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿ ವಿವಿಧ ಕ್ಷೇತ್ರಗಳ ಪ್ರತಿಭಾವಂತರಿಗೆ ಪ್ರಶಸ್ತಿ ನೀಡಿ ಪುರಸ್ಕರಿಸಿದೆ. ಇಲಾಖಾ ವತಿಯಿಂದ ಮೇಲಿನ ಪ್ರಶಸ್ತಿ ಪಡೆದವರ ಪಟ್ಟಿಯನ್ನು ಈ ಮುಂದೆ ನೀಡಲಾಗಿದೆ. ಮಂಡಿಹಳ್ಳಿ ನಾಗರಾಜ (೧೯೮೭), ರಾಜ್ಯ ಪ್ರಶಸ್ತಿ: ನಾಗಣ್ಣಗೌಡ (೧೯೮೭) ರಾಜ್ಯ ಪ್ರಶಸ್ತಿ: ಜೆ. ನಂಜುಂಡಯ್ಯ (೧೯೮೯) ರಾಜ್ಯ ಪ್ರಶಸ್ತಿ ಮತ್ತು (೧೯೯೫) ರಾಷ್ಟ್ರ ಪ್ರಶಸ್ತಿ: ಟಿ.ಎಲ್.ನಾಗರಾಜ್ (೧೯೯೧) ರಾಜ್ಯ ಪ್ರಶಸ್ತಿ ಮತ್ತು (೧೯೯೨) ರಾಷ್ಟ್ರಪ್ರಶಸ್ತಿ: ಮಹದೇವು (೧೯೯೩) ರಾಜ್ಯ ಪ್ರಶಸ್ತಿ: ತೇಜಕುಮಾರಿ (೧೯೯೬) ರಾಜ್ಯ ಪ್ರಶಸ್ತಿ ಮತ್ತು (೧೯೯೮) ರಾಷ್ಟ್ರಪ್ರಶಸ್ತಿ: ಕೆ.ಎನ್. ಮಹದೇವು (೧೯೯೭) ರಾಜ್ಯಪ್ರಶಸ್ತಿ ಹಾಗೂ ಮಂಗಲ ಎಂ. ಯೋಗೀಶ್ (೧೯೯೮) ರಾಜ್ಯಪ್ರಶಸ್ತಿ.

ಆಧಾರ: ಜಿಲ್ಲಾ ಯುವಜನ ಕೇಂದ್ರ, ಮಂಡ್ಯ.